كشف مكائد الشياطين في اضلال الناس

ಆದಮರ ಸಂತತಿಗಳನ್ನು ಪಥಭ್ರಷ್ಟಗೊಳಿಸುವತ್ತ

# ಶೈತಾನನ

ತಂತ್ರಗಳು, ವಂಚನೆ,
ಕಾರ್ಯಸಾಧನೆಯ ವಿಧಾನಗಳ

# ಅನಾವರಣ

ಮತ್ತು ಸ್ವಯಂ ನಮ್ಮನ್ನು
ಮತ್ತು ನಮ್ಮ ಕುಟುಂಬವನ್ನು
ಆ ಶಾಪಗ್ರಸ್ತನಿಂದ
ರಕ್ಷಿಸಿಕೊಳ್ಳುವ ಮಾರ್ಗಗಳು.

ವಿಷಯ ಸಂಗ್ರಹಣೆ: ಶವಾನ ಅಬ್ದುಲ್‌ಅಝೀಝ್
ಅನುವಾದ: ಮುಹಮ್ಮದ್ ಹಾರಿಸ್ ಸಂದಾವರ

ಪ್ರಕಟಣೆ:
Quran Sunnah Educational Programs
www.qsep.com

كشف مكائد الشياطين في اضلال الناس

ಆದಮರ(عليه السلام) ಸಂತತಿಯನ್ನು ಪಥಭ್ರಷ್ಟಗೊಳಿಸುವತ್ತ

# **ಶೈತಾನನ** ತಂತ್ರಗಳು, ವಂಚನೆ,

# ಕಾರ್ಯಸಾಧನೆಯ ವಿಧಾನಗಳ **ಅನಾವರಣ**

ಮತ್ತು ಸ್ವಯಂ ನಮ್ಮನ್ನು ಮತ್ತು ನಮ್ಮ ಕುಟುಂಬವನ್ನು

ಆ ಶಾಪಗ್ರಸ್ತನಿಂದ ರಕ್ಷಿಸಿಕೊಳ್ಳುವ ಮಾರ್ಗಗಳು.

**ವಿಷಯ ಸಂಗ್ರಹಣೆ: ಶವಾನ ಅಬ್ದುಲ್‌ಅಝೀಝ್**
**ಅನುವಾದ: ಮುಹಮ್ಮದ್ ಹಾರಿಸ್ ನಂದಾವರ**

**ಪ್ರಕಟಣೆ:**

**Quran Sunnah Educational Programs**

www.qsep.com

**Distributors**

**Manhaj-Al-Ambiya Call and Guidance Centre**
C-31, IInd Floor, Al-Rahaba Plaza, Nellikai Road, Mangalore.
Tel : 824 4282220.

**Manhaj-Al-Ambiya, CD/DVD and Book Store**
Near Ibrahim Kaleel Masjid, Nellikai Road, Mangalore
Tel: 824 4263068

email: sksmlibrary@gmail.com

# ಪುಸ್ತಕ ಕ್ರಮಣಿಕೆ


ಪುಸ್ತಕದ ಕುರಿತು..........1

**ಶೈತಾನ್ ಮತ್ತು ಆತನ ಪರಾಜಯದ ಅಪಮಾನಜನಕ ವೃತ್ತಾಂತ ..........3**

ಶೈತಾನ್ ಯಾರು? ..........5

ಶೈತಾನನ ಸೃಷ್ಟಿಯ ಹಿಂದಿರುವ ವಿವೇಕ..........7

ಶೈತಾನನ ಕಿಬ್ರ್ ಮತ್ತು ಕುಫ್ರ್..........11

ಅಂತ್ಯದಿನದವರೆಗೆ ಜೀವಿಸಬೇಕೆನ್ನುವ ಇಬ್ಲೀಸನ ಕೋರಿಕೆಯನ್ನು ಯಾಕೆ ಮನ್ನಿಸಲಾಯ್ತು?.14

ಇಬ್ಲೀಸ್ ಸನ್ಮಾರ್ಗವಂಚಿತನಾಗಲು ಅರ್ಹನಾಗಿದ್ದನು..........17

**ಶೈತಾನನ ತಂತ್ರಗಳು ಹಾಗೂ ಸಂಚುಗಳು ..........19**

ಮಾನವ ಸಮುದಾಯವನ್ನು ಪಥಭ್ರಷ್ಟಗೊಳಿಸಲು ಶೈತಾನನಿಗೆ ಯಾಕಿಷ್ಟು ತವಕ? ..........21

ಪಾಪಕೃತ್ಯಗಳನ್ನೆಸಗುವಂತೆ ಮನುಷ್ಯರನ್ನು ಬಲವಂತ ಪಡಿಸುವ ಶಕ್ತಿಯನ್ನು ಶೈತಾನನು ಹೊಂದಿಲ್ಲ..........22

ಶೈತಾನನ್ನು ನೀನು ಸೋಲಿಸಬಲ್ಲೆ..........25

ಶೈತಾನನ ಕಾರ್ಯವಿಧಾನಗಳು..........26

ದಣಿವರಿಯದ ಶೈತಾನ್..........31

ಶೈತಾನನು ಹಂತಹಂತವಾಗಿ ಮನುಷ್ಯನನ್ನು ಅಲ್ಲಾಹನ ಆಜ್ಞಾಭಂಗದತ್ತ ಮುನ್ನಡೆಸುತ್ತಾನೆ..........34

ದೌರ್ಬಲ್ಯಗಳ ಮೂಲಕ ವ್ಯಕ್ತಿಯ ಹೃದಯವನ್ನು ಪ್ರವೇಶಿಸುವ ಶೈತಾನ್..........37

ವಸ್‌ವಾಸ್‌ನ 3 ಮೂಲಗಳು..........41

ವಸ್‌ವಾಸ್‌ಗಳ ಮಧ್ಯೆ ವ್ಯತ್ಯಾಸ ಗುರುತಿಸುವಿಕೆ..........42

ಒಬ್ಬನು ಅವನ ವಸ್‌ವಾಸ್‌ನ ಕಾರಣಕ್ಕಾಗಿ ಶಿಕ್ಷಿಸಲ್ಪಡುವನೇ?........................................43
ನಶಿಸಿಹೋದ ಮನೆಯಲ್ಲಿ ಶೈತಾನನಿಗೇನು ಕೆಲಸ?......................................................44
ನಿಷಿದ್ಧ ಕಾರ್ಯಗಳನ್ನು ಮನಮೋಹಕವಾಗಿ ಹೆಸರಿಸುವ ಮೂಲಕ ಶೈತಾನನು ಅಸತ್ಯವನ್ನು ಅಂದಗೊಳಿಸಿಯೂ ಮತ್ತು ಪಾಪವನ್ನು ಆಕರ್ಷಕವಾಗಿಸಿಯೂ ತೋರಿಸುತ್ತಾನೆ ................45

ಗಾಯನ ಹಾಗೂ ಸಂಗೀತಗಳ ಮೂಲಕ ಶೈತಾನನು ಜನರ ಹೃದಯ ಮತ್ತು ಆತ್ಮಗಳನ್ನು ಭ್ರಷ್ಟಗೊಳಿಸುತ್ತಾನೆ..............................................................................52
ಜನರು ಧರ್ಮದಲ್ಲಿ ನಿರ್ಲಕ್ಷ್ಯ ಅಥವಾ ಅತಿರೇಕ ಎಸಗುವಂತೆ ಮಾಡಲು ಶೈತಾನನು ಪ್ರಯತ್ನಿಸುತ್ತಾನೆ .....................................................................53
ಅರಿವಿನ ಕೊರತೆಯಿದ್ದರೂ ಅಲ್ಲಾಹನ ಕುರಿತು ತರ್ಕಿಸಿ ಅನಗತ್ಯ ಹೇಳಿಕೆಗಳನ್ನು ನೀಡುವಂತೆ ಶೈತಾನ್ ಮಾನವರನ್ನು ಉತ್ತೇಜಿಸುತ್ತಾನೆ...........................................57
ಶೈತಾನನು ಹುಸಿ ವಾಗ್ದಾನವನ್ನು ನೀಡಿ ಉನ್ನತ ನಿರೀಕ್ಷೆಯನ್ನು ಹುಟ್ಟಿಸುತ್ತಾನೆ................60
ಶೈತಾನನಿಂದಾಗಿ ಜನರು ಅಲ್ಲಾಹನ ಆಜ್ಞೆಗಳನ್ನು ಮರೆಯುತ್ತಾರೆ................................63
ಶೈತಾನ್ ಮತ್ತು ಆತನನ್ನು ಅನುಸರಿಸುವವರ ವಿಧಿ....................................................64

**ಶೈತಾನನ್ನು ದೂರವಿಡಲು ಕುರ್‌ಆನ್ ಮತ್ತು ಸುನ್ನತ್‌ನಲ್ಲಿ ನಿರ್ದೇಶಿಸಲ್ಪಟ್ಟ ವಿಧಾನಗಳು..........................................................................................65**

**1.**ನೇರಮಾರ್ಗದಲ್ಲಿ ಸ್ಥಿರವಾಗಿ ನೆಲೆಗೊಳ್ಳುವುದು.........................................**66**
**2.** ಅಲ್ಲಾಹನಲ್ಲಿ ಅಭಯವನ್ನು ಯಾಚಿಸುವುದು....................................................**68**
**3.** ಧ್ಲಿಕ್ರ್‌ಗಳಲ್ಲಿ ನಿರತರಾಗುವುದು........................................................................**89**
**4.** ಮುಸ್ಲಿಮರ ಪ್ರಧಾನ ಸಮೂಹ (ಜಮಾ'ಅ)ದಲ್ಲಿ ಸ್ಥಿರವಾಗಿ ನೆಲೆಗೊಳ್ಳುವುದು.............**91**
**5.** ಶೈತಾನನ್ನು ಎದುರಿಸುವುದು.............................................................................**92**
**6.** ಶೈತಾನನ ಕುತಂತ್ರಗಳನ್ನು ಅರಿತು ಆತನನ್ನು ಪರಾಭವಗೊಳಿಸುವ ವಿಧಾನಗಳು......**93**
**7.** ಪಶ್ಚಾತ್ತಾಪಪಡುವುದು ಮತ್ತು ಅಲ್ಲಾಹನಲ್ಲಿ ಕ್ಷಮೆ ಯಾಚಿಸುವುದು..........................**94**

بِسْمِ ٱللَّهِ ٱلرَّحْمَٰنِ ٱلرَّحِيمِ

# ಪುಸ್ತಕದ ಕುರಿತು

﴿ إِنَّ ٱلشَّيْطَٰنَ لَكُمْ عَدُوٌّ فَٱتَّخِذُوهُ عَدُوًّا ﴾

**"ನಿಶ್ಚಯವಾಗಿಯೂ, ಶೈತಾನನು ನಿಮ್ಮ ಶತ್ರುವಾಗಿದ್ದಾನೆ.**
**ಆದುದರಿಂದ ಅವನನ್ನು ನಿಮ್ಮ ಶತ್ರುವೆಂದೇ ಪರಿಗಣಿಸಿರಿ"**
**(ಸೂರ ಫಾತಿರ್: 6)**

**ಶೈತಾನನ ಫಿತ್ನವನ್ನು (ಪ್ರಲೋಭನೆ, ಯಾತನೆ, ಪ್ರಯೋಗ) ನಾವು ತಕ್ಕ ರೀತಿಯ ಗಂಭೀರತೆಯೊಂದಿಗೆ ಅರಿತುಕೊಳ್ಳಲಿಕ್ಕಾಗಿ ಅಲ್ಲಾಹನು ಆತನ ಗುರಿ ಹಾಗೂ ಕಪಟೋಪಾಯಗಳನ್ನು ಪವಿತ್ರ ಕುರ್‌ಆನಿನಲ್ಲಿ ಸುಸ್ಪಷ್ಟವಾಗಿ ಬಹಿರಂಗಗೊಳಿಸಿದ್ದಾನೆ. ಅಲ್ಲಾಹನೊಂದಿಗೆ ಅವಿಧೇಯತೆ ತೋರಿಸುವಂತೆ ಮಾನವರಾಶಿಯನ್ನು ಪ್ರೇರೇಪಿಸಬಲ್ಲ ಆತನ ಸಾಮರ್ಥ್ಯದ ಬಗ್ಗೆ ಪ್ರವಾದಿ ﷺ ಪದೇ ಪದೇ ನಮ್ಮನ್ನು ಎಚ್ಚರಿಸಿದ್ದಾರೆ. ಶೈತಾನನ ಕುಯುಕ್ತಿ ಹಾಗೂ ವಂಚನೆಯನ್ನು ನಿಷ್ಠುರವಾಗಿ ಬಯಲುಗೊಳಿಸುತ್ತಾ ಆ ಶಾಪಗ್ರಸ್ತನಿಂದ ರಕ್ಷೆ ಹೊಂದುವ ಮಾರ್ಗೋಪಾಯಗಳನ್ನು ಕೂಡ ಪ್ರವಾದಿಯವರು ﷺ ನಮಗೆ ಬೋಧಿಸಿದ್ದಾರೆ.**

**ಹಾಗಾದರೆ, ಶೈತಾನನ ಕಾಪಟ್ಯತೆ, ತಂತ್ರ ಹಾಗೂ ಉಪಾಯಗಳು ಯಾವ್ಯಾವುದು? ಹೇಗೆ ಆತನು ಮನುಷ್ಯಾತ್ಮವನ್ನು ಪ್ರವೇಶಿಸಿ, ಪಾಪ ಹಾಗೂ ಅತಿಕ್ರಮಗಳತ್ತ ಮನುಷ್ಯನನ್ನು ಕೊಂಡೊಯ್ಯುತ್ತಾನೆ? ಸುಳ್ಳು ಆಶ್ವಾಸನೆಗಳು ಹಾಗೂ ಅತ್ಯಾಶೆಗಳನ್ನು ಹುಟ್ಟಿಸಿ, ಹೃದಯ ಹಾಗೂ ಆತ್ಮಗಳನ್ನು ಭ್ರಷ್ಟಗೊಳಿಸುವಂತಹ ರೀತಿಯಲ್ಲಿ ಶೈತಾನನು ಹೇಗೆ ಮನುಷ್ಯನನ್ನು ಹುರಿದುಂಬಿಸುತ್ತಾನೆ? ಮನುಷ್ಯನನ್ನು ಪಾಪಕೂಪದತ್ತ ತಳ್ಳುವ ಶಕ್ತಿಯನ್ನು ಶೈತಾನನು ಅಧೀನಪಡಿಸಿಕೊಂಡಿದ್ದಾನೆಯೇ? ತನ್ನ ಗುರಿಯನ್ನು**

ಕೈಗೂಡಿಸಿಕೊಳ್ಳುವ ನಿಟ್ಟಿನಲ್ಲಿ ಶೈತಾನನ ಪರಿಧಿಯೆಷ್ಟು? ನಾವು ಶೈತಾನನ್ನು ಸೋಲಿಸಬಲ್ಲವರಾಗಿದ್ದೇವೆಯೇ?.

ಮೇಲಿನ ಈ ಗಂಭೀರ ಪ್ರಶ್ನೆಗಳಿಗೆ ಸವಿಸ್ತಾರವಾಗಿ ಉತ್ತರ ನೀಡುತ್ತಾ ಮತ್ತು ಅಲ್ಲಾಹನು ಶೈತಾನನನ್ನು ಯಾತಕ್ಕಾಗಿ ಸೃಷ್ಟಿಸಿದನು? ಹಾಗೂ ಅಂತ್ಯ ದಿನದವರೆಗೆ ಜೀವಿಸಬೇಕೆನ್ನುವ ಶೈತಾನನ ಕೋರಿಕೆಯನ್ನು ಯಾಕೆ ಸಮ್ಮತಿಸಲಾಯ್ತು? ಎಂಬಿತ್ಯಾದಿ ವಿಷಯಗಳಲ್ಲಿರುವ ಸಂಶಯಗಳನ್ನು ಇನ್ಶಾಅಲ್ಲಾಹ್ ಈ ಪುಸ್ತಕವು ನಿವಾರಿಸಲಿದೆ. ಪರಾಜಯಗೊಂಡ ಶೈತಾನನ ಅಪಮಾನಜನಕ ವೃತ್ತಾಂತ ಹಾಗೂ ಆತನ ಕುಟಿಲೋಪಾಯಗಳಿಗೆ ಬಲಿಯಾಗಿ ನಾಶವಾಗಿ ಹೋದ ಗತಸಮುದಾಯಗಳ ಘೋರ ಚರಿತ್ರೆಯ ಬೆಳಕಿನಲ್ಲಿ ಅಖೀದಕ್ಕೆ (ಮತನಂಬಿಕೆ) ಸಂಬಂಧಿಸಿದಂತಹ ಅಂಶಗಳನ್ನು ಸವಿಸ್ತಾರವಾಗಿ ಪುಸ್ತಕವು ನಿಮ್ಮ ಮುಂದಿಡಲಿದೆ.

ಸ್ವಯಂ ನಮ್ಮನ್ನು ಹಾಗೂ ನಮ್ಮ ಕುಟುಂಬವನ್ನು ಶೈತಾನನಿಂದ ದೂರವಿಡಲು ಕುರ್‌ಆನ್ ಮತ್ತು ಸುನ್ನತ್‌ನಲ್ಲಿ (ಪ್ರವಾದಿಚರ್ಯೆ) ನಿರ್ದೇಶಿಸಲ್ಪಟ್ಟ ಮಾರ್ಗೋಪಾಯಗಳ ಮೇಲೆ ಈ ಪುಸ್ತಕದ ಅಂತಿಮ ಭಾಗವು ಬೆಳಕು ಚೆಲ್ಲಲಿದೆ.

ಪುಸ್ತಕದ ವಿಷಯ ಸಂಗ್ರಹಣೆಗಾಗಿ ಕೆಲವು ಶ್ರೇಷ್ಠ ಅರಬಿಕ್ ಪುಸ್ತಕಗಳನ್ನು ಆಧರಿಸಲಾಗಿದೆ. ಅವುಗಳಲ್ಲಿ ಪ್ರಮುಖವಾದವುಗಳು; ಶೈತಾನ್; ಖುತುವಾತಿಹಿ ವ ಗಾಯತಿಹಿ (ವಾಯಿಲ್ ಉಮರ್ ಅಲಿ ಬಶೀರ್), ಅದವಾತು ಶೈತಾನ್ ಲಿಲ್ ಇನ್ಸಾನ್, ಆಲಮ್ ಅಲ್ ಜಿನ್ನ್, ತಫ್ಸೀರ್ ಅಲ್ ಕಬೀರ್ (ಅಬ್ದುಲ್ ಅಝೀಝ್ ಇಬ್ನ್ ಅಬ್ದುಲ್ಲಾ ಅಲ್ ರಾಜ್ಹಿ), ಅಖೀದ ಅತ್ತೌಹೀದ್ (ಶೈಖ್ ಸಾಲಿಹ್ ಅಲ್ ಫೌಝಾನ್), ತಫ್ಸೀರ್ ಇಬ್ನು ಕಸೀರ್ ಮುಂತಾದವುಗಳು.

ಶೈತಾನನ ಕುಟಿಲೋಪಾಯದ ವಿರುದ್ಧವಾಗಿ ಸೆಣಸಲು ಈ ಪುಸ್ತಕವು ಒಂದು ಸುಲಭ ಅಸ್ತ್ರವಾಗಿ ನಮ್ಮ ಉಪಯೋಗಕ್ಕೆ ಬರಲಿದೆ ಎಂಬ ಆಶಾಭಾವನೆ ನನಗಿದೆ. ಎಲ್ಲಾ ಸಫಲತೆ ಹಾಗೂ ಯಶಸ್ಸು ಅಲ್ಲಾಹನ ಕಡೆಯಿಂದ ಮಾತ್ರವಾಗಿದೆ

ಶವಾನ ಅಬ್ದುಲ್ ಅಝೀಝ್

# ಶೈತಾನ್

ಮತ್ತು

ಆತನ ಪರಾಜಯದ

ಅಪಮಾನಜನಕ ವೃತ್ತಾಂತ

# ಶೈತಾನ್ ಯಾರು?

"ಶೈತಾನ್" ಎನ್ನುವ ಪದದ ಅರ್ಥ ಅಕ್ಷರಶಃ "ದಂಗೆಕೋರ" ಅಥವಾ "ಬಂಡಾಯಗಾರ" ಎಂದಾಗಿದೆ. ಅಲ್ಲಾಹನ ಆಜ್ಞಾನುವರ್ತನೆಯ ಪಥದಿಂದ ಜನರನ್ನು ದಾರಿಗೆಡಿಸುವ ಮತ್ತು ಅವಮರ‍್ಯಾದೆ ತೋರುವ ಮನುಷ್ಯರು ಹಾಗೂ ಜಿನ್ನ್‌ಗಳ ಪೈಕಿಯ ಯಾರೇ ಆದರೂ ಅವರು ಈ ಪದದ ಅರ್ಥ ವಿವರಣೆಯ ಪರಿಧಿಯೊಳಗಿರುತ್ತಾರೆ.

"ಮನುಷ್ಯರು ಹಾಗೂ ಜಿನ್ನ್‌ಗಳ ಪೈಕಿ ಶಯಾತೀನ್‌ಗಳಿರುತ್ತಾರೆ (ಶೈತಾನನ ಬಹುವಚನ)" ಎಂಬ ಅಲ್ಲಾಹನ ವಚನದ ಬಗ್ಗೆ ಪ್ರತಿಕ್ರಿಯಿಸುತ್ತಾ ಕತಾದ(ರಹಿಮಹುಲ್ಲಾಹ್)ರವರು ಹೇಳುತ್ತಾರೆ, "ಜಿನ್ನ್‌ಗಳ ಪೈಕಿ ಶಯಾತೀನ್ ಗಳಿರುತ್ತಾರೆ ಮತ್ತು ಮನುಷ್ಯರ ಪೈಕಿ ಶಯಾತೀನ್‌ಗಳಿರುತ್ತಾರೆ, ಇವರು ಒಬ್ಬರಿನ್ನೊಬ್ಬರಿಗೆ ಸ್ಫೂರ್ತಿಯಾಗಿರುತ್ತಾರೆ" (ಸೂರ ಅನ್‌ಆಮ್:112ರ ತಫ್ಸೀರ್ ಇಬ್ನು ಕಸೀರ್ ವ್ಯಾಖ್ಯಾನದಲ್ಲಿ)

ಸಾಮಾನ್ಯವಾಗಿ "ಇಬ್ಲೀಸ್"ಗೆ ಸಂಬಂಧಿಸಿದಂತೆ ಈ (ಶೈತಾನ್) ಪದವನ್ನು ಉಲ್ಲೇಖಿಸಲಾಗುತ್ತದೆ. ಇಬ್ಲೀಸ್ ಜಿನ್ನ್ ವರ್ಗಕ್ಕೆ ಸೇರಿದವನಾಗಿದ್ದು ಬೆಂಕಿಯಿಂದ ಸೃಷ್ಟಿಸಲ್ಪಟ್ಟವನಾಗಿದ್ದಾನೆ ಮತ್ತು ಜಿನ್ನ್ ವರ್ಗವು ಸರ್ವಶಕ್ತನಾದ ಅಲ್ಲಾಹನಿಂದ ಸೃಷ್ಟಿಸಲ್ಪಟ್ಟಿದೆ. ಅಲ್ಲಾಹನ ಆಜ್ಞೆ ಹಾಗೂ ನಿಷೇಧಗಳ ಅನುಸರಣೆಯ ವಿಚಾರದಲ್ಲಿ ಮನುಷ್ಯರಂತೆಯೇ ಜಿನ್ನ್‌ಗಳೂ ಕೂಡ ತಮ್ಮ ಕರ್ಮಗಳಿಗೆ ಸಂಬಂಧಿಸಿ ಪರಲೋಕದಲ್ಲಿ ಉತ್ತರದಾಯಿಯಾಗಿರುತ್ತಾರೆ.

ಆರಂಭಿಕ ಘಟ್ಟದಲ್ಲಿ ಇಬ್ಲೀಸನು ಮಲಾಯಿಕ್‌ಗಳೊಂದಿಗೆ (ದೇವಚರರು) ಸೇರಿ ಅಲ್ಲಾಹನನ್ನೇ ಆರಾಧಿಸುತ್ತಿದ್ದವನಾಗಿದ್ದನು. ಉನ್ನತನಾದ ಅಲ್ಲಾಹನು ತನ್ನ ದಿವ್ಯ ಕುರ್‌ಆನ್‌ನಲ್ಲಿ ಶೈತಾನ್ ಹಾಗೂ ಮಾನವ ಸಮುದಾಯದ ಮಧ್ಯೆ ಆದಿಪಿತ ಆದಮ್‌ರವರ عليه السلام ಸೃಷ್ಟಿಯೊಂದಿಗೆ ಬೆಳೆದು ಬಂದ ಶತ್ರುತ್ವದ ಬಗ್ಗೆ ಆದಮರ ಸಂತತಿಗಳಿಗೆ ವಿವರಿಸುತ್ತಾನೆ.

ಆದಮ್‌ರವರ عليه السلام ಆತ್ಮಕ್ಕೆ ಪ್ರಾಣವನ್ನು ಊದಿದ ನಂತರ ಅವರನ್ನು ಗೌರವಿಸುವ ಸಲುವಾಗಿ ಅಲ್ಲಾಹನು ಮಲಾಯಿಕ್‌ಗಳಿಗೆ (ದೇವಚರರಿಗೆ) ಆದಮರ ಮುಂದೆ ಸಾಷ್ಟಾಂಗವೆರಗುವಂತೆ ಆಜ್ಞಾಪಿಸುತ್ತಾನೆ. ಇಬ್ಲೀಸ್ ಮಲಾಯಿಕ್‌ಗಳ ಪೈಕಿಯವನಾಗಿರದಿದ್ದರೂ ಸಾಷ್ಟಾಂಗವೆರಗಲು ಆಜ್ಞಾಪಿಸಲ್ಪಟ್ಟವರಲ್ಲಿ ಆತನೂ ಒಳಗೊಂಡಿದ್ದನು. ಕಾರಣ ದೇವಚರರ ನಡವಳಿಕೆ ಹಾಗೂ ಅವರ ಕಾರ್ಯವಿಧಾನಗಳನ್ನು ಅನುಕರಿಸಲು ಇಬ್ಲೀಸನು ವಿಶೇಷ ಪ್ರಯತ್ನ ಮಾಡುತ್ತಿದ್ದನು. ಎಷ್ಟಾದರೂ, ಇಬ್ಲೀಸನು ತನ್ನನ್ನು ತಾನೇ ಬಹಳ ಉನ್ನತನೆಂದು ಭಾವಿಸಿಕೊಂಡಿದ್ದ ಒಬ್ಬ ದುರಂಹಕಾರಿಯಾಗಿದ್ದನು. ಇಬ್ನ್‌ಅಬ್ಬಾಸ್‌ರವರು رضي الله عنه ಹೇಳುತ್ತಾರೆ, "ಪಾಪಿಯಾಗಿ ದುರ್ಮಾರ್ಗಕ್ಕೆ ಹೊರಳುವ ಮುನ್ನ ಇಬ್ಲೀಸನು ಮಲಾಯಿಕ್‌ಗಳೊಂದಿಗಿದ್ದನು ಹಾಗೂ "ಅಝಾಝಿಲ್" ಎಂದು ಕರೆಯಲ್ಪಡುತ್ತಿದ್ದನು. ಆತನು ಭೂಮಿಯಲ್ಲಿ ವಾಸಿಸುತ್ತಿದ್ದ ಅತಿಚುರುಕಾದ ಆರಾಧಕನೂ ಮಲಾಯಿಕ್‌ಗಳ ನಡುವೆ ಅತ್ಯಂತ ಜ್ಞಾನಿಯೂ ಆಗಿದ್ದನು. ಈ ವಾಸ್ತವಾಂಶವೂ ಆತನಲ್ಲಿ ಅಹಂಕಾರಕ್ಕೆ ಹೇತುವಾಯಿತು." (ತಫ್ಸೀರ್ ಇಬ್ನ್ ಕಸೀರ್) (2:34)

ಇಬ್ಲೀಸನು ಆದಮ್‌ರವರ عليه السلام ಸಮಕ್ಷ ಸಾಷ್ಟಾಂಗವೆರಗಲು ನಿರಾಕರಿಸುತ್ತಾ ಈ ರೀತಿ ಹೇಳಿದನು;

"......ನಾನು ಅವನಿಗಿಂತ (ಆದಮ್‌ರಿಗಿಂತ) ಶ್ರೇಷ್ಠನಾಗಿದ್ದೇನೆ,
ನನ್ನನ್ನು ನೀನು ಬೆಂಕಿಯಿಂದ ಸೃಷ್ಟಿಸಿರುವೆ ಮತ್ತು ಅವನನ್ನು
ನೀನು ಸೃಷ್ಟಿಸಿರುವುದು ಮಣ್ಣಿನಿಂದಾಗಿದೆ" (ಸೂರ ಅಲ್–ಅಅ್‌ರಾಫ್: 12)

ಈ ಮೊಂಡುತನವು ಆತನು ಅಲ್ಲಾಹನ ಶಾಪಕ್ಕೀಡಾಗಿ ಸ್ವರ್ಗ ಲೋಕದಿಂದ ಹೊರಬೀಳಲು ಹೇತುವಾಯಿತು. ಆ ಕಾರಣದಿಂದಾಗಿ ಇಬ್ಲೀಸನು ಮಾನವ ಸಮುದಾಯವನ್ನು ಅಂತ್ಯದಿನದವರೆಗೂ ಸನ್ಮಾರ್ಗದಿಂದ ವ್ಯತಿಚಲಿಸುವಂತೆ ಮಾಡಿ ಪಥಭ್ರಷ್ಟಗೊಳಿಸಲು ಸ್ವಯಂ ವಚನಬದ್ಧನಾದನು. ನಮ್ಮಲ್ಲಿ ಪ್ರತಿಯೊಬ್ಬರನ್ನೂ ಆತನು ತನ್ನೊಂದಿಗೆ ನರಕಕ್ಕೆ ಹೊತ್ತೊಯ್ಯಲು ಆಶಿಸುತ್ತಿದ್ದಾನೆ. ಹೀಗೆ ಆತ ಮಾನವ ಸಮುದಾಯದ ಅತಿ ದೊಡ್ಡ ಶತ್ರುವಾಗಿದ್ದಾನೆ.

# ಶೈತಾನನ ಸೃಷ್ಟಿಯ ಹಿಂದಿರುವ ವಿವೇಕ

ಇಮಾಮ್ ಇಬ್ನುಲ್ ಖಯ್ಯಿಂ (ರಹಿಮಹುಲ್ಲಾಹ್) ತನ್ನ "ಶಿಫಾ ಅಲ್ ಗಲೀಲ್" ಎನ್ನುವ ಪುಸ್ತಕದಲ್ಲಿ (ಪುಟ 322) ಶೈತಾನನ ಸೃಷ್ಟಿಯ ಹಿಂದಿರುವ ಹಲವಾರು ಕಾರಣಗಳ (ಯುಕ್ತಿಗಳ) ಪೈಕಿ ಕೆಲವೊಂದನ್ನು ಪಟ್ಟಿ ಮಾಡುತ್ತಾ ಈ ರೀತಿ ಹೇಳುತ್ತಾರೆ, 'ಶೈತಾನ್ ಹಾಗೂ ಆತನ ಸಮೂಹದ ಸೃಷ್ಟಿಯ ಹಿಂದೆ ಅಡಗಿರುವ ಕಾರಣಗಳ ಸಂಪೂರ್ಣ ವಿವರವನ್ನು ಒಳಗೊಂಡ ಜ್ಞಾನ ಅಲ್ಲಾಹನಿಗಲ್ಲದೆ ಮತ್ತ್ಯಾರಿಗೂ ಇಲ್ಲ. ಆದರೆ ಅಲ್ಲಾಹು ಸೂಚಿಸಿದ ಕೆಲವು ಕಾರಣಗಳು ಸಂಕ್ಷೇಪವಾಗಿ ಈ ರೀತಿಯಿವೆ.

1. ಶೈತಾನನ ಕುಟಿಲೋಪಾಯಗಳ ವಿರುದ್ಧ ಹೋರಾಡುವ ಮೂಲಕ ಧರ್ಮನಿಷ್ಠೆಯ ಉನ್ನತ ಶ್ರೇಣಿಯನ್ನು ಮುಟ್ಟಿ ಅಲ್ಲಾಹನ ದಾಸನೊಬ್ಬ ಅಲ್ಲಾಹನೊಂದಿಗಿರುವ ತನ್ನ ದಾಸ್ಯತೆಯನ್ನು ಸಮಗ್ರಗೊಳಿಸಬಹುದು. ಶೈತಾನನ ಅಸ್ತಿತ್ವವಿಲ್ಲದಿರುತ್ತಿದ್ದರೆ ನಾವು ಈ ಅವಕಾಶದಿಂದ ವಂಚಿತರಾಗುತ್ತಿದ್ದೆವು.

2. ತನ್ನ ಅಹಂಭಾವ ಹಾಗೂ ನಿರಾಕರಣೆಯ ಕಾರಣಕ್ಕಾಗಿ ಮಲಾಯಿಕ್‌ಗಳ ನಡುವಿನಿಂದ ತಿರಸ್ಕರಿಸಲ್ಪಟ್ಟು ಶೈತಾನನಾಗಿ ಹೊರದಬ್ಬಲ್ಪಟ್ಟ ಇಬ್ಲೀಸನ ದುರ್ಗತಿಯ ಬಗ್ಗೆ ಅರಿತಿರುವ ದಾಸನೊಬ್ಬ ಅಲ್ಲಾಹನ ಆಜ್ಞೆ ಹಾಗೂ ನಿಷೇಧವನ್ನು ತೃಣೀಕರಿಸುವುದರಿಂದ ಉಂಟಾಗುವ ಘೋರ ದುಷ್ಪರಿಣಾಮಗಳ ಬಗ್ಗೆ ಭಯಪಟ್ಟು ತನ್ನ ತಕ್ವವನ್ನು (ದೇವಭಕ್ತಿ) ಹೆಚ್ಚಿಸಿಕೊಳ್ಳಬಹುದು.

3. ಒಂದು ಎಚ್ಚರಿಕೆಯುಕ್ತ ಪಾಠ: ಮಾನವ ಹಾಗೂ ಜಿನ್ನ್ ಸಮುದಾಯಗಳ ಆದಿಪಿತರಿಬ್ಬರೂ ಅಲ್ಲಾಹನಿಂದ ಪರೀಕ್ಷಿಸಲ್ಪಟ್ಟಿದ್ದರು. ಒಂದೆಡೆ ಜಿನ್ನ್‌ಗಳ ಆದಿಪಿತನಾದ ಇಬ್ಲೀಸನು ತನ್ನ ಅತಿ ದರ್ಪದಿಂದಾಗಿ ಅಲ್ಲಾಹನ ಆಜ್ಞೆಗಳನ್ನು ಪಾಲಿಸಲು ನಿರಾಕರಿಸಿದನು. ದರ್ಪ ಹಾಗೂ ಅಹಂಕಾರವನ್ನು ತೋರ್ಪಡಿಸಿದರಿಂದಾಗಿ ಅಪಮಾನಿತನಾಗಿ ಸ್ವರ್ಗದಿಂದ ಹೊರದಬ್ಬಲ್ಪಟ್ಟು ನರಕವಾಸಿಗಳೊಂದಿಗೆ ಜೀವಿಸುವ ದಂಡನೆಯನ್ನು ಪಡೆದನು. ತನ್ನ ದುಷ್ಕೃತ್ಯಗಳನ್ನು ತಿದ್ದುವ ಗೋಜಿಗೆ ಹೋಗದೆ ಪಟ್ಟು

ಹಿಡಿಯುವವರಿಗೆ ಅವನೊಂದು ಪಾಠವಾಗಿದ್ದಾನೆ. ವ್ಯತಿರಿಕ್ತವಾಗಿ, ಮನುಷ್ಯರ ಆದಿಪಿತರಾದ ಆದಮ್عليه السلام ಪಾಪವೊಂದನ್ನೆಸಗಿದ ನಂತರ ಅಲ್ಲಾಹನಲ್ಲಿ ಪಶ್ಚಾತ್ತಾಪಪಟ್ಟು ಮರಳುವ ಮೂಲಕ ನಮಗೆ ಅತ್ಯುತ್ತಮ ಮಾದರಿಯೊಂದನ್ನು ತೋರಿಸಿಕೊಟ್ಟರು.

4. ಶೈತಾನನು ಅಲ್ಲಾಹನ ದಾಸರಿಗೆ ಒಂದು ಪರೀಕ್ಷೆಯಾಗಿದ್ದಾನೆ. ಆತನ ಭ್ರಷ್ಟಪಥದಿಂದ ದೂರನಿಲ್ಲುವ ಮೂಲಕ ಈ ಪರೀಕ್ಷೆಯನ್ನು ನಾವು ಗೆಲ್ಲಬಹುದು.

5. ಶೈತಾನನ್ನು ಸೃಷ್ಟಿಸುವ ಮೂಲಕ ಪರಸ್ಪರ ಅಭಿಮುಖ (ಎದುರುಬದುರಾದ ಗುಣಲಕ್ಷಣಗಳನ್ನು) ಹೊಂದಿರುವಂತಹ ಸೃಷ್ಟಿಗಳನ್ನು ಸೃಷ್ಟಿಸುವ ಅಲ್ಲಾಹನ ಅನಂತ ಸಾಮರ್ಥ್ಯ ಹಾಗೂ ಅಧಿಕಾರ ಪ್ರಕಟಗೊಳ್ಳುತ್ತದೆ. ಉದಾಹರಣೆಗೆ ಆಕಾಶಗಳು ಮತ್ತು ಭೂಮಿ, ಬೆಳಕು ಮತ್ತು ಅಂಧಕಾರ, ಸ್ವರ್ಗ ಮತ್ತು ನರಕ, ಜಲ ಮತ್ತು ಅಗ್ನಿ, ಒಳಿತು ಮತ್ತು ಕೆಡುಕು, ಜಿಬ್ರೀಲ್عليه السلام ಹಾಗೂ ಮಲಾಯಿಕ್‌ಗಳಿಗೆ ಎದುರಾಗಿ ಇಬ್ಲೀಸ್ ಮತ್ತು ಶಯಾತೀನ್‌ಗಳು (ಆತನ ಅನುಯಾಯಿಗಳು).

6. ವಸ್ತುವೊಂದರ (ಕಾರ್ಯವೊಂದರ) ಸದ್ಗುಣವು (ಉತ್ತಮ ಗುಣ) ಪ್ರಕಟಗೊಳ್ಳಬೇಕೆಂದರೆ ಆ ವಸ್ತುವಿನ ವಿರುದ್ಧ ಗುಣ ಲಕ್ಷಣಗಳನ್ನು ಹೊಂದಿರುವ ವಸ್ತುವೊಂದರ ಅಸ್ತಿತ್ವ ಇರಲೇಬೇಕು. ಕುರೂಪವಿಲ್ಲದಿರುತ್ತಿದ್ದರೆ ಸೌಂದರ್ಯವನ್ನು ನಾವು ಗಣನೆಗೆ ತೆಗೆದುಕೊಳ್ಳುತ್ತಿರಲಿಲ್ಲ. ಬಡತನವಿಲ್ಲದಿರುತ್ತಿದ್ದರೆ ಸಂಪತ್ತು, ಐಶ್ವರ್ಯಕ್ಕೆ ನಾವು ಬೆಲೆ ಕಟ್ಟುತ್ತಿರಲಿಲ್ಲ.

7. ಅಲ್ಲಾಹನ ಸಹಿಷ್ಣುತೆ ಮತ್ತು ತಾಳ್ಮೆ: ಅಲ್ಲಾಹನು ಆತನ ಸಹಿಷ್ಣುತೆ, ತಾಳ್ಮೆ, (ಅವಸರರಹಿತ) ಸಾವಧಾನ, ಅಪರಿಮಿತ ದಯೆ ಮತ್ತು ಔದಾರ್ಯವನ್ನು ತನ್ನ ದಾಸರಮೇಲೆ ತೋರಿಸಲಿಚ್ಛಿಸುತ್ತಾನೆ. ಇದು ಅಲ್ಲಾಹನನ್ನು ಕೋಪಗೊಳಿಸುವವರನ್ನು (ಕೃತಘ್ನತೆ ತೋರುವವರನ್ನು) ಸೃಷ್ಟಿಸುವ ಅನಿವಾರ್ಯತೆಯನ್ನು ವ್ಯಕ್ತಪಡಿಸುತ್ತದೆ. ಅಲ್ಲಾಹನ ಪ್ರವಾದಿವರ್ಯರುﷺ ಹೇಳಿದರು, "ನೀವು ಪಾಪಗಳನ್ನು ಮಾಡದೆ ಇರುತ್ತಿದ್ದರೆ ನಿಶ್ಚಯವಾಗಿಯೂ ಅಲ್ಲಾಹನು ನಿಮ್ಮನ್ನು ನಿರ್ಮೂಲನೆಗೈಯುದ್ದು ಪಾಪಗಳನ್ನು ಮಾಡುವಂತಹ (ನಂತರ ಕ್ಷಮೆ ಯಾಚಿಸುವಂತಹ) ಇನ್ನೊಂದು ಜನತೆಯನ್ನು

ತರುತ್ತಿದ್ದನು. ಅವರು ಅಲ್ಲಾಹನಲ್ಲಿ ಕ್ಷಮೆ ಬೇಡುತ್ತಾರೆ. ಹಾಗೆಯೇ ಅಲ್ಲಾಹು ಅವರನ್ನು ಕ್ಷಮಿಸುವನು." (ಸಹೀಹ್ ಮುಸ್ಲಿಂ).

ಈ ಕಾರಣದಿಂದ ಅಲ್ಲಾಹನು ಅತಿಕ್ರಮಿಗಳ ಪಾಪಗಳನ್ನು ಅಲಕ್ಷ್ಯಗೈದು, ಅವರಿಗೆ ಎಲ್ಲಾ ರೀತಿಯ ಅನುಗ್ರಹಗಳನ್ನು ದಯಪಾಲಿಸುತ್ತಾನೆ. ಅವರಿಗೆ ಆಹಾರವನ್ನು ಒದಗಿಸಿ, ಉತ್ತಮ ಆರೋಗ್ಯವನ್ನು ನೀಡಿ, ಸುಖಸೌಕರ್ಯದೊಂದಿಗೆ ಜೀವಿಸಲು ಅನುಮತಿಸುತ್ತಾನೆ. ಅವರ ಪ್ರಾರ್ಥನೆಗಳಿಗೆ ಉತ್ತರವನ್ನು ನೀಡಿ ಅವರಿಂದ ಕಷ್ಟಗಳನ್ನು ನೀಗಿಸುತ್ತಾನೆ. ಪಾಪಿಗಳಾದ ದಾಸರು ಅಲ್ಲಾಹನೊಂದಿಗೆ ವ್ಯವಹರಿಸುವುದಕ್ಕಿಂತ ಭಿನ್ನವಾಗಿ ಅಲ್ಲಾಹನು ಅವರನ್ನು ಸಹಾನುಭೂತಿ, ದಯೆ ಹಾಗೂ ಕಾತರದಿಂದ ನಡೆಸಿಕೊಳ್ಳುತ್ತಾನೆ.

ಕುದ್ಸೀ ಹದೀಸೊಂದರಲ್ಲಿ ಅಲ್ಲಾಹ್ ಈ ರೀತಿ ಹೇಳುತ್ತಾನೆ, "ಓ ಆದಮನ ಪುತ್ರನೇ(ಳೇ)! ನೀನು ನನ್ನೊಂದಿಗೆ ಹಿತಕರವಾಗಿ ವರ್ತಿಸುತ್ತಿಲ್ಲ. ನನ್ನ ಸದ್ಗುಣ (ಒಳ್ಳೆಯತನ, ಅನುಗ್ರಹ) ನಿನಗಾಗಿ ಕೆಳಗಿಳಿಯುತ್ತಿವೆ ಆದರೆ ನಿನ್ನ ಕೆಡುಕುಗಳು ನನ್ನತ್ತ ಏರುತ್ತಿವೆ. ನಿನ್ನ ಅಗತ್ಯ ನನಗಿಲ್ಲವಾದರೂ ನಿನ್ನತ್ತ ಅನುಗ್ರಹಗಳನ್ನು ಸುರಿಸುವ ಮೂಲಕ ನಾನು ನಿನ್ನ ಸ್ನೇಹವನ್ನು ಪಡೆಯಬಯಸುತ್ತೇನೆ. ನಾನು ನಿನಗೆ ಅತ್ಯಂತ ಅಗತ್ಯವಿರುವವನಾಗಿದ್ದೂ ನನ್ನ ಆಜ್ಞೋಲ್ಲಂಘನೆಗೈಯುತ್ತಾ ನೀನು ನನ್ನ ಕೋಪವನ್ನು ಸಂಪಾದಿಸಲು ಯಾಕೆ ಪ್ರಯತ್ನಿಸುತ್ತಿರುವೇ? ಉತ್ತಮರಾದ ಮಲಾಯಿಕ್‌ಗಳು (ದೇವಚರರು) ನಿರಂತರವಾಗಿ ನಿನ್ನ ಪಾಪಗಳನ್ನು ನನ್ನತ್ತ ತರುತ್ತಿದ್ದಾರೆ". (ಈ ವರದಿ ಹಸನ್ ಆಗಿದೆ)

ದಾಸನು ಅಲ್ಲಾಹನತ್ತ ಕ್ಷಮೆಯಾಚನೆಯೊಂದಿಗೆ ಮರಳಿದರೆ ಅಲ್ಲಾಹ್ ಆತನ ಪಶ್ಚಾತ್ತಾಪವನ್ನು ಸ್ವೀಕರಿಸುತ್ತಾನೆ ಮತ್ತು ಈ ಮೂಲಕ ಅಲ್ಲಾಹನ ದಾಸರು ಅವರ ಒಡೆಯನ ಅಪಾರ ದಯೆ, ಕರುಣೆ ಹಾಗೂ ಕ್ಷಮಾಗುಣಗಳಿಗೆ ಸಾಕ್ಷಿಯಾಗುತ್ತಾರೆ.

**8. ಶೈತಾನನ ಅಸ್ತಿತ್ವದ ಕಾರಣದಿಂದಾಗಿ ಸಂಭವಿಸುವ ಸಂಗತಿಗಳಲ್ಲಿ ಅಲ್ಲಾಹನಿಗೆ ಅಚ್ಚು ಮೆಚ್ಚಿನದ್ದು:** ಅಲ್ಲಾಹನೊಂದಿಗೆ ವಿಧೇಯತೆಯನ್ನು ತೋರಿಸುವ ಪ್ರವೃತ್ತಿಯು ಅಲ್ಲಾಹನ ಮೆಚ್ಚುಗೆಯನ್ನು ಪಡೆಯಲು ಕಾರಣವಾಗುತ್ತದೆ ಮತ್ತು ಅದು ಅಲ್ಲಾಹನನ್ನು ಹೆಚ್ಚು ಸಂತೋಷಗೊಳಿಸುತ್ತದೆ. ಶೈತಾನ್ ಹಾಗೂ ಆತನ ಹಿಂಬಾಲಕರ ಇರುವಿಕೆಯ ಕಾರಣದಿಂದ ಸಂಭವಿಸುತ್ತಿರುವ ಕೆಡುಕು ಹಾಗೂ ಪಾಪಗಳು ಅಲ್ಲಾಹನನ್ನು

ಕೋಪಗೊಳಸುತ್ತದೆ. ಹಾಗೆಯೇ ವಿಶ್ವಾಸಿಯೊಬ್ಬನು ಅಲ್ಲಾಹನ ಅಪೇಕ್ಷೆಗೆ ವಿರುದ್ಧವಾಗಿ ಚಲಿಸುವುದು ಶೈತಾನನ ಕುಟಿಲೋಪಾಯಗಳ ಕಾರಣದಿಂದಾಗಿರುತ್ತದೆ. ಅಲ್ಲಾಹನ ಪ್ರೀತಿ ಹಾಗೂ ತೃಪ್ತಿಯನ್ನು ಸಂಪಾದಿಸುವ ಬಯಕೆಯೊಂದಿಗೆ ಮುನ್ನಡೆಯುವವರ ಪಥದಲ್ಲಿ ಶೈತಾನನು ಸೃಷ್ಟಿಸುವ ಅಡಚಣೆ, ಯಾತನೆ, ಸಂಕಷ್ಟಗಳನ್ನು ಸಹನೆಯೊಂದಿಗೆ ಎದುರಿಸುವಂತಹ ವಿಶ್ವಾಸಿಯ ತಾಳ್ಮೆಯು ಅಲ್ಲಾಹನಿಗೆ ಅಚ್ಚುಮೆಚ್ಚಿನದ್ದಾಗಿದೆ.

ಸಮಾನರೀತಿಯಲ್ಲಿ ರೀತಿಯಲ್ಲಿ ಇಬ್ಲೀಸನ ಪ್ರಲೋಭನೆಯ ಕಾರಣದಿಂದ ಸಂಭವಿಸುವ ಆಜ್ಞೋಲ್ಲಂಘನೆ, ಅವಿಧೇಯತೆ ಹಾಗೂ ಪಾಪಗಳು ಅಲ್ಲಾಹನನ್ನು ಕೋಪಗೊಳಸುತ್ತದೆ
.

"ನಿಮ್ಮ ಪೈಕಿಯಲ್ಲೊಬ್ಬನು ತನ್ನ ಸಾಮಾನು ಸರಂಜಾಮುಗಳನ್ನು ಹೊತ್ತು ಕೊಂಡಿರುವ ಒಂಟೆಯನ್ನು ನೀರಿಲ್ಲದ ಮರುಭೂಮಿಯಲ್ಲಿ ಕಳೆದುಕೊಂಡು, ಸಕಲ ನಿರೀಕ್ಷೆಗಳನ್ನು ತೊರೆದು ಹತಾಶನಾಗಿ ಮರವೊಂದರ ನೆರಳನಲ್ಲಿ ಮಲಗಿಕೊಂಡಿರುವಾಗ ಆತನ ವಾಹನವು (ಒಂಟೆಯು) ಬಂದು ಅವನ ಮುಂದೆ ನಿಂತಾಗ ಅದರ ಮೂಗುದಾರವನ್ನು ಹಿಡಿದುಕೊಂಡು ಆತ ಸಂತೋಷಾತಿರೇಕದಿಂದ ಹೇಳುತ್ತಾನೆ. 'ಅಲ್ಲಾಹನೇ, ನೀನು ನನ್ನ ದಾಸ, ನಾನು ನಿನ್ನ ಪ್ರಭುವಾಗಿದ್ದೇನೆ'. ಅಮಿತಾನಂದದಿಂದಾಗಿ ಆತನ ಮಾತು ಬಾಯಿ ತಪ್ಪಿ ಹೋಗಿತ್ತು. ದಾಸನೊಬ್ಬನು ಪಶ್ಚಾತ್ತಾಪದೊಂದಿಗೆ ಅಲ್ಲಾಹನತ್ತ ತಿರುಗಿ ಕ್ಷಮೆಯಾಚಿಸುವಾಗ ಈ ವ್ಯಕ್ತಿಗಾದ ಸಂತೋಷಕ್ಕಿಂತಲೂ ಹೆಚ್ಚಾಗಿ ಅಲ್ಲಾಹು ಸಂತೋಷ ಪಡುವನು."
(ಸಹೀಹ್ ಮುಸ್ಲಿಂ 6618)

# ಶೈತಾನನ ಕಿಬ್ರ್ ಮತ್ತು ಕುಫ್ರ್

ಕಿಬ್ರ್ (ಅಹಂಭಾವ, ದರ್ಪ) ಮತ್ತು ಕುಫ್ರ್ (ಅವಿಶ್ವಾಸ) ಪರಸ್ಪರ "ಮುತಲಾಝಿಮಾನ್"ಗಳಾಗಿವೆ. ಅಂದರೆ ಕಿಬ್ರ್ ಅನಿವಾರ್ಯವಾಗಿ ಕುಫ್ರ್‌ನತ್ತ ಕೊಂಡೊಯ್ಯುತ್ತದೆ. ಶೈತಾನ್‌ನೊಂದಿಗೆ ಸಂಭವಿಸಿದ್ದು ಇದೇ ರೀತಿಯಲ್ಲಾಗಿತ್ತು.

"ನೀವೆಲ್ಲರೂ ಆದಮರ ಮುಂದೆ ಸಾಷ್ಟಾಂಗವೆರಗಿರಿ, ಎಂದು ನಾವು
ಮಲಾಯಿಕರೊಂದಿಗೆ ಹೇಳಿದ ಸಂದರ್ಭವನ್ನು (ಸ್ಮರಿಸಿರಿ),
ಅವರೆಲ್ಲರೂ ಸಾಷ್ಟಾಂಗವೆರಗಿದರು.
ಇಬ್ಲೀಸನ ಹೊರತು, ಅವನು ನಿರಾಕರಿಸಿದನು ಹಾಗೂ ಅಹಂಕಾರವನ್ನು ತೋರಿದನು
ಮತ್ತು ಅವಿಶ್ವಾಸಿಗಳ ಪೈಕಿಯಲ್ಲಾದನು."
(ಸೂರ ಅಲ್-ಬಕರಾ :34)

ಪ್ರವಾದಿವರ್ಯರು ﷺ ಅಹಂಭಾವವನ್ನು ಈ ರೀತಿ ವರ್ಣಿಸುತ್ತಾರೆ, "ಕಿಬ್ರ್ (ಅಹಂಭಾವ) ಎಂದರೆ ಸತ್ಯದೊಂದಿಗೆ ಅಸಂತೃಪ್ತಿಯಾಗಿದೆ ಮತ್ತು ಜನರನ್ನು ತೃಣೀಕರಿಸುವುದಾಗಿದೆ."(ಸಹೀಹ್ ಮುಸ್ಲಿಂ)

ಅಲ್ಲಾಹನ ಆಜ್ಞೆಯನ್ನು ಅನುಸರಿಸುವುದು ಇಬ್ಲೀಸನಿಗೆ ಸ್ವಯಂ ತೃಪ್ತಿದಾಯಕವೆಂದೆಣಿಸಲಿಲ್ಲ. ಆಗ ಆತ ಬಹಿರಂಗವಾಗಿ ತನ್ನ ಕಿಬ್ರ್ (ಅಹಂಭಾವ) ಅನ್ನು ತೋರ್ಪಡಿಸಿದನು. ಆತನು ಅಲ್ಲಾಹನ ಅರಿವಿನೊಂದಿಗೆ (ಜ್ಞಾನ, ಆಜ್ಞೆ) ಅಸಂತೃಪ್ತಿಯನ್ನು ಪ್ರಕಟಿಸುತ್ತಾ ಆದಮ್‌ರವರನ್ನು عليه السلام ತೃಣೀಕರಿಸಿದನು. ಅಲ್ಲಾಹು ಇಬ್ಲೀಸ್‌ನೊಂದಿಗೆ ಪ್ರಶ್ನಿಸಿದಾಗ;

"ನಾನು ನಿನ್ನೊಂದಿಗೆ (ಸಾಷ್ಟಾಂಗವೆರಗಲು) ಆಜ್ಞಾಪಿಸಿದಾಗ,
ನಿನ್ನನ್ನು ಸಾಷ್ಟಾಂಗವೆರಗುವುದರಿಂದ ತಡೆದ ವಿಷಯ ಯಾವುದು?
ಅವನು(ಇಬ್ಲೀಸ್) ಹೇಳಿದ, 'ನಾನು ಅವನಿಗಿಂತ (ಆದಮ್‌ರಿಗಿಂತ)
ಶ್ರೇಷ್ಠನಾಗಿರುತ್ತೇನೆ, ನನ್ನನ್ನು ನೀನು ಬೆಂಕಿಯಿಂದ ಸೃಷ್ಟಿಸಿರುವೆ ಮತ್ತು ಅವನನ್ನು
ನೀನು ಸೃಷ್ಟಿಸಿರುವುದು ಮಣ್ಣಿನಿಂದಾಗಿದೆ."
(ಸೂರ ಅಲ್–ಅಅ್‌ರಾಫ್: 12)

ಈ ಅಹಂಭಾವದ ಫಲಸ್ವರೂಪವಾಗಿ ಅಲ್ಲಾಹನು ಇಬ್ಲೀಸನನ್ನು ವಜಾ ಮಾಡುತ್ತಾ; "(ಓ ಇಬ್ಲೀಸ್) ನೀನು ಇಲ್ಲಿಂದ (ಸ್ವರ್ಗದಿಂದ) ತೊಲಗು" ಎಂದು ಆಜ್ಞಾಪಿಸುತ್ತಾನೆ. ಈ ರೀತಿ ಇಬ್ಲೀಸನನ್ನು ಅಪಮಾನಗೊಳಿಸಿ ಸ್ವರ್ಗದಿಂದ ತೊಲಗಿಸಿದ ಸರ್ವಶಕ್ತನಾದ ಅಲ್ಲಾಹನು ಈ ಮೂಲಕ ಮಹತ್ವಪೂರ್ಣವಾದ ದೃಷ್ಟಾಂತವೊಂದನ್ನು ನಮ್ಮ ಮುಂದಿಡುತ್ತಾನೆ. ಅಲ್ಲಾಹನು ಇಬ್ಲೀಸನೊಂದಿಗೆ 'ಅಹಂಕಾರಿಯಾದ ನೀನು ಇಲ್ಲಿರುವಂತಿಲ್ಲ'ವೆಂದು ಹೇಳುತ್ತಾನೆ. (ಸೂರ ಅಲ್–ಅಅ್‌ರಾಫ್: 13 ವಿವರಣೆಯಲ್ಲಿ)

ಕುಫ್ರ್‌ನ (ಅವಿಶ್ವಾಸದ) ಹಲವು ವಿಧಾನಗಳ ಕುರಿತು ವರ್ಣಿಸುತ್ತಾ ಇಮಾಮ್ ಇಬ್ನುಲ್ ಖಯ್ಯಿಂ (ರಹಿಮಹುಲ್ಲಾಹ್) ಹೇಳುತ್ತಾರೆ, "ಕುಫ್ರ್ ಪ್ರಮುಖವಾಗಿ ಐದು ವಿಧಗಳಲ್ಲಿರುತ್ತವೆ. ನಿರಾಕರಣೆಯ ಕುಫ್ರ್, ದರ್ಪ ಮತ್ತು ಅಹಂಕಾರದ ಕುಫ್ರ್, ತಿರಸ್ಕಾರದ ಕುಫ್ರ್, ಸಂಶಯದ ಕುಫ್ರ್ ಮತ್ತು ಕಪಟತನದ ಕುಫ್ರ್.

ಶೈತಾನನ ಕುಫ್ರ್ ಅಹಂಕಾರ ಮತ್ತು ದರ್ಪದ ಕುಫ್ರ್ ಆಗಿತ್ತು. ಯಾಕೆಂದರೆ ಆತನು ಅಲ್ಲಾಹನ ಆಜ್ಞೆಯನ್ನು ನಿರಾಕರಿಸಿರಲಿಲ್ಲ, ತಿರಸ್ಕರಿಸಿಯೂ ಇರಲಿಲ್ಲ. ಆದರೆ ಅಹಂಕಾರ ಹಾಗೂ ದರ್ಪವನ್ನು ಪ್ರದರ್ಶಿಸಿದ್ದನು.

ಸಂದೇಶವಾಹಕರು ﷺ ಅಲ್ಲಾಹನ ಸತ್ಯಧರ್ಮದೊಂದಿಗೆ ಬಂದಿದ್ದಾರೆ ಎನ್ನುವ ಅರಿವು ಮತ್ತು ವಿಶ್ವಾಸವಿದ್ದರೂ ಅಹಂಭಾವ ಹಾಗೂ ದರ್ಪದ ಕಾರಣದಿಂದ ಅದನ್ನು ಒಪ್ಪಿಕೊಳ್ಳಲು ತಯಾರಾಗದೆ ಇದ್ದವರು ಇದೇ ರೀತಿಯ (ಅಹಂಕಾರ ಮತ್ತು ದರ್ಪದ) "ಕುಫ್ರ್"ನ್ನು ಪ್ರದರ್ಶಿಸಿದ್ದರು. ಇದು ಯಹೂದಿಗಳು* ಪ್ರದರ್ಶಿಸಿದ ಕುಫ್ರಾಗಿತ್ತು.

---

* ಅರಬ್ ಅವಿಶ್ವಾಸಿಗಳ ವಿರುದ್ಧ ವಿಜಯವನ್ನು ಸಾಧಿಸಲಿಕ್ಕಾಗಿ ಯಹೂದಿಗಳು ಅಲ್ಲಾಹನೊಂದಿಗೆ ಅಂತಿಮ ಪ್ರವಾದಿಯನ್ನು ಅವರತ್ತ ಕಳುಹಿಸುವಂತೆ ಪ್ರಾರ್ಥಿಸುತ್ತಿದ್ದರು. ಅಲ್ಲಾಹನು ಪ್ರವಾದಿಯವರನ್ನು ﷺ ಸಂದೇಶವಾಹಕರಾಗಿ ನಿಯೋಗಿಸಿದಾಗ ತಮ್ಮವನಲ್ಲದ ಪ್ರವಾದಿ ಮುಹಮ್ಮದ್‌ರವರನ್ನು ﷺ ಅವರು ತಿರಸ್ಕರಿಸಿದರು ಮತ್ತು ಅರಬರೊಂದಿಗೆ ಈರ್ಷ್ಯೆಯನ್ನು ಹೊಂದಿದರು. ಪ್ರವಾದಿ ಮುಹಮ್ಮದ್ ﷺ ಅಲ್ಲಾಹನ ಸಂದೇಶವಾಹಕರೆಂದು ಅವರು ನಿಶ್ಚಯವಾಗಿಯೂ ಅರಿತಿದ್ದರು. ಆದುದರಿಂದ ಅಲ್ಲಾಹನು ಹೇಳುತ್ತಾನೆ, "ಅವರು ಅಂಗೀಕರಿಸಿದ್ದ ಸತ್ಯವೊಂದು ಅವರ ಮುಂದೆ ಬಂದ ನಂತರವೂ ಅವರು ಅದರಲ್ಲಿ ಅವಿಶ್ವಾಸವನ್ನು ತಾಳಿದರು. ಅವರ ಮೇಲೆ ಅಲ್ಲಾಹನ ಶಾಪವಿದೆ" (ತಫ್ಸೀರ್ ಇಬ್ನುಕಸೀರ್(2):89)

"ಅವರು ಸ್ವಯಂ ದೃಢೀಕರಿಸಿದ್ದು (ಕುರ್‌ಆನ್) ಅವರತ್ತ ಆಗಮಿಸಿದಾಗ ಅವರು ಅದರಲ್ಲಿ ಅವಿಶ್ವಾಸವನ್ನು ಹೊಂದಿದರು.(ತಿರಸ್ಕರಿಸಿದರು)" (ಮದಾರಿಜುಸ್ಸಲಿಕೀನ್: 1/364-367)

ಈ ರೀತಿ 'ಅಹಂಕಾರ'ವು ಸ್ವರ್ಗದಿಂದ ಇಬ್ಲೀಸನು ಹೊರದೂಡಲ್ಪಡಲು ಕಾರಣವಾಯಿತು. ಅಹಂಕಾರಿಯಾದ ಮನುಷ್ಯನೊಬ್ಬನು ಉನ್ನತನಾದ ಅಲ್ಲಾಹನ ಅಗತ್ಯವಿಲ್ಲವೆಂದೂ, ತಾನು ಸ್ವಯಂ ಪರ್ಯಾಪ್ತನೆಂದೂ ಪರಿಗಣಿಸಿಕೊಳ್ಳುತ್ತಾನೆ. ವ್ಯಕ್ತಿಯೊಬ್ಬ ಹೆಮ್ಮೆಪಡುವ ಪ್ರತಿಯೊಂದು ಅಧಿಕ್ಯತೆಯೂ ಆತನಲ್ಲಿ "ಅಹಂ"ನ್ನು ಬೆಳೆಸುತ್ತದೆ ಮತ್ತು ಇದು ಅಲ್ಲಾಹನಲ್ಲಿ ತಿರಸ್ಕರಣೀಯವಾಗಿದೆ. ಕುದ್ಸೀ ಹದೀಸೊಂದರಲ್ಲಿ ಅಲ್ಲಾಹು ಈ ರೀತಿ ಹೇಳುತ್ತಾನೆ. "ಪ್ರತಿಷ್ಠೆಯು ನನ್ನ ವೇಷವಾಗಿದೆ ಮತ್ತು ಕೀರ್ತಿಯು (ಭವ್ಯತೆಯು) ನನ್ನನ್ನು ಸುತ್ತುವರಿದಿದೆ. ಇವೆರೆಡರೊಂದರಲ್ಲಿ ಯಾರಾದರೂ ನನ್ನೊಂದಿಗೆ ಸ್ಪರ್ಧಿಸಿದರೆ ಆತನನ್ನು ನಾನು ನರಕಕ್ಕೆಸೆಯುವೆನು." (ಮುಸ್ನದ್ ಅಹ್ಮದ್ ಮತ್ತು ಅಬೂದಾವೂದ್)

ಯಾವುದೇ ಘಟನೆಯು ಸಂಭವಿಸುವುದಿದ್ದರೂ ಅದಕ್ಕೊಂದು ಸಮಯ ಮತ್ತು ಸ್ಥಳ ನಿಗದಿಪಡಿಸಲ್ಪಟ್ಟಿದೆ. ಇವೆರಡೂ ಕೂಡ ನಮ್ಮ ಸ್ವಾಮ್ಯತೆಯಲ್ಲಿರುವುದಿಲ್ಲ. ತನ್ನ ಜೀವನದಲ್ಲಿ ಅತ್ಯಲ್ಪ ಕಾಲ ಅಥವಾ ಕ್ಷಣವನ್ನು ಕೂಡ ತನ್ನ ಅಧೀನತೆಯಲ್ಲಿಟ್ಟುಕೊಂಡು ನಿಯಂತ್ರಿಸಲು ಸಾಧಿಸುವವನು ಇಲ್ಲಿ ಯಾವೊಬ್ಬನೂ ಇಲ್ಲ! ಹಾಗಾದರೆ, ಮನುಷ್ಯನೊಬ್ಬ ಅಥವಾ ಇನ್ನಿತರ ಯಾವುದೇ ಸೃಷ್ಟಿಯೊಂದು ಇಲ್ಲಿ ದರ್ಪ ಮತ್ತು ಅಹಂಕಾರವನ್ನು ಪ್ರದರ್ಶಿಸುವುದು ಹೇಗೆ ತಾನೇ ಸಾಧ್ಯ? " ಪ್ರಬಲನೂ, ಪ್ರತಾಪಿಯೂ, ಸರ್ವೋನ್ನತನೂ, ಸರ್ವಾಧಿಪತಿಯೂ...." ಆದವನು ನಿಶ್ಚಯವಾಗಿಯೂ ಅಲ್ಲಾಹು ಮಾತ್ರ. ಎಲ್ಲಾ ರೀತಿಯ ಮಹಿಮೆಗಳು ಆತನಿಗೆ ಮಾತ್ರವಿದೆ. (ಸೂರ ಹಶ್ರ್: 23 ನೋಡಿ)

ಆದುದರಿಂದ, ಅಹಂಭಾವ ವಾಸ್ತವದಲ್ಲಿ ಅದು ಸ್ವಪ್ರಶಂಸೆಯಾಗಿದೆ ಮತ್ತು ಅಲ್ಲಾಹನ ದಾಸರ ಮೇಲೆ ನಿಷಿದ್ಧಗೊಳಸಲ್ಪಟ್ಟಿದೆ. ಅಲ್ಲಾಹನ ಪ್ರವಾದಿﷺ ಹೇಳಿದರು, "ನಿಶ್ಚಯವಾಗಿಯೂ, ಇನ್ನೊಬ್ಬರ ಮೇಲೆ ದೊಡ್ಡಸ್ಥಿಕೆ ಹಾಗೂ ದಬ್ಬಾಳಿಕೆ ನಡೆಸದ ರೀತಿಯಲ್ಲಿ ನೀನು ವಿನಯಾನ್ವಿತನಾಗಿರೆಂದು ಅಲ್ಲಾಹನು ನನಗೆ ಬೋಧಿಸಿದ್ದಾನೆ " (ಸಹೀಹ್–ಮುಸ್ಲಿಂ)

# ಅಂತ್ಯದಿನದವರೆಗೆ ಜೀವಿಸಬೇಕೆನ್ನುವ ಇಬ್ಲೀಸನ ಕೋರಿಕೆಯನ್ನು ಯಾಕೆ ಮನ್ನಿಸಲಾಯ್ತು?

**ಇಬ್ಲೀಸನು ತನ್ನ ದರ್ಪದ ಕಾರಣದಿಂದಾಗಿ ಸ್ವರ್ಗದಿಂದ ಹೊರದಬ್ಬಲ್ಪಟ್ಟ ನಂತರ ತನ್ನ ಮರಣವನ್ನು ಅಂತ್ಯದಿನದವರೆಗೆ ಮುಂದೂಡುವಂತೆ ಅಲ್ಲಾಹನಲ್ಲಿ ಭಿನ್ನವಿಸಿಕೊಳ್ಳುತ್ತಾನೆ.**

**(ಇಬ್ಲೀಸನು) ಹೇಳಿದನು, "ಅವರು (ಮನುಷ್ಯರೆಲ್ಲರೂ) ಇನ್ನೊಮ್ಮೆ ಎಬ್ಬಿಸಲ್ಪಡುವ ದಿನದ (ಪುನರುತ್ಥಾನ ದಿನ) ತನಕ ನನಗೆ ಕಾಲಾವಕಾಶವನ್ನು ನೀಡು'. (ಅಲ್ಲಾಹು ಹೇಳಿದನು) 'ನೀನು ಕಾಲಾವಕಾಶ ನೀಡಲ್ಪಟ್ಟವರಲ್ಲಾಗಿರುವೆ" (ಸೂರ ಅಲ್-ಅಅ್‌ರಾಫ್ 14:15)**

**ಇಮಾಮ್ ಇಬ್ನು ಕಸೀರ್ (ರಹಿಮಹುಲ್ಲಾಹ್) ಬರೆಯುತ್ತಾರೆ, "ಶೈತಾನ್ ಬೇಡಿದ್ದನ್ನು ಸರ್ವಜ್ಞನಾದ ಅಲ್ಲಾಹು ನೀಡಿದರೂ ನಿಶ್ಚಯಿಸಲ್ಪಟ್ಟ ವಿಧಿ ಹಾಗೂ ನಿರ್ಣಯಗಳನ್ನು ಇದು ಯಾವುದೇ ರೀತಿಯಲ್ಲೂ ತಡೆದಿರಲಿಲ್ಲ ಅಥವಾ ತಪ್ಪಿಸಿರಲಿಲ್ಲ." (ತಫ್ಸೀರ್ ಇಬ್ನ್ ಕಸೀರ್)**

**ಹಾಗಾದರೆ ಅಲ್ಲಾಹನು ಶೈತಾನನ್ನು ಸೃಷ್ಟಿಸಿದ ಹಿಂದಿರುವ ವಿವೇಕವೇನು? ಅಲ್ಲಾಹನ ಅನುಗ್ರಹದಿಂದ ವಂಚಿಸಲ್ಪಟ್ಟ ನಂತರವೂ ಆತನ ಕೋರಿಕೆಯನ್ನು ಯಾಕೆ ಮನ್ನಿಸಲಾಯಿತು? ಅಂತ್ಯದಿನದವರೆಗೂ ಜೀವಿಸಲು ಇಬ್ಲೀಸನಿಗೆ ಅನುಮತಿಸಲ್ಪಟ್ಟ ಹಿಂದಿರುವ ಯುಕ್ತಿಯೇನು? ಎಂಬಿತ್ಯಾದಿಗಳ ಕುರಿತು ಚರ್ಚಿಸುತ್ತಾ ಇಮಾಮ್ ಇಬ್ನುಲ್ ಖಯ್ಯಿಮ್ ಈ ಕೆಳಗಿನ ಕಾರಣಗಳನ್ನು ಮಂಡಿಸುತ್ತಾರೆ. (ಸಂಕ್ಷೇಪವಾಗಿ)**

1. ಆದಿಪಿತ ಆದಮ್‌ರವರು(ಅ) ಪರೀಕ್ಷಿಸಲ್ಪಟ್ಟು ತದನಂತರ ಅವರ ಮಕ್ಕಳಾದ ಮನುಷ್ಯ ಸಮುದಾಯವೂ ಪರೀಕ್ಷಿಸಲ್ಪಡಬೇಕೆಂಬುದು ಅಲ್ಲಾಹನ ಅಪಾರ ಜ್ಞಾನದಿಂದ ವಿಧಿಸಲ್ಪಟ್ಟಿರುತ್ತದೆ. ಶೈತಾನನ ವಿರುದ್ಧ ಹೋರಾಡುವವರು ಮುಕ್ತಿಯನ್ನು ಹೊಂದುವರು ಮತ್ತು ಆತನೊಂದಿಗೆ ಹೋಗುವವರು ಆತನಂತೆಯೇ ಭಯಾನಕ ಪರಿಣಾಮವನ್ನು ಎದುರಿಸಲಿರುವರು. ಆದುದರಿಂದ, ಯಾವ ಉದ್ದೇಶದಿಂದ ಶೈತಾನನ್ನು ಸೃಷ್ಟಿಸಲಾಯಿತೋ ಆ ಉದ್ದೇಶವು ಕ್ರಮಬದ್ಧವಾಗಿ ಈಡೇರುವಂತಾಗಲು ಶೈತಾನನು ಲೋಕಾಂತ್ಯದವರೆಗೆ ಇಲ್ಲಿ ಜೀವಿಸಬೇಕಾಗುತ್ತದೆ.

2. ಅಲ್ಲಾಹನು ಸರ್ವವನ್ನು ನ್ಯಾಯಯುತ ರೀತಿಯಲ್ಲಿ ಸಮಂಜಸವಾಗಿ ಅರಿಯುವವನಾಗಿದ್ದಾನೆ. ಪ್ರತಿಯೊಂದು ಉತ್ತಮ ಕರ್ಮಕ್ಕೂ ಆತ ತಕ್ಕ ಪ್ರತಿಫಲವನ್ನು ದಯೆಪಾಲಿಸುತ್ತಾನೆ. ವಿಶ್ವಾಸಿಗಳಿಗೆ ಅಲ್ಲಾಹನು ಈ ಇಹಲೋಕದಲ್ಲೂ ನಂತರ ಪರಲೋಕದಲ್ಲೂ ತಕ್ಕ ಪ್ರತಿಫಲವನ್ನು ನೀಡುತ್ತಾನೆ. ಆದರೆ ಅವಿಶ್ವಾಸಿಗಳಿಗೆ ಅವರ ಪ್ರತಿಫಲವನ್ನು ಈ ಲೋಕದಲ್ಲೇ ಹಂಚಲಾಗುವುದು. ಅವಿಶ್ವಾಸಿಗಳ ಯಾವುದೇ ಬಹುಮಾನ ಅಥವಾ ಸದ್ಫಲಗಳನ್ನು ಪರಲೋಕಕ್ಕೆ ಮುಂದೂಡಲ್ಪಡುವುದಿಲ್ಲ.

ಅಬೂದಾವೂದ್ ಅತ್ತಯಾಲಿಸಿ ತನ್ನ ಮುಸ್ನದ್‌ನಲ್ಲಿ ಈ ರೀತಿ ದಾಖಲಿಸಿದ್ದಾರೆ, 'ಅನಸ್‌ರವರಿಂದ(ರ) ವರದಿ, ಪ್ರವಾದಿ ಮುಹಮ್ಮದ್(ಸ) ಈ ರೀತಿ ಹೇಳಿದರು, "ಯಾವುದೇ ಒಂದು ಸತ್ಕರ್ಮಕ್ಕೆ ಸಂಭಂದಪಟ್ಟಂತೆ ವಿಶ್ವಾಸಿಯೊಂದಿಗೆ ಅಲ್ಲಾಹು ಅನ್ಯಾಯವೆಸಗುವವನಲ್ಲ. ಪ್ರತಿಯಾಗಿ ಇಹಲೋಕದಲ್ಲಿ ಆತನಿಗೆ ಜೀವನಾನುಕೂಲತೆಗಳನ್ನು ನೀಡಿ ಅನುಗ್ರಹಿಸಲಾಗುವುದು ಮತ್ತು ಪರಲೋಕದಲ್ಲೂ ಆತನಿಗೆ ಸಮ್ಮಾನವಿದೆ. ಆದರೆ ಅವಿಶ್ವಾಸಿಗೆ ಆತನ ಉತ್ತಮ ಕಾರ್ಯದ ಪ್ರತಿಫಲವನ್ನು ಈ ಲೋಕದಲ್ಲಿ ಅವನಿಗೆ ಜೀವನಾನುಕೂಲತೆಗಳನ್ನು ಒದಗಿಸುವ ಮೂಲಕ ನೀಡಲಾಗುತ್ತವೆಯೇ ಹೊರತು ಪುನರುತ್ಥಾನದಿನದಂದು ಆತ ಯಾವುದೇ ಸತ್ಕರ್ಮವನ್ನು ಹೊಂದಿರಲಾರನು." (ತಫ್ಸೀರ್ ಇಬ್ನು ಕಸೀರ್‌ನಿಂದ ಉಲ್ಲೇಖ) ಆದ್ದರಿಂದ ಪೂರ್ವಕಾಲದಲ್ಲಿ ತಾನು ಮಾಡಿದ ಕೆಲವು ಸತ್ಕರ್ಮಗಳ ಪ್ರತಿಫಲವಾಗಿ ಇಬ್ಲೀಸನಿಗೆ ಕಾಲಾವಕಾಶವನ್ನು ನೀಡಲಾಯ್ತು.

3. ಇಬ್ಲೀಸನ ಪಾಪವು ಅತ್ಯಂತ ಗುರುತರವಾಗಿತ್ತು. ಆತನು ಅಲ್ಲಾಹನ ಸಾರ್ವಭೌಮತೆ ಹಾಗೂ ಜ್ಞಾನವನ್ನು ಪ್ರಶ್ನಿಸಿದನು ಮತ್ತು ಅವಿಧೇಯತೆಯಲ್ಲಿ ಅಚಲವಾಗಿ ಪಟ್ಟು ಹಿಡಿದು ನಿಂತುಬಿಟ್ಟನು. ಮೇಲಾಗಿ, ಆತ ಕೆಡುಕು ಹಾಗೂ ಅವಿಶ್ವಾಸದ ಮುಂದಾಳು ಮತ್ತು ಮೂಲವಾಗಿದ್ದಾನೆ. ಅತಿಕ್ರಮಗಳ ಅಗ್ರೇಸರನಾದ ಶೈತಾನನ್ನು ಅನುಸರಿಸಿಯೇ ಎಲ್ಲಾ ಕೆಡುಕುಗಳು ಜನ್ಮ ತಾಳಿದ್ದರಿಂದಾಗಿ ಆತನ ಶಿಕ್ಷೆಯ ಪ್ರಮಾಣವೂ ಅದೇ

ಪ್ರಕಾರದಲ್ಲಿರಬೇಕಾಗುತ್ತದೆ. ಆದ್ದರಿಂದ ಆತನ ಪಾಪಕೃತ್ಯಗಳು ಹೆಚ್ಚುವಂತಾಗಲು ಆತನಿಗೆ ಗರಿಷ್ಠ ಅವಧಿ ನೀಡಲ್ಪಟ್ಟಿತು. ಅವನಿಗೆ ಅಂತ್ಯ ದಿನದವರೆಗೆ ನೀಡಲ್ಪಟ್ಟಿರುವ ಕಾಲಾವಕಾಶವು ಆತನಿಗೆ ನೀಡಿದ ಗೌರವವೇನಲ್ಲ. ಶೈತಾನನ ಕುರಿತು ಹೇಳುವುದಾದರೆ, ಆತನ ಕೆಡುಕು ಹಾಗೂ ಆತ ಪಡೆಯಲಿರುವ ಶಿಕ್ಷೆಯು ಕಡಿಮೆಗೊಳ್ಳುವಂತಾಗಲು ಮರಣವು ಆತನಿಗೆ ಅತ್ಯುತ್ತಮವಾಗಿತ್ತು

4. ಆದಮರ عليه السلام ಸಂತತಿಗಳಲ್ಲಿ ಕೆಲವರು ಸ್ವರ್ಗವಾಸಕ್ಕೆ ಯೋಗ್ಯರಲ್ಲವೆಂದು ಅಲ್ಲಾಹು ತಿಳಿದಿರುವನು. ಅಂತಹವರನ್ನು ಅವನು ಶೈತಾನನ ಪಥಭ್ರಷ್ಟತೆಯ ಹಾದಿಯನ್ನು ತುಳಿಯಲು ಬಿಟ್ಟು ಬಿಟ್ಟನು. ಹೀಗೆ ಶೈತಾನನು ಅಂತವರಿಗಾಗಿ ಹೊಂಚುಹಾಕಿ ತಕ್ಕ ಸಂದರ್ಭ ಲಭಿಸಿದಾಗಲೆಲ್ಲಾ ಅವರನ್ನು ತನ್ನ ಕುತಂತ್ರದಲ್ಲಿ ಕೆಡವುತ್ತಾನೆ.

---

**"ಸಾಷ್ಟಾಂಗದ (ಸಜ್ದ) ಕುರಿತಾದ ಸೂಕ್ತವೊಂದನ್ನು ಪಠಿಸಿದರೆ ನೀವು ಸಾಷ್ಟಾಂಗವೆರಗಿರಿ.** ಆಗ ಶೈತಾನನು ಅಳುತ್ತಾ ಅಲ್ಲಿಂದ ನಿರ್ಗಮಿಸುತ್ತಾನೆ ಮತ್ತು ಹೇಳುತ್ತಾನೆ, "ಆತನಿಗೆ ನಾಶವಿರಲಿ! ಆತನು ಸಾಷ್ಟಾಂಗವೆರಗಲು ಆಜ್ಞಾಪಿಸಲ್ಪಟ್ಟನು ಮತ್ತು ಸಾಷ್ಟಾಂಗವೆರಗಿದನು. ಆದುದರಿಂದ ಆತನಿಗೆ ಸ್ವರ್ಗವಿದೆ. ನನಗೆ ಸಾಷ್ಟಾಂಗವೆರಗಲು ಆಜ್ಞಾಪಿಸಲ್ಪಟ್ಟಾಗ ನಾನು ನಿರಾಕರಿಸಿದೆನು. ಆದ್ದರಿಂದ ನನಗೆ ನರಕಾಗ್ನಿಯಿದೆ." [ಸಹೀಹ್ ಮುಸ್ಲಿಮ್]

---

# ಇಬ್ಲೀಸ್ ಸನ್ಮಾರ್ಗವಂಚಿತನಾಗಲು ಅರ್ಹನಾಗಿದ್ದನು

ತನ್ನ ಕೈಗಳ ಸಂಪಾದನೆಯ (ದುಷ್ಕೃತ್ಯಗಳ) ಕಾರಣಕ್ಕಾಗಿ ಇಬ್ಲೀಸನು ಸನ್ಮಾರ್ಗದಿಂದ ವಂಚಿತನಾಗಲು ಅರ್ಹನಾಗಿದ್ದನು. ಈ ಜಗತ್ತಿನ ಏಕೈಕ ಒಡೆಯನಾದ ಅಲ್ಲಾಹು ಸರ್ವಶಕ್ತನಾಗಿದ್ದಾನೆ ಎಂಬ ವಾಸ್ತವವನ್ನು ಮರೆತು ಇಬ್ಲೀಸನು ಸ್ವಯಂ ತನ್ನ ಬಗ್ಗೆ ಅತಿಯಾಗಿ ಹೆಮ್ಮೆಪಟ್ಟುಕೊಂಡನು. ತನ್ನನ್ನು ಸೃಷ್ಟಿಸಿ, ಪರಿಪಾಲಿಸಿ ತನಗೆ ಅರಿವನ್ನು ದಯೆಪಾಲಿಸಿದವನು ಅಲ್ಲಾಹನು ಎಂಬ ವಿವೇಚನೆ ಆತನಿಗಿಲ್ಲವಾಯಿತು. ಆದುದರಿಂದ ಅಲ್ಲಾಹು ಆತನನ್ನು ಆತನ ಅಹಂಭಾವದೊಂದಿಗೆ ಬಿಟ್ಟು ಬಿಟ್ಟನು. ಇದರ ಫಲಿತಾಂಶವೆಂಬಂತೆ ಇಬ್ಲೀಸನು ಪಥಭ್ರಷ್ಟತೆಯನ್ನು ಅಪ್ಪಿಕೊಂಡನು.

ಅಹಂಭಾವ, ಬಂಡಾಯ ಮತ್ತು ಅವಿಧೇಯತೆಯು ಶೈತಾನನಿಂದ ಪ್ರಾರಂಭವಾಗಿತ್ತು. ಈ ಕಾರಣದಿಂದಲೇ ಆತನು ಏಕಾಂಗಿಯಾಗಿ ಹೊರತಳ್ಳಲ್ಪಡಲು ಅರ್ಹನಾಗಿದ್ದ ಮತ್ತು ಫಲಸ್ವರೂಪವಾಗಿ "ಕುಫ್ರ್"ನ (ಅವಿಶ್ವಾಸದ) ಅಂಧಕಾರದಲ್ಲಿ ಮುಳುಗಿಹೋದನು. ಅಲ್ಲಾಹು ಕುರ್‌ಆನ್‌ನಲ್ಲಿ ನಮಗೆ ಹೇಳುತ್ತಾನೆ,

"ಅಲ್ಲಾಹು 'ಫಾಸಿಖೂನ್'ಗಳನ್ನು (ಅವಿಧೇಯರು ಮತ್ತು ಅಜ್ಞೋಲ್ಲಂಘಕರನ್ನು) ಸನ್ಮಾರ್ಗದತ್ತ ಮುನ್ನಡೆಸಲಾರನು." (ಸೂರ–ಅಲ್ ಮಾಇದ:108)

ಅಲ್ಲಾಹು ಯಾರೊಂದಿಗೂ ಅನ್ಯಾಯವನ್ನು ತೋರುವವನಲ್ಲ. ಸ್ವಯಂ ಮನುಷ್ಯನ ಆತ್ಮವು ಅನ್ಯಾಯದ ಮೂಲವಾಗಿದೆ. ಸೃಷ್ಟಿಗಳು "ಕುಫ್ರ್"ನ ಪಥದಲ್ಲಿ ಸಾಗಿ ತಮಗೆ ತಾವೇ ಅನ್ಯಾಯವನ್ನೆಸಗಿಕೊಳ್ಳುತ್ತಿದ್ದಾರೆ. ಅಲ್ಲಾಹನು ಪ್ರತಿಯೊಬ್ಬರಿಗೂ ಅವರು ಸಾಗಬಯಸಿದ ಪಥದಲ್ಲಿ ಹೋಗಲು ಅನುಮತಿಸುತ್ತಾನೆ. ಇನ್ನು ಯಾರಾದರು "ಕುಫ್ರ್"ನ ಪಥವನ್ನು ಸ್ವೀಕರಿಸಿ ವಿಮುಖತೆಯನ್ನು ಪ್ರದರ್ಶಿಸಿಸುತ್ತಿರುವರಾದರೆ ಅಲ್ಲಾಹನಿಗೆ ಸೃಷ್ಟಿಗಳ ಯಾವ ಅಗತ್ಯವೂ ಇಲ್ಲ ಎಂಬುವುದು ದಿಟವಾಗಿದೆ.

ಶೈತಾನನ

# ತಂತ್ರಗಳು

ಹಾಗೂ

# ಸಂಚುಗಳು

ಮನುಷ್ಯ ಶರೀರದೊಳಗೆ ಪ್ರವಹಿಸುವಂತಹ ಸಾಮರ್ಥ್ಯವನ್ನು ಅಲ್ಲಾಹು ಶೈತಾನನಿಗೆ ನೀಡಿದ್ದಾನೆ. ಆದರೆ ಅದು ಯಾವ ರೀತಿಯಲ್ಲಿ ಎಂದು ನಾವು ಅರಿತಿಲ್ಲವೆಂದು ಮಾತ್ರ. ಅಲ್ಲಾಹನ ಪ್ರವಾದಿﷺ ಹೇಳಿದರು, “ಆದಮರ ಸಂತತಿಗಳಲ್ಲಿ ಶೈತಾನನು ರಕ್ತದಂತೆ ಪ್ರವಹಿಸುತ್ತಾನೆ.” (ಮಿಶ್ಕಾತ್–ಅಲ್ ಮಸಾಬೀಹ್)

ಶೈತಾನನು ವ್ಯಕ್ತಿಯೊಬ್ಬನ ಹೃದಯ ಹಾಗೂ ಮನಸ್ಸಿಗೆ ನಿಲುಕಿ ಹರಾಮ್ ಆದ (ನಿಷಿದ್ಧವಾದ) ಕಾರ್ಯಗಳನ್ನು ಕೇಳುವಂತೆ ಹಾಗೂ ನೋಡುವಂತೆ ಆತನನ್ನು ಪ್ರಲೋಭಿಸಿ ದುರಾಚಾರಗಳನ್ನು ಎಸಗುವಂತೆ ಆತನ ಕಿವಿಯೂದಬಲ್ಲನು. ಇದನ್ನೇ ‘ವಸ್‌ವಾಸ್’ ಎನ್ನಲಾಗುತ್ತದೆ.

ಎಷ್ಟಾದರೂ ಶೈತಾನನು ನೇರವಾಗಿ ಮನುಷ್ಯರನ್ನು ಸಮೀಪಿಸಿ ತಮ್ಮ ಧರ್ಮವನ್ನು ತೊರೆಯಲು ಅವರೊಂದಿಗೆ ಹೇಳಲಾರನು. ಯಾವನೇ ವಿವೇಕವುಳ್ಳ ವ್ಯಕ್ತಿಯೋರ್ವನು ಅಲ್ಲಾಹನ ಆಜ್ಞೆಯನ್ನು ನಿರ್ಲಕ್ಷಿಸುತ್ತಾ, ಶೈತಾನನ್ನು ಅನುಸರಿಸಿ ಪ್ರತಿಯಾಗಿ (ಘೋರ ಪರಲೋಕ ಶಿಕ್ಷೆಯ) ಭಯಾನಕ ವಿಧಿಯೊಂದರ ಭಾಗವಾಗಲು ಬಯಸಲಾರನು!
ಮನುಷ್ಯರಾಶಿಯನ್ನು ಭ್ರಮೆಗೊಳಪಡಿಸಿ, ಅಲ್ಲಾಹನ ಧರ್ಮದಿಂದ ಅವರನ್ನು ತಪ್ಪು ದಾರಿಗೆಳೆದು ಅವರು ದುಷ್ಕೃತ್ಯಗಳಲ್ಲಿ ತಲ್ಲೀನರಾಗುವಂತೆ ಮಾಡಲು ಶೈತಾನನಿಗೆ ತನ್ನದೇ ಆದ ಕಾರ್ಯ ವಿಧಾನಗಳಿವೆ. ಮುಂದಿನ ಪುಟಗಳಲ್ಲಿ ಶೈತಾನನ ತಂತ್ರಗಳು ಹಾಗೂ ಸಂಚುಗಳತ್ತ ಒಂದು ಸಂಕ್ಷಿಪ್ತ ನೋಟವನ್ನು ಬೀರೋಣ.

# ಮಾನವ ಸಮುದಾಯವನ್ನು ಪಥಭ್ರಷ್ಟಗೊಳಿಸಲು ಶೈತಾನನಿಗೆ ಯಾಕಿಷ್ಟು ತವಕ?

ಪುನರುತ್ಥಾನ ದಿನದವರೆಗೂ ಜೀವಂತವಾಗಿರಲು ಅಲ್ಲಾಹನು ಸಮ್ಮತಿಸಿದ ಬಳಿಕ ಶೈತಾನನು ಪುನಃ ಸೊಕ್ಕಿನಿಂದ ಬೀಗಿದ. ಆದಮ್‌ರವರೊಂದಿಗೆ(عليه السلام) ಸೇಡು ತೀರಿಸಲು ಇದು ಅತ್ಯುತ್ತಮ ವಿಧಾನ ಹಾಗೂ ಅವಕಾಶವೆಂದು ಆತ ಅರ್ಥೈಸಿಕೊಂಡನು.

ಆದಮರ(عليه السلام) ಸಂತತಿಯಾದ ಮಾನವ ಸಮುದಾಯದೊಂದಿಗೆ ಶೈತಾನನಿಗೆ ಅತಿಯಾದ ದ್ವೇಷವಿದೆ. ಏಕೆಂದರೆ ಮನುಷ್ಯರ ಆದಿಪಿತರಾದ ಆದಮ್‌ರವರ(عليه السلام) ಮುಂದೆ ಸಾಷ್ಟಾಂಗವೆರಗಲು ನಿರಾಕರಿಸಿದ ಫಲಸ್ವರೂಪವಾಗಿ ಶಾಪಗ್ರಸ್ತನೂ, (ಅಲ್ಲಾಹನ) ಅನುಗ್ರಹ ವಂಚಿತನೂ ಆದ ಕಾರಣದಿಂದಾಗಿಯೇ ಆತ ಮನುಷ್ಯರೊಂದಿಗೆ ಹಗೆತನವನ್ನಿಟ್ಟುಕೊಂಡಿರುವುದು.

“ಅವನು (ಇಬ್ಲೀಸ್) ಅಲ್ಲಾಹನೊಡನೆ ಹೇಳಿದ, “ನಿನ್ನ ದಾಸರ ಪೈಕಿ ನಿರ್ದಿಷ್ಟ ಪಾಲನ್ನು (ನಾನು) ನನ್ನದನ್ನಾಗಿ ಮಾಡಿಕೊಳ್ಳುವೆನು. ನಿಶ್ಚಯವಾಗಿಯೂ, ನಾನವರನ್ನು ದಾರಿಗೆಡಿಸುವೆನು....” (ಸೂರ ಅನ್ನಿಸಾ 118-119ರ ಅರ್ಥ ವಿವರಣೆಯನ್ನು ನೋಡಿ)

ತನ್ನ ಅಂತಿಮ ತಾಣ ನರಕವಾಗಿದೆ ಎಂದು ಅರಿತಿರುವ ಇಬ್ಲೀಸ್ ಸಾಧ್ಯವಾದಷ್ಟು ಮಟ್ಟಿಗೆ ತನ್ನ ಅನುಯಾಯಿಗಳ ಸಂಖ್ಯೆಯನ್ನು ಹೆಚ್ಚಿಸಿ ತನಗೆ ಲಭಿಸಲಿರುವ ಭಯಾನಕವಾದ ನರಕ ಶಿಕ್ಷೆಯಲ್ಲಿ ಅವರನ್ನೂ ಭಾಗೀದಾರರನ್ನಾಗಿಸಲು ಪಣತೊಟ್ಟಿರುವುದರಿಂದಾಗಿ ಮಾನವ ರಾಶಿಯನ್ನು ಪಥಭ್ರಷ್ಟರನ್ನಾಗಿಸಲು ತವಕಪಡುತ್ತಿದ್ದಾನೆ. ತನ್ನ ಈರ್ಷ್ಯೆ, ದ್ವೇಷ, ಕುಫ್ರ್ ಹಾಗೂ ಮೊಂಡುತನದಿಂದಾಗಿ ಆತ ಪ್ರತಿಯೊಬ್ಬರನ್ನೂ ತನ್ನ ಸಂಗಡ ನರಕಕ್ಕೆ ಒಯ್ಯಲು ಇಚ್ಚಿಸುತ್ತಾನೆ. ಕುರ್‌ಆನ್‌ನಲ್ಲಿ ಲೋಕಾಧಿಪತಿಯಾದ ಅಲ್ಲಾಹನು ಪ್ರಖ್ಯಾಪಿಸುತ್ತಾನೆ; “ನಿಶ್ಚಯವಾಗಿಯೂ, ಶೈತಾನನು ನಿಮ್ಮ ಶತ್ರುವಾಗಿದ್ದಾನೆ. ಆದುದರಿಂದ ಅವನನ್ನು ನೀವು ನಿಮ್ಮ ಶತ್ರುವೆಂದೇ ಪರಿಗಣಿಸಿರಿ. ಅವನು ತನ್ನ “ಹಿಝ್ಬ್”ನ್ನು (ಅನುಯಾಯಿಗಳನ್ನು) ಆಹ್ವಾನಿಸುತ್ತಿರುವುದು ಅವರು ನರಕವಾಸಿಗಳ ಪೈಕಿಯಲ್ಲಾಗಲೆಂದು ಮಾತ್ರವಾಗಿದೆ ." (ಸೂರ ಅಲ್ ಫಾತಿರ್: 6)

# ಪಾಪಕೃತ್ಯಗಳನ್ನೆಸಗುವಂತೆ ಮನುಷ್ಯರನ್ನು ಬಲವಂತ ಪಡಿಸುವ ಶಕ್ತಿಯನ್ನು ಶೈತಾನನು ಹೊಂದಿಲ್ಲ.

ಶಾಪಗ್ರಸ್ತನಾಗಿ ನಿಶ್ಚಿತ ದಿವಸದವರೆಗೂ ಕಾಲಾವಕಾಶವನ್ನು ಪಡೆದುಕೊಂಡು ಸ್ವರ್ಗದಿಂದ ಹೊರದಬ್ಬಲ್ಪಟ್ಟ ನಂತರ ಶೈತಾನನು ಈ ರೀತಿ ಪ್ರಕಟಿಸುತ್ತಾನೆ;

"....... ನಿನ್ನ ನೇರಮಾರ್ಗದಲ್ಲಿ ಅವರು (ಮನುಷ್ಯರು)
ಪ್ರವೇಶಿಸುವುದನ್ನು ತಡೆಯಲು ನಾನು ಕಾಯುವೆನು.
ನಂತರ (ಅವರನ್ನು ಭ್ರಷ್ಟಗೊಳಿಸಲು) ಅವರ ಮುಂದಿನಿಂದಲೂ,
ಹಿಂದಿನಿಂದಲೂ, ಅವರ ಬಲಭಾಗದಿಂದಲೂ,
ಎಡ ಭಾಗದಿಂದಲೂ ನಾನು ಅವರ ಬಳಿ ಹೋಗಿಯೇ ತೀರುವೆನು.
ಅವರ ಪೈಕಿಯಲ್ಲಿ ಹೆಚ್ಚಿನವರನ್ನು ನೀನು ಕೃತಜ್ಞರನ್ನಾಗಿ ಕಾಣಲಾರೆ."
**(ಸೂರ ಅಲ್-ಅಅ್‌ರಾಫ್: 16, 17)**

ಇಬ್ನು ಅಬ್ಬಾಸ್ؓ ಇದರ ಕುರಿತು ವಿವರಿಸುತ್ತಾರೆ, "ಶೈತಾನನು ಈ (ಮೇಲಿನ) ಮಾತುಗಳನ್ನು ಹೇಳುವಾಗ ಅದು ಆತನ ಹಮ್ಮು ಮತ್ತು ಅಂದಾಜು (ಊಹೆ) ಮಾತ್ರವಾಗಿತ್ತು. ಹೀಗಿದ್ದರೂ ಆತನ ಊಹೆ ಸತ್ಯವಾಯಿತು. ಕಾರಣವೇನೆಂದು ಅಲ್ಲಾಹನು ಸೂರ ಸಬಾದಲ್ಲಿ ಹೇಳುತ್ತಾನೆ."

"ನಿಶ್ಚಯವಾಗಿಯೂ, (ಮನುಷ್ಯರ ಕುರಿತಾದ) ತನ್ನ ಊಹೆಯು
ಸರಿಯಾಗಿತ್ತೆಂದು ಇಬ್ಲೀಸನು ಅವರ ಮುಖಾಂತರ ರುಜುವಾತು ಪಡಿಸಿದನು,
ಅವರು (ಮನುಷ್ಯರು) ಆತನನ್ನು ಅನುಸರಿಸಿದರು.
ಸತ್ಯ ವಿಶ್ವಾಸಿಗಳ ಒಂದು ಗುಂಪಿನ ಹೊರತು.
ಅವರ ಮೇಲೆ ಅವನಿಗೆ (ಇಬ್ಲೀಸನಿಗೆ) ಯಾವ ಸ್ವಾಧೀನವೂ ಇರಲಿಲ್ಲ. (ಆದರೆ)
ಇದು ಪರಲೋಕದ ಮೇಲೆ ವಿಶ್ವಾಸವಿಟ್ಟವರನ್ನು ಅದರ ಕುರಿತು

ಸಂದೇಹವಿಟ್ಟವರಿಂದ ನಾವು ಬೇರ್ಪಡಿಸಿ ತಿಳಿಯಲೆಂದು ಮಾತ್ರವಾಗಿದೆ.
ಮತ್ತು ನಿನ್ನ ಪ್ರಭುವು ಎಲ್ಲಾ ಕಾರ್ಯಗಳನ್ನು ಗಮನಿಸುತ್ತಿರುವವನಾಗಿದ್ದಾನೆ."
(ಸೂರ ಸಬಾ 20, 21)

ಶೈತಾನನು ವಿಶ್ವಾಸಿಗಳ ಮೇಲೆ ಯಾವುದೇ ರೀತಿಯ ಅಧಿಕಾರವನ್ನು ಹೊಂದಿರುವುದಿಲ್ಲ. ಆತನ ಸಿದ್ಧಾಂತವನ್ನು ಒಪ್ಪಿಕೊಳ್ಳುತ್ತಾ ಸ್ವಇಚ್ಛೆಯಿಂದ ಆತನನ್ನು ಅನುಸರಿಸುವವರ ಮೇಲೆ ಮಾತ್ರ ಆತ ನಿಯಂತ್ರಣ ಹೊಂದುವ ಸಾಮರ್ಥ್ಯವನ್ನು ಪಡೆದಿದ್ದಾನೆ. ಇಬ್ಲೀಸನು ಆದಮರ(ﷺ) ಸಂತತಿಗಳನ್ನು ಪಥಭ್ರಷ್ಟಗೊಳಿಸಲು ಆಲೋಚಿಸಿದಾಗ ಅಲ್ಲಾಹನು ಆತನೊಂದಿಗೆ ಹೇಳುತ್ತಾನೆ;

"ನಿಶ್ಚಯವಾಗಿಯೂ, ನನ್ನ ದಾಸರ ಮೇಲೆ
ನಿನಗೆ ಯಾವುದೇ ಅಧಿಕಾರವಿಲ್ಲ!
ನಿನ್ನನ್ನು ಅನುಸರಿಸುವ 'ಗಾವೀನ್'ಗಳ (ದುರ್ಮಾರ್ಗಿಗಳು,
ಪಾತಕಿಗಳು, ಬಹುದೇವಾರಾಧಕರು, ಪಾಪಿಗಳು) ಹೊರತು".
(ಸೂರ ಅಲ್–ಹಿಜ್ರ್ :42)

ಮತ್ತು ಸೂರ ಅನ್ನಹ್ಲ್‌ನಲ್ಲಿಯೂ ಈ ವಿಷಯವನ್ನು ಅಲ್ಲಾಹು ಪ್ರಸ್ತಾಪಿಸಿದ್ದಾನೆ;

"ಸತ್ಯ ವಿಶ್ವಾಸವನ್ನು ಕೈಗೊಂಡು, ತಮ್ಮ ಪ್ರಭುವಿನಲ್ಲಿ (ಅಲ್ಲಾಹನಲ್ಲಿ)
ಮಾತ್ರ ಭರವಸೆಯನ್ನಿಟ್ಟವರ ಮೇಲೆ ಆತ (ಶೈತಾನನು)
ಯಾವುದೇ ನಿಯಂತ್ರಣವನ್ನು ಹೊಂದಿರಲಾರನು; ದಿಟ. ಅವನ ನಿಯಂತ್ರಣವು
ಅವನನ್ನು ತಮ್ಮ ಮಿತ್ರನನ್ನಾಗಿ ಮಾಡಿಕೊಂಡವರ ಹಾಗೂ
ಅಲ್ಲಾಹನಿಗೆ ಸಹಭಾಗಿಗಳನ್ನು
ನಿಶ್ಚಯಿಸುವವರ ಮೇಲೆ (ಶಿರ್ಕ್ ಮಾಡುವವರ) ಮಾತ್ರವಾಗಿದೆ."
(ಸೂರ ಅನ್ನಹ್ಲ್ 99-100)

ಈ ಪ್ರಕಾರ ಶೈತಾನನು ಮನುಷ್ಯರಿಗೆ ಪಥಭ್ರಷ್ಟತೆಯನ್ನು ಆಕರ್ಷಣೀಯವಾಗಿ ತೋರಿಸಿ ಅವರನ್ನು ತನ್ನಡೆಗೆ ಆಹ್ವಾನಿಸಬಲ್ಲನೇ ಹೊರತು ಅದಕ್ಕಿಂತ ಹೆಚ್ಚಾಗಿ ಏನೂ ಮಾಡಬಲ್ಲವನಲ್ಲ. ತನಗೆ ಬೇಕಾದುದ್ದನ್ನು ಬಲವಂತವಾಗಿ ಜನರಿಂದ ಮಾಡಿಸಿಕೊಳ್ಳುವ ಸಾಮರ್ಥ್ಯವನ್ನು ಆತ ಹೊಂದಿಲ್ಲ. ತಮ್ಮ ಇಚ್ಛೆ ಹಾಗೂ ಚಪಲತೆಗೆ ಸರಿ ಹೊಂದುವ (ಒಗ್ಗುವ) ಕಾರಣದಿಂದಾಗಿದೆ ಶೈತಾನನ ಕರೆಗೆ ಜನರು ಓಗೊಡುವುದು. ಆದುದರಿಂದ ಶೈತಾನನ ಕರೆಗೆ ಓಗೊಡುವವರನ್ನೇ ಇದಕ್ಕಾಗಿ ನಾವು ಆಕ್ಷೇಪಿಸಬೇಕಾಗುತ್ತದೆ.

ಪುನರುತ್ಥಾನ ದಿನದಂದು 'ಖರೀನ್' (ಪಾಪಕೃತ್ಯಗಳನ್ನೆಸಗಲು ಉತ್ತೇಜನ ನೀಡುವ ಮನುಷ್ಯನ ಸಂಗಡವಿರುವ ಜಿನ್ನ್ ಸಹವಾಸಿ) ಮನುಷ್ಯನಿಗೆದುರಾಗಿ ಅಲ್ಲಾಹನ ಮುಂದೆ ಸಾಕ್ಷಿ ಹೇಳಲಿದೆ. ಅಸತ್ಯವನ್ನು ಚೆನ್ನಾಗಿ ಗ್ರಹಿಸುವವನಾಗಿದ್ದೂ ಸತ್ಯವನ್ನು ವಿರೋಧಿಸಿದ ಮನುಷ್ಯನ ಪಾಪಕೃತ್ಯಗಳಲ್ಲಿ ತನ್ನ ಪಾತ್ರವನ್ನು ನಿರಾಕರಿಸುತ್ತಾ ಮನುಷ್ಯನು ಸ್ವಯಂ ಪಥಭ್ರಷ್ಟತೆಯನ್ನು ಆಯ್ದು ಕೊಂಡನೆಂದು ಖರೀನ್ ಹೇಳಲಿರುವುದಾಗಿ ಅಲ್ಲಾಹು ನಮಗೆ ತಿಳಿಸುತ್ತಾನೆ;

"ಅವನ ಸಹಚರನು (ಖರೀನ್) ಹೇಳುವನು,
'ನಮ್ಮ ಪ್ರಭು! ನಾನು ಇವನನ್ನು (ಸನ್ಮಾರ್ಗದಿಂದ) ಹಾದಿ ತಪ್ಪಿಸಲಿಲ್ಲ
ಆದರೆ ಇವನು ದುರ್ಮಾರ್ಗದಲ್ಲಿ ಬಹುದೂರ ಸಾಗಿಬಿಟ್ಟಿದ್ದನು.'
(ಅಲ್ಲಾಹು) ಹೇಳುವನು, 'ನನ್ನ ಬಳಿ ನೀವು ವಾಗ್ವಾದ ಮಾಡಬೇಡಿರಿ. ನಾನು ನಿಮಗೆ
ಮುಂಚೆಯೇ (ಘೋರ ಪರಿಣಾಮದ ಕುರಿತಾದ) ಎಚ್ಚರಿಕೆಯನ್ನು ನೀಡಿದ್ದೆನು.
ನನ್ನಲ್ಲಿ ಮಾತು ಬದಲಾಯಿಸಲ್ಪಡುವುದಿಲ್ಲ,
ನಾನು ದಾಸರೊಂದಿಗೆ ಒಂದಿಷ್ಟು ಅಕ್ರಮವೆಸಗುವವನಲ್ಲ."
(ಸೂರ ಕಾಫ್: 27-29)

**ವಿಶ್ವಾಸಿಗಳ ಪಾಪಕೃತ್ಯಗಳ ಕಾರಣದಿಂದಾಗಿ ಶೈತಾನನಿಗೆ ಅವರ ಮೇಲೆ ನಿಯಂತ್ರಣವನ್ನು ಹೊಂದುವ ಶಕ್ತಿಯನ್ನು ನೀಡಲಾಯ್ತು.** ಪ್ರವಾದಿ ಮುಹಮ್ಮದ್ ﷺ ನ್ಯಾಯಧೀಶರೊಬ್ಬನ ಉಪಮೆಯನ್ನು ನಮ್ಮ ಮುಂದಿಡುತ್ತಾ ಈ ರೀತಿ ಹೇಳಿದರು, "ಒಬ್ಬ ಖಾಝಿಯು (ನ್ಯಾಯತೀರ್ಪುಗಾರ) ಅತಿಕ್ರಮ (ಅನ್ಯಾಯ)ವೆಸಗದಿರುವವರೆಗೂ ಅಲ್ಲಾಹು ಅವನೊಂದಿಗಿರುತ್ತಾನೆ. ಅವನು ಅತಿಕ್ರಮವೆಸಗಿದರೆ ಅಲ್ಲಾಹು ಅವನಿಂದ ದೂರವಾಗುತ್ತಾನೆ ಹಾಗೂ ಶೈತಾನನ್ನು ಅವನ ಸಂಗಡ ಬಿಡುತ್ತಾನೆ. (ಹಸನ್) (ಅಲ್ ಹಾಕಿಮ್ ಮತ್ತು ಬೈಹಕಿ)

# ಶೈತಾನನ್ನು ನೀನು ಸೋಲಿಸಬಲ್ಲೆ.

ವಿಶ್ವಾಸಪಥದಲ್ಲಿ ದೃಢವಾಗಿ ನೆಲೆನಿಂತು ಅಲ್ಲಾಹನು ನಿಶ್ಚಯಿಸಿದ ಮಿತಿಗಳನ್ನು ಗಮನವಿಟ್ಟು ಪಾಲಿಸುವಂತಹ ವ್ಯಕ್ತಿಯೊಬ್ಬನು ಶೈತಾನನ್ನು ಸೋಲಿಸಬಲ್ಲವನಾಗಿದ್ದಾನೆ. ಅಲ್ಲಾಹನ ಪ್ರವಾದಿﷺ ಹೇಳಿದರು, "ನಿಮ್ಮಲ್ಲೊಬ್ಬನು ಯಾತ್ರಾ ಮಧ್ಯೆ ತನ್ನ ಒಂಟೆಯ ಮುಂದಲೆಯನ್ನು ಹಿಡಿಯುವ ಹಾಗೆಯೇ ಒಬ್ಬ ಸತ್ಯವಿಶ್ವಾಸಿಯು ತನ್ನೊಂದಿಗಿರುವ ಶೈತಾನನ ಮುಂದಲೆಯನ್ನು ಹಿಡಿಯಬಲ್ಲನು" (ಮುಸ್ನದ್ ಅಹ್ಮದ್)

ಇಮಾಮ್ ಇಬ್ನುಕಸೀರ್(ರಹಿಮಹುಲ್ಲಾಹ್) ಈ ಬಗ್ಗೆ ವಿವರಿಸುತ್ತಾರೆ "ಆತನ ಮುಂದಲೆಯನ್ನು ಹಿಡಿಯುವುದು ಎನ್ನುವುದರ ಅರ್ಥವು ಆತನನ್ನು ಮೀರಿ ನಿಲ್ಲುವುದು ಮತ್ತು ಆತನನ್ನು ಪರಾಜಿತಗೊಳಿಸುವುದು ಎಂದಾಗಿದೆ. ಒಂಟೆಯೊಂದು ಓಡುವಾಗ ಒಬ್ಬನು (ಅದರ ಮುಂದಲೆಯನ್ನು ಹಿಡಿದು) ಮಾಡುವ ರೀತಿಯಲ್ಲಿ. ನೀನು ಅವನನ್ನು ವಶಪಡಿಸಿಕೊಂಡು ನಿನ್ನ ಅಧೀನಕ್ಕೊಳಪಡಿಸು." (ಅಲ್ ಬಿದಾಯ ವನ್ನಿಹಾಯ 1/73)

ಇದರಿಂದಾಗಿ ಶೈತಾನನು ಅಂಜಿ ದೃಢ ವಿಶ್ವಾಸಿಗಳಿಂದ ದೂರ ಪಲಾಯನಗೈಯ್ಯುತ್ತಾನೆ. ಉದಾಹರಣೆಗೆ, ಪ್ರವಾದಿﷺ ಉಮರ್ ಇಬ್ನ್ ಖತ್ತಾಬ್‌ರವರ رضي الله عنه ಕುರಿತು ಈ ರೀತಿ ಹೇಳಿದ್ದರು. "ಓ ಉಮರ್! ಶೈತಾನ್ ಖಂಡಿತವಾಗಿಯೂ ನಿಮ್ಮ ಬಗ್ಗೆ ಭಯಪಡುತ್ತಿದ್ದಾನೆ.' ಅವರುﷺ ಪುನಃ ಹೇಳಿದರು, 'ಮನುಷ್ಯರು ಹಾಗೂ ಜಿನ್ನ್‌ಗಳ ಪೈಕಿಯಲ್ಲಿರುವ ಶಯಾತೀನ್‌ಗಳು ಕೂಡ ಉಮರ್‌ರಿಂದ ದೂರ ಓಡುತ್ತಿರುವುದನ್ನು ನಾನು ಕಾಣುತ್ತಿರುವೆನು. ಅಲ್ಲಾಹನ ಸಂದೇಶವಾಹಕರುﷺ ಮತ್ತೊಮ್ಮೆ ಉಮರ್‌ರವರೊಂದಿಗೆ رضي الله عنه ಹೇಳಿದರು, 'ನನ್ನ ಆತ್ಮವು ಯಾರ ಕೈಯಲ್ಲಿದೆಯೋ ಆತನಾಣೆ! ನೀವು ದಾರಿಯೊಂದರಲ್ಲಿ ಸಾಗುವುದನ್ನು ಶೈತಾನನು ಕಂಡರೆ (ಆ ದಾರಿಯನ್ನು ಬಿಟ್ಟು) ಆತ ಬೇರೆ ದಾರಿಯನ್ನು ಹಿಡಿಯದಿರಲಾರ."

# ಶೈತಾನನ ಕಾರ್ಯವಿಧಾನಗಳು

ಮಾನವ ಸಮುದಾಯವನ್ನು ನರಕಕ್ಕೆಳೆಯಬೇಕೆನ್ನುವ ತನ್ನ ಗುರಿಯನ್ನು ಸಾಧಿಸಲಿಕ್ಕಾಗಿ ಶೈತಾನನು ಪ್ರಥಮವಾಗಿ ಮೃತರೊಂದಿಗೆ ಸಹಾಯಯಾಚನೆ (ಪ್ರಾರ್ಥನೆ), ಯಕ್ಷಿಣಿ ವಿದ್ಯೆ(ಮಂತ್ರವಿದ್ಯೆ)ಯ ಅಭ್ಯಾಸ ಮುಂತಾದ ಕೃತ್ಯಗಳ ಮೂಲಕ ಶಿರ್ಕ್ ಮತ್ತು ಕುಫ್ರ್‌ನಲ್ಲಿ ತೊಡಗಿಕೊಳ್ಳುವಂತೆ ಮನುಷ್ಯರನ್ನು (ಮರುಳು ಗೊಳಿಸುತ್ತಾನೆ) ಪ್ರೇರೇಪಿಸುತ್ತಾನೆ. ಯಾಕೆಂದರೆ ಶಿರ್ಕ್ (ಅಲ್ಲಾಹನೊಂದಿಗೆ ಸಹಭಾಗಿಗಳನ್ನು ನಿಶ್ಚಯಿಸುವುದು) ಒಂದು ಮಹಾ ಪಾಪವಾಗಿದೆ. ಯಾರಾದರೂ ಶಿರ್ಕ್‌ನಲ್ಲಿ (ದೇವಸಹಭಾಗಿತ್ವ) ಮರಣ ಹೊಂದಿದರೆ ಅವನನ್ನು ಕ್ಷಮಿಸಲಾಗುವುದಿಲ್ಲ. ಮಾತ್ರವಲ್ಲ ಅವನು ಶಾಶ್ವತವಾಗಿ ನರಕಾಗ್ನಿಯಲ್ಲಿ ವಾಸಿಸುವನು.

ಆದ್ದರಿಂದ, ಅವನ ಪ್ರೇರಣೆಯಿಂದ ಆದಮರ(عليه السلام) ಸಂತತಿ ಶಿರ್ಕ್ ಎಂಬ ಮಹಾಪಾಪದಲ್ಲಿ ಮಿತಿಮೀರಿ ತಲ್ಲೀನರಾದರೆ ತನ್ನ ಮನೋರಥವು ಈಡೇರಿದ ತೃಪ್ತಿಯೊಂದಿಗೆ ಸಂತೋಷದಿಂದ ಶೈತಾನ್ ಹೀಗೆ ಹೇಳುವನೆಂದು ಕುರ್‌ಆನ್ ನಮಗೆ ತಿಳಿಸುತ್ತದೆ.

"ಇವರ ಉಪಮೆಯು ಶೈತಾನನಂತೆಯೇ ಇದೆ. ಮನುಷ್ಯನೊಂದಿಗೆ ಅವನು
'ನೀನು ಅಲ್ಲಾಹನಲ್ಲಿ ಅವಿಶ್ವಾಸವನ್ನು ಹೊಂದು' ಎಂದು ಹೇಳಿದ ಸಂದರ್ಭ;
ಹಾಗೆ ಅವರು (ಮನುಷ್ಯರು) ಅವಿಶ್ವಾಸವನ್ನು
ತಾಳಿದಾಗ ಅವನು (ಶೈತಾನ್) ಹೇಳಿದನು
'ನಿಶ್ಚಯವಾಗಿಯೂ, ನಾನು ನಿನ್ನಿಂದ ಸಂಬಂಧ ಮುಕ್ತನಾಗಿರುವೆನು.
ಖಂಡಿತವಾಗಿಯೂ ನಾನು ಜಗದೊಡೆಯನಾದ ಅಲ್ಲಾಹನನ್ನು ಭಯಪಡುತ್ತೇನೆ."
(ಸೂರ ಅಲ್ ಹಶ್ರ್:16)

ಇನ್ನು ಒಂದು ವೇಳೆ ಆತ ಜನರನ್ನು 'ಶಿರ್ಕ್' ಮತ್ತು 'ಕುಫ್ರ್'ನ ಪಥಭ್ರಷ್ಟತೆಗೆ ಎಳೆಯಲು ವಿಫಲನಾದರೂ ಆತ ಸುಲಭದಲ್ಲಿ ಮಣಿಯುವವನಲ್ಲ. ಆಗ ಅವರನ್ನು ಆತ ಬಿದ್‌ಅತ್‌ಗಳನ್ನು (ಧರ್ಮದಲ್ಲಿ ನೂತನ ಆಚಾರಗಳನ್ನು) ಅನುಸರಿಸುವಂತೆ ಪ್ರೇರೇಪಿಸುತ್ತಾನೆ. ಉದಾಹರಣೆಗೆ, ಅಲ್ಲಾಹನ ಪ್ರವಾದಿಯವರ ﷺ ಕಾಲದಲ್ಲಿರದಂತಹ ನೂತನ ಆಚರಣೆಗಳಾದ ಮೌಲೂದು ಪಾರಾಯಣ, ರಾತೀಬ್, ಮಿಲಾದುನ್ನಬಿ, ಉರೂಸ್, ಇಸ್ರಾ ಮತ್ತು ಮಿಅ್‌ರಾಜ್‌ನ ರಾತ್ರಿಯಂದು ನಡೆಸುವ ಆಚರಣೆಗಳು ಇತ್ಯಾದಿ.

ಸುಫ್‌ಯಾನ್ ಅತ್ತವರಿ (ರಹಿಮಹುಲ್ಲಾಹ್) ಹೇಳುತ್ತಾರೆ, "ಪಾಪಕೃತ್ಯಕ್ಕಿಂತಲೂ ಶೈತಾನನಿಗೆ ಹೆಚ್ಚು ಪ್ರಿಯವಾದುದು ಬಿದ್‌ಅತ್ (ನೂತನವಾದ) ಆಗಿದೆ. ಯಾಕೆಂದರೆ, ಒಬ್ಬನು ತನ್ನ ಪಾಪಗಳಿಗಾಗಿ ಪಶ್ಚಾತ್ತಾಪಪಡಬಹುದು. ಆದರೆ ಬಿದ್‌ಅತ್‌ಗಳಿಗಾಗಿ ಪಶ್ಚಾತ್ತಾಪ ಪಡಲಾರನು."

ಪಾಪಕೃತ್ಯಗಳನ್ನೆಸಗುವ ಒಬ್ಬಾತನು ಈ ಮೂಲಕ ತಾನು ಅಲ್ಲಾಹನಿಗೆ ಅವಿಧೇಯತೆಯನ್ನು ತೋರುತ್ತಿದ್ದೇನೆಂದು ಅರಿತಿರುತ್ತಾನೆ. ಮಾತ್ರವಲ್ಲ ಕೆಲವೊಮ್ಮೆ ಅದಕ್ಕಾಗಿ ಅಲ್ಲಾಹನೊಂದಿಗೆ ಕ್ಷಮೆಯನ್ನೂ ಯಾಚಿಸುತ್ತಾನೆ ಮತ್ತು ಕ್ಷಮಿಸಲ್ಪಡುತ್ತಾನೆ. ಆದರೆ ಬಿದ್‌ಅತ್‌ಗಳನ್ನು (ನೂತನ ಆಚಾರಗಳು) ಆಚರಿಸುವವನು ತನ್ನ ಕೃತ್ಯವನ್ನು ಅಲ್ಲಾಹನ ಆರಾಧನೆಯ ಒಂದು ಸ್ವರೂಪವೆಂದೇ ನಂಬುತ್ತಾನೆ ಮತ್ತು ಈ ಕಾರಣದಿಂದಲೇ ಆತ ಪಶ್ಚಾತ್ತಾಪಪಡುವ ವಿಚಾರವನ್ನೇ ಮಾಡಲಾರನು. "(ಪ್ರವಾದಿಯವರೇ) ಹೇಳಿರಿ, ತಮ್ಮ ಅತ್ಯಧಿಕ ಕರ್ಮಗಳೂ ನಷ್ಟವಾಗಿ ಹೋದವರ ಕುರಿತು ನಾನು ನಿಮಗೆ ತಿಳಿಸಲೇ? ತಮ್ಮ ಐಹಿಕ ಜೀವನದ ಪರಿಶ್ರಮದಲ್ಲಿ ಮಾರ್ಗಭ್ರಷ್ಟಗೊಂಡವರಾಗಿದ್ದಾರೆ ಅವರು. ತಾವು ಮಾಡುತ್ತಿರುವುದನ್ನು ಸತ್ಕರ್ಮವೆಂದೇ ಭಾವಿಸಿ ಕೊಂಡವರಾಗಿದ್ದಾರೆ ಅವರು." (ಸೂರ ಅಲ್‌ಕಹ್ಫ್: 103-104). ಇದರರ್ಥ; ಅವರು ನಿರ್ವಹಿಸಿದಂತಹ ಕರ್ಮಗಳು ಅಲ್ಲಾಹು ಮತ್ತು ಅವನ ಪ್ರವಾದಿಯವರ ﷺ ನಿರ್ದೇಶನಕ್ಕನುಗುಣವಾಗಿರಲಿಲ್ಲ. ಆದುದರಿಂದಲೇ ಅದು ಸ್ವೀಕಾರಾರ್ಹವಾಗುವುದಿಲ್ಲ.

ಇನ್ನು ನೂತನ ಆಚಾರ, ವಿಚಾರಗಳತ್ತ ಜನರನ್ನು ಸೆಳೆಯಲು ಶೈತಾನನು ವಿಫಲನಾದನೆಂದಾದರೆ ಮುಂದೆ ನಮಾಜ್‌ನ ಬಗ್ಗೆ ಅಲಕ್ಷ್ಯರಾಗಿಬಿಡುವಂತಹ ಮಹಾಪಾಪಗಳತ್ತ ಜನರನ್ನು ಆಹ್ವಾನಿಸುವ ನಿಟ್ಟಿನಲ್ಲಿ ಆತ ಕಾರ್ಯಪ್ರವೃತ್ತನಾಗುತ್ತಾನೆ. ವಿಶೇಷವಾಗಿಯೂ ಸಮುದಾಯದ ಮಧ್ಯೆ ಸ್ಥಾನಮಾನಗಳನ್ನು ಹೊಂದಿರುವಂತಹ ವ್ಯಕ್ತಿಗಳನ್ನು. ಯಾಕೆಂದರೆ, ಇಂತಹ ವ್ಯಕ್ತಿಗಳ ದೊಡ್ಡ ಸಂಖ್ಯೆಯಲ್ಲಿರುವ ಅನುಯಾಯಿಗಳು (ಹಿಂಬಾಲಕರು) ನಾಯಕರನ್ನು ಅನುಸರಿಸುವವರಾಗಿದ್ದಾರೆ. (ಉದಾಹರಣೆಗೆ ಕೆಲವು ಸೂಫಿಗಳ ಜೀವನಚರ್ಯೆಯನ್ನು ನೋಡಬಹುದು)

ಇನ್ನೂ ವಿಶ್ವಾಸಿಯೊಬ್ಬನು ತನ್ನ ವಿಶ್ವಾಸದಲ್ಲಿ ದೃಢವಾಗಿ ನೆಲೆಗೊಂಡನೆಂದಾದರೂ ಶೈತಾನನು ಎದೆಗುಂದುವವನಲ್ಲ. ಆಗ ಆತ ವಿಶ್ವಾಸಿಗಳನ್ನು ಸಣ್ಣ ಪಾಪಗಳತ್ತ ಪ್ರೇರೇಪಿಸುತ್ತಾನೆ.

'ಸುನನುತ್ತಿರ್ಮಿದಿ'ಯಲ್ಲಿ ಈ ವಿಷಯವು ದಾಖಲಿಸಲ್ಪಟ್ಟಿದೆ. "ಜಾಗರೂಕರಾಗಿರಿ, ನಿಮ್ಮ ಈ ನಾಡಿನಲ್ಲಿ ಶೈತಾನನು ಆರಾಧಿಸಲ್ಪಡುವ ವಿಚಾರದಲ್ಲಿ ನಿರಾಶನಾಗಿದ್ದಾನೆ. ಆದರೆ ನೀವು ಕ್ಷುಲ್ಲಕವೆಂದು ಪರಿಗಣಿಸುವ ನಿಮ್ಮ ಕರ್ಮಗಳಲ್ಲಿ ಅವನ ಅನುಸರಣೆಯು ಉಂಟಾಗುವುದು. ಅವನು ಅದರಲ್ಲಿ ಸಂತೃಪ್ತನಾಗುತ್ತಾನೆ." (ಸುನನುತ್ತಿರ್ಮಿದಿ 2/230 ನಂಬ್ರ–1753)

"ಶೈತಾನನು ಅದರಲ್ಲಿ (ಸಣ್ಣ ಪುಟ್ಟ ಪಾಪಗಳತ್ತ ಜನರನ್ನುಸೆಳೆಯುವುದರಲ್ಲಿ) ತೃಪ್ತಿ ಹೊಂದುತ್ತಾನೆ." ಏಕೆಂದರೆ ಸಣ್ಣಪುಟ್ಟ ಪಾಪಗಳು ಕೂಡ ವ್ಯಕ್ತಿಯೊಬ್ಬನ(ಳ) ಪರಲೋಕ ಜೀವನವನ್ನು ನಾಶಪಡಿಸುವಷ್ಟು ಪರಿಣಾಮಕಾರಿಯಾಗಿರುತ್ತವೆ. ಒಂದು ಸ್ಥಳದಲ್ಲಿ ಕೂಡಿಹಾಕಲ್ಪಟ್ಟ ಸಣ್ಣ ಪುಟ್ಟ ಮರದ ಕೋಲುಗಳಿಗೆ ಬೆಂಕಿ ಹತ್ತಿಕೊಂಡರೆ ನಿಧಾನವಾಗಿ ಅದೊಂದು ಮಹಾ ಅಗ್ನಿ ಜ್ವಾಲೆಯಾಗಿ ಪರಿವರ್ತಿತವಾಗಿ ಮೇಲೇಳುವ ಉದಾಹರಣೆಯನ್ನು ನಮ್ಮ ಮುಂದಿಟ್ಟು ಪ್ರವಾದಿಯವರು ﷺ ಸಣ್ಣ ಪುಟ್ಟ ಪಾಪಗಳ ﷺ ಕುರಿತು ನಮ್ಮನ್ನು ಎಚ್ಚರಿಸಿದ್ದಾರೆ. ಸಮಾನ ರೀತಿಯಲ್ಲಿ ಚಿಕ್ಕ ಪುಟ್ಟ ಪಾಪಗಳನ್ನು ಕ್ಷುಲ್ಲಕವೆಂದು ಪರಿಗಣಿಸಿ ಅವು ವೃದ್ಧಿಗೊಳುತ್ತಾ ಸಾಗಿದರೆ ಅದು ಪಾಪಿಯೊಬ್ಬನನ್ನು ನಿರ್ನಾಮ ಮಾಡಬಲ್ಲುದು. ಪ್ರವಾದಿ ಹೇಳಿದರು, "ಕ್ಷುಲ್ಲಕ ಪಾಪಗಳ ಬಗ್ಗೆ ನೀವು ಎಚ್ಚರ ವಹಿಸಿರಿ! ಯಾಕೆಂದರೆ ಅವು ಒಬ್ಬ ವ್ಯಕ್ತಿಯಲ್ಲಿ ಒಟ್ಟು ಸೇರಿ ಅವನನ್ನು ನಾಶಪಡಿಸುತ್ತದೆ. ಒಂದು ಜನತೆಯಂತೆ, ಅವರು ನಿರ್ಜನ ಪ್ರದೇಶವೊಂದರಲ್ಲಿ ತಂಗಿದರು. ಆಹಾರ ತಯಾರಿಯ ಸಂದರ್ಭ ಬಂದಾಗ ಒಬ್ಬನು ಬೆತ್ತವೊಂದನ್ನು ತಂದನು. ಮತ್ತೊಬ್ಬನು ಇನ್ನೊಂದು ಬೆತ್ತವನ್ನು ತಂದನು. ಇತರರು ಕೂಡ ಮತ್ತೆ ಕೆಲವು ಬೆತ್ತಗಳನ್ನು ತಂದರು. ಕೊನೆಗೆ ಈ ಎಲ್ಲಾ ಕಟ್ಟಿಗೆಗಳನ್ನು ಒಟ್ಟು ಸೇರಿಸಿ (ಬೆಂಕಿ ಕೊಟ್ಟು) ಅವರು ಆಹಾರವನ್ನು ತಯಾರಿಸಿದರು." (ಮುಸ್ನದ್ ಅಹ್ಮದ್)

ಇನ್ನೂ ತನ್ನ ಕುಯುಕ್ತಿಗೆ ಬಲಿ ಬೀಳದೆ ವಿಶ್ವಾಸಿಯೊಬ್ಬ ಸುರಕ್ಷಿತನಾಗಿದ್ದಾನೆಂದು ಶೈತಾನನಿಗೆ ಗೋಚರವಾದರೆ ಅವನು ಆ ವಿಶ್ವಾಸಿಯನ್ನು ಅನುವದನೀಯವಾದ ವಿಷಯಗಳ ವಿಷಯಗಳ ಮೂಲಕ ತನ್ನ ಸ್ವಾಧೀನಕ್ಕೆ ಪಡೆದುಕೊಳ್ಳಲು ಪ್ರಯತ್ನಿಸುತ್ತಾನೆ. ಉದಾಹರಣೆಗೆ; ನಿದ್ದೆ, ಆಹಾರ ಸೇವನೆ, ಐಹಿಕ ಕೆಲಸ ಕಾರ್ಯಗಳ ಬೆನ್ನು ಹತ್ತುವುದು (ಮಗ್ನವಾಗುವುದು) ಮುಂತಾದವುಗಳು. ಇಂತಹ ಕಾರ್ಯಗಳಲ್ಲಿ ಸಮಯ ಹಾಗೂ ಪರಿಶ್ರಮಗಳನ್ನು ವ್ಯಯಿಸುವುದರಿಂದ ವಿಶ್ವಾಸಿಯೊಬ್ಬನಿಗೆ ಯಾವುದೇ ಪ್ರತಿಫಲವೋ, ಶಿಕ್ಷೆಯೋ ಲಭಿಸದು. ಆದರೆ ಈ ಮೂಲಕ ತನ್ನ ಅಮೂಲ್ಯ ಸಮಯ ಹಾಗೂ ಶ್ರಮವನ್ನು

ಅಲ್ಲಾಹನ ತೃಪ್ತಿಗಾಗಿ (ಸತ್ಕರ್ಮಗಳಗಾಗಿ) ವಿನಿಯೋಗಿಸಿ ಪರಲೋಕದಲ್ಲಿ ಉತ್ತಮ ಪ್ರತಿಫಲವನ್ನು ಪಡೆಯುವಂತಹ ಸುವರ್ಣಾವಕಾಶದಿಂದ ವ್ಯಕ್ತಿ ವಂಚಿತನಾಗುತ್ತಾನೆ(ಳೆ).

ವಿಶ್ವಾಸವಿಟ್ಟ ದಾಸನೊಬ್ಬ ಶೈತಾನನ ಮೋಸಗಾರಿಕೆಗೆ ಬಲಿಬೀಳದೆ ತನ್ನ ಸಮಯವನ್ನು ಸದುಪಯೋಗಪಡಿಸಿಕೊಳ್ಳುತ್ತಿದ್ದಾನೆಂದಾದರೆ ನಂತರ ಆತ (ಶೈತಾನ್) ಆ ದಾಸನನ್ನು ಗರಿಷ್ಠ ಪ್ರತಿಫಲವುಳ್ಳ ಸತ್ಕರ್ಮ(ಆರಾಧನೆ)ಗಳ ಬದಲಾಗಿ ಸಣ್ಣ ಪ್ರಮಾಣದ ಸತ್ಕರ್ಮಗಳಲ್ಲಿ ತಲ್ಲೀನನಾಗುವಂತೆ ಮಾಡುವ ಮೂಲಕ ಹೆಚ್ಚು ಪುಣ್ಯ ಹಾಗೂ ಪ್ರತಿಫಲವನ್ನು ಪಡೆಯುವ ಅವಕಾಶದಿಂದ ಆತ ವಂಚಿತನಾಗುವಂತೆ ಮಾಡುತ್ತಾನೆ.

ಎಲ್ಲಾ ರೀತಿಯ ಪ್ರಲೋಭನೆಯನ್ನು ಒಡ್ಡಿ, ಕೃತ್ರಿಮ ಕುಯುಕ್ತಿಯನ್ನು ಪ್ರಯೋಗಿಸಿದ ನಂತರವೂ ಆದಮರ ಪುತ್ರನನ್ನು ಆತನ ಧಾರ್ಮಿಕ ಪ್ರತಿಬದ್ಧತೆಯಿಂದ ದಾರಿಗೆಡಿಸಲು ಶೈತಾನನು ವಿಫಲನಾದನೆಂದಾದರೆ ನಂತರ ಅವನು ಆ ದಾಸನ ಆರಾಧನಾಕರ್ಮಗಳನ್ನು ಕೆಡಿಸಲು ಮತ್ತು ಉತ್ತಮ ಪ್ರತಿಫಲಗಳನ್ನು ಪಡೆಯುವುದರಿಂದ ಆತನನ್ನು ತಡೆಯಲು ಉಪಾಯ ಹೂಡುತ್ತಾನೆ. ಅವನು ವ್ಯಕ್ತಿಯ ಮನಸ್ಸಿನಲ್ಲಿ ಸಂಶಯಗಳನ್ನು ಹುಟ್ಟಿಸಿ ಆತ ಸಂದಿಗ್ದತೆ ಹಾಗೂ ವ್ಯಾಕುಲತೆಯಲ್ಲಿ ಬೀಳುವಂತೆ ಮಾಡುತ್ತಾನೆ. ಸಹೀಹ್ ಅಲ್ ಬುಖಾರಿಯಲ್ಲಿ ಅಬೂಹುರೈರಾರವರು ವರದಿ ಮಾಡಿದ ಹದೀಸೊಂದರಲ್ಲಿ ಪ್ರವಾದಿﷺ ಹೇಳುತ್ತಾರೆ, "ನಮಾಝ್‌ಗಾಗಿ ಅದಾನ್‌ನ ಕರೆ ನೀಡಲ್ಪಟ್ಟರೆ ಆ ಕರೆಯು ಕೇಳದಿರಲು ಶೈತಾನನು ಗುದವಾಯುವನ್ನು ಬಿಡುತ್ತಾ ದೂರ ಓಡುತ್ತಾನೆ. ಅದಾನ್‌ನ ಕರೆಯು ನಿಂತ ಬಳಿಕ ಆತ ತಿರುಗಿ ಬರುತ್ತಾನೆ. ಇಖಾಮತ್ ಪ್ರಾರಂಭವಾಗುವಾಗ ಪುನಃ ತಿರುಗಿ ಹೋಗುತ್ತಾನೆ, ನಮಾಝ್ ಪ್ರಾರಂಭಗೊಂಡರೆ ಮರಳಿ ಬರುತ್ತಾನೆ. ವ್ಯಕ್ತಿ ಹಾಗೂ ಆತನ ಹೃದಯದ ನಡುವೆ ಪಿಸುಗುಟ್ಟುತ್ತಾ ಹೇಳುತ್ತಾನೆ, 'ನೆನಪಿಸಿಕೊಳ್ಳಬೇಕಾದವವುಗಳನ್ನೆಲ್ಲಾ ನೆನಪಿಸಿಕೊಳ್ಳು' ಕೊನೆಗೆ ಆ ವ್ಯಕ್ತಿಯು ತಾನು ಎಷ್ಟು ರಕಅತ್ ನಮಾಝ್ ನಿರ್ವಹಿಸಿದೆ ಎಂಬುದನ್ನು ಸಹ ಅರಿಯದಂತಾಗುವನು.'' (ಸಹೀಹ್ ಅಲ್ ಬುಖಾರಿ 608)

ಈ ರೀತಿಯ ಕಿವಿಯೂದುವಿಕೆ ಶೈತಾನನ ತಂತ್ರಗಳಲ್ಲೇ ಅತ್ಯಂತ ದುರ್ಬಲ ರೀತಿಯದ್ದಾಗಿದೆ. ಒಮ್ಮೆ ಪ್ರವಾದಿವರ್ಯರﷺ ಅನುಚರರು ತಮಗೆ ತೀರಾ ಅಸಹ್ಯವೆನಿಸುವ ಮತ್ತು ಹೇಳಿಕೊಳ್ಳಲಿಚ್ಚಿಸದ "ವಸ್‌ವಾಸ್"ನ ಕುರಿತಾದ ಅನುಭವವನ್ನು ಪ್ರವಾದಿಯವರﷺ ಮುಂದಿಟ್ಟರು. ಆಗ ಪ್ರವಾದಿಯವರುﷺ ಈ ರೀತಿ ಪ್ರತಿಕ್ರಿಯಿಸಿದರು, "ಸರ್ವಸ್ತುತಿಗಳೂ ಅಲ್ಲಾಹನಿಗೆ. ಅವನು(ಶೈತಾನನು) ತನ್ನ ತಂತ್ರಗಳನ್ನು ಕಿವಿಯೂದುವಿಕೆಗೆ ಮಿತಿ (ಕಡಿಮೆ) ಗೊಳಿಸಿದ". (ಸಹೀಹ್ ಅಬೂದಾವೂದ್)

ಈ ಎಲ್ಲಾ ರೀತಿಯ ತಂತ್ರಗಳನ್ನೆದುರಿಸಿದ ನಂತರವೂ ವಿಶ್ವಾಸಿಯೊಬ್ಬನು ಶೈತಾನನ ಮುಂದೆ ಅಜೇಯವಾಗಿ ನಿಂತನೆಂದಾದರೆ ಶೈತಾನನ ಮುಂದಿನ ಹೆಜ್ಜೆ ಆ ಮನುಷ್ಯನಿಗೆ ಹಾನಿಯುಂಟು ಮಾಡುವುದಾಗಿದೆ. ಉದಾಹರಣೆಗೆ; ವ್ಯಕ್ತಿ ಪೀಡನೆ ಅಥವಾ ಕಿರುಕುಳ ಅನುಭವಿಸುವಂತೆ ಮಾಡುವುದು, ಅವನ ಗೌರವವನ್ನು ಸಮಾಜದಲ್ಲಿ ವಿರೂಪಗೊಳಿಸುವುದು ಇತ್ಯಾದಿ. ಈ ರೀತಿಯ ತಂತ್ರಗಳ ಮೂಲಕ ವಿಶ್ವಾಸಿಯೊಬ್ಬನು ಧಾರ್ಮಿಕ ಶ್ರದ್ಧೆ ಹಾಗೂ ಪ್ರತಿಬದ್ಧತೆಯಲ್ಲಿ ನಿರುತ್ಸಾಹಪಡುವಂತೆ ಮಾಡುವುದು ಶೈತಾನನ ಸಂಕಲ್ಪವಾಗಿದೆ. ಇಸ್ಲಾಮಿನೊಂದಿಗಿರುವ ತಮ್ಮ ವಚನಬದ್ಧತೆಯ ಕಾರಣದಿಂದಾಗಿ ಎಷ್ಟೊಂದು ವಿದ್ವಾಂಸರು, ಮಹಾನುಭಾವರು ಸೆರೆಮನೆಗಳಲ್ಲಿ ಪೀಡಿಸಲ್ಪಟ್ಟರು ಮತ್ತು ದಯನೀಯವಾಗಿ ಕೊಲ್ಲಲ್ಪಟ್ಟರು!

## 'ಶೈತಾನ್‌ಗೆ ಅಪಮಾನ'

"ನಿಮ್ಮ ಪೈಕಿಯಲ್ಲಿ ಯಾರಿಗಾದರೂ ತನ್ನ ನಮಾಜಿನ ಕುರಿತು ಸಂಶಯ ಹುಟ್ಟಿಕೊಂಡರೆ ಮತ್ತು ಆತನಿಗೆ ತಾನು ನಿರ್ವಹಿಸಿದ ನಮಾಜು ಮೂರೋ ಅಥವಾ ನಾಲ್ಕೋ (ರಕ್‌ಅತ್) ಎಂದು (ಮರೆವಿನ ಕಾರಣದಿಂದ) ತಿಳಿಯದಾದರೆ ಆತ ಹೆಚ್ಚು ಖಾತ್ರಿಯಿರುವುದರ ಪ್ರಕಾರ ಪ್ರವೃತ್ತಿಸುವ ಮೂಲಕ ತನ್ನ ಸಂಶಯವನ್ನು ಪರಿಹರಿಸಿಕೊಳ್ಳಲಿ. ನಂತರ ತಸ್ಲೀಮ್‌ಗೆ (ನಮಾಜಿನಿಂದ ವಿರಮಿಸುವ) ಮುಂಚಿತವಾಗಿ ಮರೆವಿನ ಸಾಷ್ಟಾಂಗವೆಂಬಂತೆ ಎರಡು ಸಾಷ್ಟಾಂಗಗಳನ್ನು (ಸಜ್ದ) ಮಾಡಲಿ. ಆತ ಬೆಸ ಸಂಖ್ಯೆಯಲ್ಲಿ ನಮಾಜು ನಿರ್ವಹಿಸಿದ್ದರೆ ಅದು (ಎರಡು ಸಾಷ್ಟಾಂಗಗಳು) ನಮಾಜನ್ನು ಸರಿಸಮಗೊಳಿಸುತ್ತದೆ. ಇನ್ನು ಆತ ನಾಲ್ಕು ರಕಅತ್ ನಿರ್ವಹಿಸಿದ್ದರೆ ಅದು ಶೈತಾನನಿಗೆ ಅಪಮಾನಜನಕವಾಗಿರುತ್ತದೆ."(ಮುಸ್ಲಿಂ)

# ದಣಿವರಿಯದ ಶೈತಾನ್

ತನ್ನ ಗುರಿಯನ್ನು ಸಾಧಿಸುವತ್ತ ಶೈತಾನನು ಎಷ್ಟೊಂದು ಛಲವಾದಿಯಾಗಿದ್ದಾನೆ! ಎಂಬುವುದನ್ನು ನಾವು ಈ ಮೊದಲು ವಾಚಿಸಿದ ಪಂಕ್ತಿಗಳ ಮೂಲಕ ಕಂಡುಕೊಂಡೆವು. ಒಂದು ಹಂತದಲ್ಲಿ ವಿಫಲನಾದರೂ ಪಟ್ಟು ಬಿಡದೆ ಆತ ತನ್ನ ಪ್ರಯತ್ನವನ್ನು ಮುಂದುವರಿಸುವನು ಹಾಗೂ ಸನ್ಮಾರ್ಗದ ಪಥದಲ್ಲಿ ಹೊಂಚುಹಾಕಿ ಕಾಯುತ್ತಾ ಕೂರುವೆನೆಂದು ಆತ ಪ್ರಖ್ಯಾಪಿಸುತ್ತಾನೆ.

"…..ನಿನ್ನ ನೇರ ಮಾರ್ಗದಲ್ಲಿ (ಸಿರಾತೇ ಮುಸ್ತಖೀಂ) ಅವರು (ಮನುಷ್ಯರು) ಪ್ರವೇಶಿಸುವುದನ್ನು ತಡೆಯಲು ನಾನು (ಹೊಂಚುಹಾಕುತ್ತಾ) ಕಾಯುವೆನು. ನಂತರ (ಅವರನ್ನು ಭ್ರಷ್ಟಗೊಳಿಸಲು) ಅವರ ಮುಂದಿನಿಂದಲೂ, ಹಿಂದಿನಿಂದಲೂ, ಅವರ ಬಲಭಾಗದಿಂದಲೂ, ಎಡಭಾಗದಿಂದಲೂ ನಾನು ಅವರ ಬಳಿ ಹೋಗಿಯೇ ತೀರುವೆನು. ಅವರ ಪೈಕಿಯಲ್ಲಿ ಹೆಚ್ಚಿನವರನ್ನು ನೀನು ಕೃತಜ್ಞರನ್ನಾಗಿ ಕಾಣಲಾರೆ."
**(ಸೂರ ಅಲ್-ಅಅ್‌ರಾಫ್ 16:17)**

ಇಬ್ನ್‌ಅಬ್ಬಾಸ್ﷺ ಈ ವಿಷಯದಲ್ಲಿ ಈ ರೀತಿ ಪ್ರತಿಕ್ರಿಯಿಸಿದರು, 'ಅವರತ್ತ ಮುಂದಿನಿಂದ ಬರುವೆನು' ಎಂದರೆ ಪರಲೋಕದ ಕುರಿತು ಅವರ ಮನಸ್ಸಿನಲ್ಲಿ ಸಂಶಯಗಳನ್ನು ಹುಟ್ಟು ಹಾಕುವುದು. 'ಹಿಂದಿನಿಂದಲೂ' ಅಂದರೆ ಐಹಿಕ ಜೀವನದಲ್ಲಿ ಅವರು ಅತೀವ ಆಸಕ್ತಿಯನ್ನು ತಾಳುವಂತೆ ಮಾಡುವುದು, ಮತ್ತು ಅವರ 'ಬಲಭಾಗದಿಂದಲೂ' ಎಂದರೆ ಅವರಲ್ಲಿ ಧರ್ಮದ ಕುರಿತು ಗೊಂದಲವನ್ನು ಸೃಷ್ಟಿಸುವುದು. ಅವರ 'ಎಡ ಭಾಗದಿಂದಲೂ' ಎನ್ನುವುದು ಪಾಪಕೃತ್ಯಗಳನ್ನೆಸಗುವಂತೆ ಅವರನ್ನು ಪ್ರಲೋಭಿಸುವುದಾಗಿದೆ. ಇದು ಒಳಿತು ಮತ್ತು ಕೆಡುಕಿನ ಎಲ್ಲಾ ಮಾರ್ಗಗಳನ್ನು ಸುತ್ತುವರಿಯುವುದು ಎನ್ನುವುದರ ತಾತ್ಪರ್ಯವಾಗಿದೆ. ಈ ರೀತಿ ಶೈತಾನನು ಜನರನ್ನು ಸನ್ಮಾರ್ಗದಿಂದ ತಡೆದು ದುರ್ಮಾರ್ಗದತ್ತ ಪ್ರೇರೇಪಿಸುತ್ತಾನೆ . (ತಫ್ಸೀರ್ ಇಬ್ನ್ ಕಸೀರ್)

ಸೂರ ಅಲ್– ಅಅ್‌ರಾಫ್‌ನ 16-17 ಸೂಕ್ತಗಳ ಕುರಿತು ಇಬ್ನು ಅಬ್ಬಾಸ್‌ರವರು ಹೇಳಿರುವುದಾಗಿ ಅಲ್ ಹಕಮ್ ಇಬ್ನ್ ಅಬ್ಬಾಸ್‌ರವರಿಂದ ಇಕ್ರಿಮರವರು ಈ ರೀತಿ ವರದಿ ಮಾಡುತ್ತಾರೆ. "ಅವನು (ಶೈತಾನ್) ಮೇಲಿನಿಂದ ಅವರತ್ತ ಬರುವನೆಂದು ಹೇಳಿಲ್ಲ. ಕಾರಣವೇನೆಂದರೆ (ಅಲ್ಲಾಹನ) ಅನುಗ್ರಹವು ಮೇಲಿನಿಂದ ಇಳಿಯುತ್ತದೆ."(ತಫ್ಸೀರ್ ಇಬ್ನ್ ಕಸೀರ್) ಈ ಸೂಕ್ತದಲ್ಲಿರುವ "ಕೃತಜ್ಞ" ಎಂಬ ಪದದ ಕುರಿತು ವಿವರಿಸುತ್ತಾ ಇಬ್ನ್ ಅಬ್ಬಾಸ್ ಹೀಗೆ ಹೇಳಿದರು, "ಅವರ ಪೈಕಿ ಹೆಚ್ಚಿನವರನ್ನು ನೀನು ಕೃತಜ್ಞರನ್ನಾಗಿ ಕಾಣಲಾರೆ" ಎನ್ನುವುದು ತೌಹೀದನ್ನು ಉಲ್ಲೇಖಿಸುತ್ತದೆ. ಇದರರ್ಥ, ಆರಾಧನೆಯಲ್ಲಿ ಅಲ್ಲಾಹನನ್ನು ಏಕನನ್ನಾಗಿ ಮಾಡದವರು."

ಪ್ರವಾದಿﷺ ಹೇಳಿದರು, "ಶೈತಾನನು ವ್ಯಕ್ತಿಯೊಬ್ಬನನ್ನು ಅವನ ಎಲ್ಲಾ ದಾರಿಗಳಲ್ಲೂ ಹೊಂಚು ಹಾಕುತ್ತಾ ಕುಳಿತಿರುವನು. ಇಸ್ಲಾಮಿನ ಮಾರ್ಗದಲ್ಲಾದರೆ ಅವನು ಆ ವ್ಯಕ್ತಿಯೊಂದಿಗೆ ಹೇಳುವನು, 'ನೀನು ನಿನ್ನ ಪೂರ್ವಿಕರ( ತಂದೆ, ತಾತ, ಮುತ್ತಾತಂದಿರ) ಧರ್ಮವನ್ನು ತೊರೆದು ಮುಸ್ಲಿಮನಾಗಿರುವೆಯಾ? ಈ ವಿಷಯದಲ್ಲಿ ಆ ವ್ಯಕ್ತಿ ಶೈತಾನನ್ನು ಅನುಸರಿಸದೆ ಮುಸ್ಲಿಮನಾದನೆಂದಾದರೆ ಆತ ಅವನನ್ನು ಹಿಜ್‌ರಾದ (ಧರ್ಮಮಾರ್ಗದಲ್ಲಿ ವಲಸೆ) ಮಾರ್ಗದಲ್ಲಿ ಭೇಟಿಯಾಗುತ್ತಾ 'ನೀನು ನಿನ್ನ ಭೂಮಿ ಹಾಗೂ ಸೂರನ್ನು ತೊರೆದು ಹೋಗುತ್ತಿರುವೆಯಾ? ಇದು ಬುದ್ಧಿವಂತಿಕೆಯಲ್ಲ' ಎನ್ನುವನು. ಇದನ್ನೂ ಅಲಕ್ಷಿಸಿ ವ್ಯಕ್ತಿಯು ಮುನ್ನಡೆದರೆ ಅಲ್ಲಾಹನಿಗಾಗಿ ನಡೆಸುವ ಪರಿಶ್ರಮದ ಮಾರ್ಗದಲ್ಲಿ ಆತ ಅವನಿಗಾಗಿ ಕಾಯುತ್ತಿರುತ್ತಾನೆ, ಮತ್ತು 'ನಿನ್ನನ್ನು ಹಾಗೂ ನಿನ್ನ ಸಂಪತ್ತನ್ನು ಗಂಡಾಂತರಕ್ಕೆ ತಳ್ಳುವ ಹೋರಾಟಕ್ಕೆ ನೀನು ಹೊರಟಿರುವೆಯಾ? ನೀನು ಹೋರಾಟದಲ್ಲಿ ಕೊಲ್ಲಲ್ಪಡುವೆ, ನಿನ್ನ ಪತ್ನಿಯು ಮತ್ತೊಬ್ಬನನ್ನು ವರಿಸುವಳು, ನಿನ್ನ ಸೊತ್ತು ಹರಿಹಂಚಿ ಹೋಗಲಿದೆ.' (ಮತ್ತೊಂದು ವರದಿಯಲ್ಲಿ 'ನಿನ್ನ ಮಕ್ಕಳು ಅನಾಥರಾಗಲಿದ್ದಾರೆ') ಎಂದು ಕಿವಿಯೂದುತ್ತಾನೆ. ಇವೆಲ್ಲವನ್ನೂ ನಿರ್ಲಕ್ಷಿಸಿ ಆ ವ್ಯಕ್ತಿಯು ಶೈತಾನನ್ನು ಅನುಸರಿಸದೆ ಕೊಲ್ಲಲ್ಪಟ್ಟರೆ ಆತನಿಗೆ ಸ್ವರ್ಗ ಪ್ರವೇಶ ನೀಡುವ ವಚನಬದ್ಧತೆಯನ್ನು ಅಲ್ಲಾಹನು ಹೊಂದಿದ್ದಾನೆ." (ಮುಸ್ನದ್ ಅಹ್ಮದ್)

ಮರಣದಂಚಿನಲ್ಲಿಯೂ ಶೈತಾನನು ವಿಶ್ವಾಸಿಯೊಬ್ಬನನ್ನು ಒಬ್ಬಂಟಿಯಾಗಿ ಬಿಡದೆ ಜೀವನದಲ್ಲಿ ಆತ ಮಾಡಿದ ಸತ್ಕರ್ಮಗಳನ್ನು ನಿರ್ನಾಮಗೊಳಿಸುವ ಅಂತಿಮ ಪ್ರಯತ್ನವೊಂದನ್ನು ಮಾಡುತ್ತಾನೆ. ಮರಣದ ವೇಳೆಯಲ್ಲಿ ಶೈತಾನನ ಪುಸಲಾಯಿಸುವಿಕೆಯಿಂದ ರಕ್ಷೆ ಹೊಂದುವಂತಾಗಲು ಪ್ರವಾದಿಯವರುﷺ

ಅಲ್ಲಾಹನಲ್ಲಿ ಈ ರೀತಿ ಪ್ರಾರ್ಥಿಸುತ್ತಿದ್ದರು. “ಓ ಅಲ್ಲಾಹ್, ಮರಣದಂಚಿನಲ್ಲಿ ಶೈತಾನನು ಬಗೆಯುವ ಕೇಡಿನಿಂದ ನಾನು ನಿನ್ನ ಅಭಯವನ್ನು ಯಾಚಿಸುತ್ತಾನೆ.” (ಸುನನ್ ಅನ್ನಸಾಈ)

ಈ ಪ್ರಕಾರ ಅಲ್ಲಾಹನ ಮಾರ್ಗದಿಂದ ಜನರನ್ನು ಪಥಭ್ರಷ್ಟಗೊಳಿಸುವ ತನ್ನ ಧ್ಯೇಯದಲ್ಲಿ ಶೈತಾನನು ತೀರಾ ಹತಾಶನಾಗುವವನಲ್ಲ. ಈ ಕಾರಣಕ್ಕಾಗಿ ಆತ ಪ್ರತಿಯೊಬ್ಬ ವ್ಯಕ್ತಿಯೊಂದಿಗೂ ತನ್ನ ದುಷ್ಟ ಸಹವರ್ತಿಯೊಬ್ಬನನ್ನು ನಿಯೋಗಿಸಿರುವನು. ಪ್ರವಾದಿﷺ ಹೇಳಿದರು, “ಪ್ರತಿಯೊಬ್ಬ ವ್ಯಕ್ತಿಯೂ (ಮನುಷ್ಯನೂ) ಜಿನ್ನ್‌ಗಳ ಪೈಕಿಯಿಂದ ಒಬ್ಬ ಸಂಗಡಿಗ ಹಾಗೂ ಮಲಾಯಿಕ್‌ಗಳ ಪೈಕಿಯಿಂದ ಒಬ್ಬ ಸಂಗಡಿಗನನ್ನು ಹೊಂದಿದ್ದಾನೆ.’ ಆಗ ಸ್ವಹಾಬಾಗಳು (ಪ್ರವಾದಿ ಅನುಚರರು) ಪ್ರಶ್ನಿಸಿದರು, ‘ಓ ಪ್ರವಾದಿವರ್ಯರೆ, ತಾವೂ ಕೂಡ? ಅವರುತ್ತರಿಸಿದರು, ‘ನಾನೂ ಕೂಡ. ಆದರೆ ಅಲ್ಲಾಹನು ನನ್ನನ್ನು ಸಹಾಯಿಸಿದ್ದಾನೆ ಮತ್ತು ನನ್ನ ಜಿನ್ನ್ ಸಂಗಡಿಗ ಮುಸ್ಲಿಮನಾಗಿದ್ದಾನೆ. ಅವನು ನನಗೆ ಸತ್ಕರ್ಮಗಳನ್ನು ಮಾಡಲು ಮಾತ್ರ ಪ್ರೋತ್ಸಾಹಿಸುತ್ತಾನೆ.” (ಸಹೀಹ್ ಮುಸ್ಲಿಂ)

# ಶೈತಾನನು ಹಂತಹಂತವಾಗಿ ಮನುಷ್ಯನನ್ನು ಅಲ್ಲಾಹನ ಆಜ್ಞಾಭಂಗದತ್ತ ಮುನ್ನಡೆಸುತ್ತಾನೆ

ಅನಾಯಾಸವಾಗಿ ಜನರನ್ನು ಶಿರ್ಕ್‌ನ (ದೇವಸಹಭಾಗಿತ್ವದ) ಪಥದತ್ತ ಮುನ್ನಡೆಸುವ ನಿಟ್ಟಿನಲ್ಲಿ ಶೈತಾನನು ಮಾನವ ಸಮುದಾಯವನ್ನು ಅಲ್ಪಾಲ್ಪವಾಗಿ ಪ್ರಲೋಭನೆಗೊಳಪಡಿಸುತ್ತಾನೆ. ಸಣ್ಣ ಪುಟ್ಟ ಕಾರ್ಯಗಳಲ್ಲಿ ಆರಂಭಗೊಂಡು ಅಂತ್ಯತಃ ಅದು ಅವರನ್ನು ಅಂತಿಮ ಅವನತಿಯತ್ತ ಕೊಂಡೊಯ್ಯುತ್ತದೆ. ಅಲ್ಲಾಹನು ಕುರ್‌ಆನ್‌ನಲ್ಲಿ ನಮ್ಮನ್ನು ಈ ರೀತಿ ಎಚ್ಚರಿಸಿದ್ದಾನೆ; ".......ಶೈತಾನನ ಪಾದ ಹೆಜ್ಜೆಗಳನ್ನು ನೀವು ಅನುಸರಿಸಬೇಡಿ. ನಿಶ್ಚಯವಾಗಿಯೂ ಆತನು ನಿಮ್ಮ ಪ್ರತ್ಯಕ್ಷ ಶತ್ರುವಾಗಿದ್ದಾನೆ." (ಸೂರ ಅಲ್ ಬಕರಾ: 208)

ಜಾಹಿಲಿಯ್ಯಾ ಕಾಲದಲ್ಲಿ ಅರಬ್ ಮೂರ್ತಿಪೂಜಕರಿಂದ ಪೂಜಿಸಲ್ಪಡುತ್ತಿದ್ದ ವಿಗ್ರಹಗಳ ಕುರಿತು ಚರ್ಚಿಸುತ್ತಾ ಇಬ್ನ್‌ಅಬ್ಬಾಸ್ رضي الله عنه ವಿವರಿಸುತ್ತಾರೆ, 'ಈ ವಿಗ್ರಹಗಳು ಮೊತ್ತಮೊದಲು ಪ್ರವಾದಿ ನೂಹ್‌ರವರ عليه السلام ಸಮುದಾಯದವರಿಂದ ಪೂಜಿಸಲ್ಪಟ್ಟಿತ್ತು. ಅದಕ್ಕೆ ಮುಂಚೆ ಈ ಪ್ರಪಂಚದಲ್ಲಿ ಶಿರ್ಕ್‌ನ ಅಸ್ತಿತ್ವವಿರಲಿಲ್ಲ.' ಇಬ್ನ್‌ಅಬ್ಬಾಸ್‌ರವರು رضي الله عنه ಮುಂದೆ ಶೈತಾನನು ನೂಹ್‌ರವರ عليه السلام ಸಮುದಾಯವನ್ನು ವಿಗ್ರಹಾರಾಧನೆಯತ್ತ ಕೊಂಡೊಯ್ಯಲು ಹಂತ ಹಂತವಾಗಿ ಯಾವ ರೀತಿ ಅವರ ಬೆನ್ನು ಬಿದ್ದ ಎಂಬುದನ್ನು ವಿವರಿಸುತ್ತಾರೆ. ಅವರು ಹೇಳುತ್ತಾರೆ, 'ವಾಸ್ತವದಲ್ಲಿ ಈ ಐದು ಹೆಸರುಗಳು (ಅಂದಿನ ಮೂರ್ತಿಪೂಜಕರಿಂದ ಆರಾಧಿಸಲ್ಪಡುತ್ತಿದ್ದ ಐದು ವಿಗ್ರಹಗಳಿಗೆ ನೀಡಲ್ಪಟ್ಟಿದ್ದ ಹೆಸರುಗಳು) ಪ್ರವಾದಿ ನೂಹ್‌ರವರ عليه السلام ಸಮುದಾಯದಲ್ಲಿದ್ದ ಸಾತ್ವಿಕರಾದ ಐದು ವ್ಯಕ್ತಿಗಳ ಹೆಸರಾಗಿತ್ತು. ಅವರ ಮರಣಾನಂತರ ಶೈತಾನನು ಆ ಜನರಿಗೆ ಸಾತ್ವಿಕರಾದ ಈ ವ್ಯಕ್ತಿಗಳ ಪುತ್ಥಳಿಗಳನ್ನು ನಿರ್ಮಿಸಿ ಅವುಗಳನ್ನು ಜನರು ಒಟ್ಟುಗೂಡುವ ಪ್ರಮುಖ ಕೇಂದ್ರವೊಂದರಲ್ಲಿ ಅವರ ಸ್ಮರಣೆಗಾಗಿ ಸ್ಥಾಪಿಸುವಂತೆ ಕಿವಿಯೂದಿದನು. ಶೈತಾನನ ಈ ಪ್ರಲೋಭನೆಗೆ ಅವರು ಕಿವಿಯೊಡ್ಡಿದರು. ಆ ಪುತ್ಥಳಿಗಳನ್ನು ಸ್ಥಾಪಿಸಿದವರ ಪೈಕಿ ಯಾರೂ ಅವುಗಳನ್ನು ಅಂದು ಪೂಜಿಸಿರಲಿಲ್ಲ. ಆದರೆ ಅವರ ಮರಣಾನಂತರ ಆ ಪುತ್ಥಳಿಗಳು

ಸ್ಥಾಪಿಸಲ್ಪಡಲು ಕಾರಣವಾಗಿದ್ದ ಉದ್ದೇಶವು ಮರೆಯಲ್ಪಟ್ಟಿತು. ಆ ನಂತರ ಬಂದ ಮುಂದಿನ ತಲೆಮಾರು ಅವುಗಳನ್ನು ಪೂಜಿಸಲು ಪ್ರಾರಂಭಿಸಿತು.' (ಮುತ್ತಫಕುನ್ ಅಲೈಹಿ) ಅಬೂಜಾಫರ್ﷺ ಹೇಳುತ್ತಾರೆ, 'ಅವರ ಪೈಕಿಯ ನಂತರದ ತಲೆಮಾರಿನವರು ತಮ್ಮ ಪೂರ್ವಜನಾಂಗವು ಏನು ಮಾಡುತ್ತಿರುವುದಾಗಿ ಕಂಡರೋ ಅದರೊಂದಿಗೆ ಸಹಮತವನ್ನು ಹೊಂದಿದರು. ಮಾತ್ರವಲ್ಲ ಅದನ್ನು ಅನುಸರಿಸಿದರು. ಸಾತ್ವಿಕನಾದ ವ್ಯಕ್ತಿಯನ್ನು ಅಲ್ಲಾಹನೊಂದಿಗೆ ಪೂಜಿಸಲ್ಪಡಬೇಕಾದ ಒಬ್ಬ ಇಲಾಹ್ (ದೇವಾಂಶವಿರುವವನು) ಎಂಬಂತೆ ಅವರು ಪರಿಗಣಿಸಿದರು.' ನಂತರ ಅವರು (ಅಬೂ ಜಾಫರ್) ಹೇಳುತ್ತಾರೆ, 'ಇದು ಅಲ್ಲಾಹನ ಹೊರತು ಆರಾಧಿಸಲ್ಪಟ್ಟ ಪ್ರಪ್ರಥಮ ವಿಗ್ರಹಾರಾಧನೆಯಾಗಿತ್ತು ಮತ್ತು ಆ ವಿಗ್ರಹವನ್ನು ಅವರು 'ವದ್ದ್' ಎಂದು ಕರೆಯುತ್ತಿದ್ದರು.' (ಸಹೀಹ್ ಅಲ್ ಬುಖಾರಿ 8/534)

ಇದೇ ರೀತಿಯಲ್ಲಿ ಶೈತಾನನು ನಿಷೇಧಿಸಲ್ಪಟ್ಟ ಫಲವನ್ನು ಭಕ್ಷಿಸುವಂತೆ ಆದಮ್عليه السلام ಹಾಗೂ ಹವ್ವಾರವರನ್ನು ಹಂತಹಂತವಾಗಿ ಪ್ರಲೋಭಿಸಿದ್ದನು.

ನಾವು (ಅಲ್ಲಾಹು) ಆಜ್ಞಾಪಿಸಿದೆವು,
"ಓ ಆದಮ್, ನೀನು ಮತ್ತು ನಿನ್ನ ಪತ್ನಿ ಸ್ವರ್ಗದಲ್ಲಿ ವಾಸಿಸಿಕೊಳ್ಳಿರಿ.
ಅಲ್ಲಿ ನೀವಿಚ್ಛಿಸುವ ಕಡೆಯಿಂದ ಇರ್ವರೂ ಯಥೇಚ್ಛವಾಗಿ ಭಕ್ಷಿಸಿರಿ.
ಆದರೆ ನೀವು ಆ ವೃಕ್ಷದ ಸನಿಹವೂ ಹೋಗಬೇಡಿ,
ಅನ್ಯಥಾ ನೀವೂ ಅಕ್ರಮಿಗಳಲ್ಲಾಗುವಿರಿ."
(ಸೂರ ಅಲ್ ಬಕರ: 35)

ಇಲ್ಲಿ ಗಮನಿಸಲ್ಪಡಬೇಕಾದ ವಿಷಯವೊಂದಿದೆ. ಅದೇನೆಂದರೆ, ಅಲ್ಲಾಹನು 'ಆ ವೃಕ್ಷದ ಫಲವನ್ನು ತಿನ್ನಬೇಡಿ' ಎಂದು ಹೇಳಲಿಲ್ಲ. ಬದಲಾಗಿ ಅವರಿಗೆ 'ಆ ವೃಕ್ಷದ ಸನಿಹವೂ ನೀವು ಹೋಗಬೇಡಿ' ಎಂದು ಆಜ್ಞಾಪಿಸಿದ್ದನು. ಏಕೆಂದರೆ ಅವರು ಆ ಮರದ ಹತ್ತಿರ ಅಡ್ಡಾಡಿದರೆ ಅಥವಾ ಅದರ ನೆರಳಲ್ಲಿ ತಂಗಿದರೆ ಅದರಲ್ಲಿರುವ ಹಣ್ಣನ್ನು ತಿನ್ನಬೇಕೆಂಬ ಆಸೆಯು ಅವರಲ್ಲಿ ಹುಟ್ಟುವ ಸಾಧ್ಯತೆಯು ಅಧಿಕವಾಗಿತ್ತು. ಈ ಕಾರಣದಿಂದಾಗಿಯೇ ನೀವು ಆ ಮರದ ಹತ್ತಿರವೇ ಸುಳಿಯಕೂಡದೆಂದು ಅಲ್ಲಾಹು ಅವರೊಂದಿಗೆ ಆಜ್ಞಾಪಿಸಿದ್ದನು.

ಇದು ಪ್ರತಿಯೊಂದು ವಿಷಯಗಳಲ್ಲೂ ಅಲ್ಲಾಹನ ಕಾರ್ಯವಿಧಾನವಾಗಿದೆ. ತನ್ನ ದಾಸರು ಮಹಾಪಾಪ ಹಾಗೂ ಅಕ್ರಮಗಳತ್ತ ಸಾಗಲು ಕಾರಣವಾಗಬಹುದಾದ ವಿಷಯಗಳನ್ನು ನಿರೋಧಿಸಿ, ಕೆಡುಕಿನತ್ತ ಸಾಗುವ ಎಲ್ಲಾ ಮಾರ್ಗಗಳನ್ನು ಅವನು ಮುಚ್ಚುವನು. ಉದಾಹರಣೆಗೆ; ಗೋರಿಗಳ ಮೇಲೆ ಮಸೀದಿ, ಗುಮ್ಮಟ ಅಥವಾ ಯಾವುದೇ ರೀತಿಯ ಕಟ್ಟಡಗಳನ್ನು ಕಟ್ಟುವುದು ಮತ್ತು ಅಲ್ಲಿ ನಮಾಜು ಮಾಡುವುದು, ದೀಪಗಳನ್ನು ಹೊತ್ತಿಸುವುದು ಇವೇ ಮುಂತಾದವುಗಳನ್ನು ನಿಷೇಧಿಸಲಾಗಿದೆ. ಮೃತ

ಮಹಾತ್ಮರೊಂದಿಗೆ ತೋರಿಸಿದ ಅಮಿತ ಆದರದಿಂದಾಗಿ ಪ್ರವಾದಿ ನೂಹ್‌ರವರ عليه السلام ಸಮುದಾಯದಲ್ಲಿ ಸಂಭವಿಸಿದ ರೀತಿಯಲ್ಲಿ ಜನರು ಶಿರ್ಕ್ ಎಂಬ ಮಹಾ ಪಾಪದಲ್ಲಿ ಬೀಳುವುದರಿಂದ ತಡೆಯಲು ಈ ಕ್ರಮ ಕೈಗೊಳ್ಳಲಾಗಿದೆ.

ಆದಮ್ عليه السلام ಮತ್ತು ಹವ್ವಾರನ್ನು ನಿಷೇಧಿತ ಮರದ ಸಮೀಪ ತೆರಳುವುದರಿಂದ ಅಲ್ಲಾಹನು ತಡೆದಿದ್ದಾನೆ ಎಂದರಿತ ಶೈತಾನನು ಪ್ರಥಮವಾಗಿ ಅವರನ್ನು ಮರದತ್ತ ಬರುವಂತೆ ಪುಸಲಾಯಿಸುತ್ತಾನೆ. ನಂತರ ಆ ವೃಕ್ಷದಲ್ಲಿರುವ ಹಣ್ಣುಗಳು ಅದರ ಬಣ್ಣ, ಸುವಾಸನೆ ಮುಂತಾದವುಗಳನ್ನು ಮನಮೋಹಕವಾಗಿ ತೋರಿಸುತ್ತಾನೆ. ಕೊನೆಗೆ ಅದರ ಫಲವನ್ನು ಅವರು ತಿನ್ನುವಂತೆ ಮಾಡುತ್ತಾನೆ. ಈ ರೀತಿ ಶೈತಾನನು ಅನುಕ್ರಮವಾಗಿ ಅಲ್ಲಾಹನ ಆಜ್ಞೆಯನ್ನು ಉಲ್ಲಂಘಿಸುವಂತೆ ಅವರನ್ನು ಮರುಳು ಮಾಡುತ್ತಾನೆ.

ಆದಮ್‌ರವರ عليه السلام ಮಕ್ಕಳೊಂದಿಗೂ ಶೈತಾನನು ತನ್ನ ಇದೇ ತಂತ್ರವನ್ನು ಪ್ರಯೋಗಿಸುತ್ತಾನೆ. ಸ್ವಯಂ ಅತ್ಯಧಿಕ ಮುನ್ನೆಚ್ಚರಿಕೆಯನ್ನು ವಹಿಸುವುದು ನಮಗೆ ಅನಿವಾರ್ಯವಾಗಿದೆ. ನಾವು ಸ್ವಯಂ ನಮ್ಮನ್ನು ದುಷ್ಕರ್ಮಗಳಿಂದ ತಡೆದು ನಿಯಂತ್ರಿಸಿಕೊಂಡರಷ್ಟೇ ಸಾಲದು ಅಲ್ಲಾಹನಿಗೆ ಅವಿಧೇಯತೆಯನ್ನು ತೋರಿಸುವಂತಹ ಎಲ್ಲಾ ರೀತಿಯ ಮಾರ್ಗಭ್ರಷ್ಟತೆಯಿಂದ ನಾವು ಅನಿವಾರ್ಯವಾಗಿ ದೂರವಿರಬೇಕು. ಅಲ್ಲಾಹನ ಆಜ್ಞೆ ಹಾಗೂ ಮಿತಿಯು ಗೌರವಿಸಲ್ಪಡದ ಸ್ಥಳಗಳಿಗೆ ಭೇಟಿ ನೀಡುವುದು, ಅಂತಹಾ ಸಭೆ ಸಮಾರಂಭಗಳಲ್ಲಿ ಭಾಗವಹಿಸುವುದು, ದುಷ್ಟ ಜನರ ಸಹವಾಸವನ್ನು ಹೊಂದುವುದು, ಬಿದ್‌ಅತೀ (ನವೀನವಾದ) ಆಚರಣೆಗಳಲ್ಲಿ ಪಾಲ್ಗೊಳ್ಳುವುದು ಮುಂತಾದವುಗಳು ಈ ಪಥಭ್ರಷ್ಟತೆಯಲ್ಲಿ ಒಳಗೊಂಡಿವೆ.

# ದೌರ್ಬಲ್ಯಗಳ ಮೂಲಕ ವ್ಯಕ್ತಿಯ ಹೃದಯವನ್ನು ಪ್ರವೇಶಿಸುವ ಶೈತಾನ್

ಮನುಷ್ಯ ಸಮುದಾಯವನ್ನು 'ವಸ್‌ವಾಸ್'ನ (ಅಲ್ಲಾಹನ ಆಜ್ಞೆಗೆ ವಿರುದ್ಧವಾಗಿರುವ ಕೃತ್ಯಗಳಲ್ಲಿ ಪಾಲ್ಗೊಳ್ಳುವಂತೆ ಪುಸಲಾಯಿಸುವ) ಮೂಲಕ ಶೈತಾನನು ಹಂತಹಂತವಾಗಿ ಪಥಭ್ರಷ್ಟತೆಗೊಳಪಡಿಸುತ್ತಾನೆ ಎಂದು ನಾವು ಅರಿತೆವು. ಆದರೆ ಪ್ರತಿಯೊಬ್ಬರೊಂದಿಗೂ ಅವನು ಇದೇ ತಂತ್ರವನ್ನು ಪ್ರಯೋಗಿಸುವುದಿಲ್ಲ. ಜನರೆಡೆಯಲ್ಲಿ ಭಿನ್ನ ಸ್ವಭಾವ, ವ್ಯಕ್ತಿತ್ವ, ವಿಚಾರಗಳನ್ನು ಹೊಂದಿದವರಿದ್ದಾರೆ. ಒಬ್ಬನಿಗೆ ಅನ್ವಯವಾಗುವುದು ಇನ್ನೊಬ್ಬನಿಗೆ ಅನ್ವಯವಾಗಲಾರದು. ಒಂದೆಡೆ ವ್ಯಕ್ತಿಯೊಬ್ಬ ಧನಮೋಹದಿಂದ ಯಾವ ಕೆಲಸವನ್ನೂ ಮಾಡಲು ತಯಾರಾಗಿದ್ದಾನೆಂದಾದರೆ ಶೈತಾನನು ಆ ಮೂಲಕ ಅವನನ್ನು ಜಯಿಸುತ್ತಾನೆ. ಬೇರೊಬ್ಬನನ್ನು ಆತನ ಕೀರ್ತಿ ಪಡೆಯಬೇಕೆನ್ನುವ ದುರಾಸೆಯ ಮೂಲಕ ವಶಪಡಿಸಿಕೊಳ್ಳುವ ಸಾಧ್ಯತೆಯಿದೆ. ಮತ್ತೊಬ್ಬನನ್ನು ಅವನ ಭಾವೂದ್ವೇಗದ ಮೂಲಕ ಮೋಸಪಡಿಸಲು ಪ್ರಯತ್ನಿಸಬಹುದು. ಈ ರೀತಿ ಶೈತಾನನು ವಿವಿಧ ರೀತಿಯಲ್ಲಿ ಮನುಷ್ಯನ ಆತ್ಮವನ್ನು ಪ್ರವೇಶಿಸಿ ಅವನನ್ನು ದಾರಿಗೆಡಿಸುತ್ತಾನೆ. ಮನುಷ್ಯನ ಹೃದಯಕ್ಕೆ ಲಗ್ಗೆ ಇಡಲು ಶೈತಾನನು ಉಪಯೋಗಿಸುವ ಇಂತಹ ಪ್ರವೇಶ ದ್ವಾರಗಳನ್ನೇ 'ನ್ಯೂನತೆ' ಅಥವಾ 'ದೌರ್ಬಲ್ಯ' ಎಂದು ಕರೆಯಲಾಗುತ್ತದೆ.

ಯಝೀದ್ ಬಿನ್ ಖುಸೈತ್ﷺ ಹೇಳಿರುವುದಾಗಿ ಇಬ್ನು ಜರೀರ್ (ರಹಿಮಹುಲ್ಲಾಹ್) ಉಲ್ಲೇಖಿಸುತ್ತಾರೆ, "ಪ್ರವಾದಿಗಳು ಸಾಮಾನ್ಯವಾಗಿ ತಮ್ಮ ಪಟ್ಟಣದ ಹೊರ ವಲಯದಲ್ಲಿ ಮಸ್ಜಿದ್‌ಗಳನ್ನು ಹೊಂದಿರುತ್ತಿದ್ದರು. ಅವರು ತಮ್ಮ ಪ್ರಭುವಿನೊಂದಿಗೆ ಯಾವುದಾದರೂ ವಿಷಯದ ಕುರಿತು ಮಾರ್ಗೋಪಾಯಗಳನ್ನು ಪಡೆಯಲಿಚ್ಛಿಸಿದರೆ ತಮ್ಮ ಈ ಪ್ರಾರ್ಥನಾ ಸ್ಥಳಕ್ಕೆ ತೆರಳಿ ಅಲ್ಲಾಹನು ಆದೇಶಿಸಿದಂತೆ ಅಲ್ಲಿ ಪ್ರಾರ್ಥಿಸುವರು. ಒಂದು ದಿನ ಪ್ರವಾದಿಯೊಬ್ಬರು ಇದೇ ರೀತಿ ತಮ್ಮ ಪ್ರಾರ್ಥನಾ ಸ್ಥಳದಲ್ಲಿದ್ದಾಗ ಅಲ್ಲಾಹನ ಶತ್ರುವಾದ ಇಬ್ಲೀಸನು ಬಂದು ಆ ಪ್ರವಾದಿಯವರ ಮತ್ತು ಕಿಬ್ಲಾದ ಮಧ್ಯೆ ಕುಳಿತುಕೊಂಡನು. ಪ್ರವಾದಿಯವರು ಈ ರೀತಿ ಪ್ರಾರ್ಥಿಸಿದರು, 'ಶಪಿಸಲ್ಪಟ್ಟ ಶೈತಾನನಿಂದ ನಾನು ಅಲ್ಲಾಹನಲ್ಲಿ ಅಭಯವನ್ನು ಬೇಡುತ್ತೇನೆ. ಆಗ ಅಲ್ಲಾಹನ ಶತ್ರು

ಅವರೊಂದಿಗೆ ಕೇಳಿದ, 'ತಾವು ಯಾರಿಂದ ಅಲ್ಲಾಹನಲ್ಲಿ ಅಭಯವನ್ನು ಯಾಚಿಸುತ್ತಿದ್ದೀರೋ ಅವನು ಇಲ್ಲೇ ಇರುವನೆಂದು ತಮಗೆ ಅರಿವಿದೆಯೇ!' ಪ್ರವಾದಿಯವರು ಪುನಃ 'ಶಪಿಸಲ್ಪಟ್ಟ ಶೈತಾನನಿಂದ ನಾನು ಅಲ್ಲಾಹನಲ್ಲಿ ಅಭಯವನ್ನು ಯಾಚಿಸುತ್ತೇನೆ' ಎಂದು ಮೂರು ಬಾರಿ ಪುನರುಚ್ಛಿಸಿದರು. ಆಗ ಅಲ್ಲಾಹನ ವೈರಿಯು ಆ ಪ್ರವಾದಿಯೊಂದಿಗೆ 'ನನ್ನಿಂದ ಸ್ವಯಂ ನೀವು ನಿಮ್ಮನ್ನು ರಕ್ಷಿಸಿಕೊಳ್ಳುವ ಯಾವುದಾದರೂ ವಿಧಾನವನ್ನು ತಿಳಿಸಿರಿ' ಎಂದು ಕೇಳಿದನು. ಪ್ರವಾದಿಯವರು 'ಇಲ್ಲ, ನೀನು ಯಾವ ರೀತಿ ಆದಮರ ಮಕ್ಕಳನ್ನು ತನ್ನ ಅಧೀನಕ್ಕೆ ಒಳಪಡಿಸುತ್ತಿರುವಿ ಎನ್ನುವುದರ ಕುರಿತು ನೀನು ಹೇಳು' ಎಂದು ಎರಡು ಬಾರಿ ಅವನಲ್ಲಿ ಕೇಳಿದರು. ಇಬ್ಬರೂ 'ಪ್ರಥಮವಾಗಿ ನೀನು ಉತ್ತರಿಸು' ಎಂದು ಪಟ್ಟು ಹಿಡಿದರು. ಕೊನೆಗೆ ಪ್ರವಾದಿಯವರು ಹೇಳಿದರು, 'ಅಲ್ಲಾಹನು ಹೇಳುತ್ತಾನೆ, ನಿಶ್ಚಯವಾಗಿಯೂ! ನೀನು (ಶೈತಾನ್) ನನ್ನ ದಾಸರ ಮೇಲೆ ಯಾವುದೇ ರೀತಿಯ ಅಧಿಕಾರವನ್ನು ಹೊಂದಿರುವುದಿಲ್ಲ, ಸನ್ಮಾರ್ಗ ವಂಚಿತರಾಗಿ ನಿನ್ನನ್ನು ಅನುಸರಿಸಿದವರ ಹೊರತು.' ಇದನ್ನು ಕೇಳಿದ ಅಲ್ಲಾಹನ ಶತ್ರು 'ಇದನ್ನು ನೀನು ಹುಟ್ಟುವ ಮುಂಚೆಯೇ ನಾನು ಕೇಳಿರುವೆನು' ಎಂದು ಹೇಳುವನು. ಪ್ರವಾದಿಯವರು ಮುಂದುವರಿಸುತ್ತಾ ಹೇಳುತ್ತಾರೆ, 'ಮತ್ತು ಅಲ್ಲಾಹನು ಹೇಳುತ್ತಾನೆ, ಶೈತಾನನಿಂದ ಯಾವುದಾದರೂ ದುರ್ಭೋಧನೆಯು ನಿಮ್ಮತ್ತ ಬಂದರೆ ನೀವು ಅಲ್ಲಾಹನಲ್ಲಿ ಅಭಯವನ್ನು ಯಾಚಿಸಿರಿ. ನಿಶ್ಚಯವಾಗಿಯೂ ಅವನು ಎಲ್ಲವನ್ನೂ ಆಲಿಸುವವನೂ, ಅರಿಯುವವನೂ ಆಗಿರುತ್ತಾನೆ, (ಸೂರಅಲ್‌ಅಅ್‌ರಾಫ್: 200) ಅಲ್ಲಾಹನಾಣೆ, ನೀನು ನನ್ನ ಸಮೀಪದಲ್ಲಿರುವುದು ನಾನು ಅರಿತಿಲ್ಲ. ಆದರೂ ನಿನ್ನಿಂದ ಅಲ್ಲಾಹನಲ್ಲಿ ನಾನು ಅಭಯವನ್ನು ಯಾಚಿಸುವೆನು' ಎಂದರು. ಇದನ್ನು ಆಲಿಸಿದ ಶೈತಾನನು 'ನೀನು ಸತ್ಯವನ್ನೇ ಹೇಳಿರುವೆ. ಈ ಮಾರ್ಗದ ಮೂಲಕ ನೀನು ನನ್ನಿಂದ ರಕ್ಷೆ ಹೊಂದಬಹುದು' ಎಂದು ಹೇಳುತ್ತಾನೆ.

ಆ ಪ್ರವಾದಿಯವರು ನಂತರ ಶೈತಾನನೊಂದಿಗೆ ಕೇಳುತ್ತಾರೆ, 'ಆದಮರ ಮಕ್ಕಳನ್ನು ನಿನ್ನ ಅಧೀನಕ್ಕೊಳಪಡಿಸಲು ನೀನು ಯಾವ ಮಾರ್ಗವನ್ನು ಉಪಯೋಗಿಸುತ್ತಿರುವೆ? ಶೈತಾನನು ಹೇಳುತ್ತಾನೆ, 'ಅವರನ್ನು ನಾನು ಅವರ ಕೋಪ ಹಾಗೂ ಆಸೆಯ ವೇಳೆಗಳಲ್ಲಿ ಸ್ವಾಧೀನಪಡಿಸಿಕೊಳ್ಳುತ್ತೇನೆ.' (ತಫ್ಸೀರ್ ಇಬ್ನು ಕಸೀರ್ ನೋಡಿ)

ಇಮಾಮ್ ಇಬ್ನುಲ್ ಖಯ್ಯಿಮ್ (ರಹಿಮಹುಲ್ಲಾಹ್) ಹೇಳುತ್ತಾರೆ, "ಶೈತಾನನು ಆದಮರ ಮಕ್ಕಳಲ್ಲಿ ರಕ್ತದಂತೆ ಪ್ರವಹಿಸುತ್ತಾನೆ. (ಎಷ್ಟರವರೆಗೆಂದರೆ) ವ್ಯಕ್ತಿಯೊಬ್ಬನ ಜೀವನದ ಮಹತ್ವಪೂರ್ಣ ಭಾಗವೋ ಎಂಬಷ್ಟು! ಈ ಮೂಲಕ ಅವನು ಆ ವ್ಯಕ್ತಿಯ ಇಚ್ಛೆ ಹಾಗೂ ಆಕಾಂಕ್ಷೆಗಳನ್ನು ಅರಿಯುತ್ತಾನೆ. ವ್ಯಕ್ತಿಯೊಬ್ಬನ ದೌರ್ಬಲ್ಯಗಳನ್ನು ಒಮ್ಮೆ ಅವನು ಅರಿತು ಬಿಟ್ಟರೆ ಆ ಮಾರ್ಗದ ಮೂಲಕ ವ್ಯಕ್ತಿಯಲ್ಲಿ ಪ್ರವೇಶಿಸಿ ಆತನ ಆಸೆ, ಆಕಾಂಕ್ಷೆಗಳನ್ನು ಅವನ ವಿರುದ್ಧವೇ ಪ್ರಯೋಗಿಸುತ್ತಾನೆ.

ಮಾತ್ರವಲ್ಲ ಈ ಮಾಹಿತಿಗಳನ್ನು ಆತ (ಶೈತಾನ್) ಮಾನವರೆಡೆಯಲ್ಲಿರುವ ತನ್ನ ಸಹೋದರರು ಹಾಗೂ ಅನುಯಾಯಿಗಳ ನಡುವೆಯೂ ಪ್ರಚರಿಸುತ್ತಾನೆ. ಈ ಮೂಲಕ ಮನುಷ್ಯರಲ್ಲಿ ಒಬ್ಬರಿನ್ನೊಬ್ಬರ ವಿರುದ್ಧ ದುಷ್ಟ ಯೋಜನೆಗಳನ್ನು ಹೂಡಲು ಉದ್ದೇಶಿಸುವವರು ಸಮಯ ಬಂದಾಗ ತನ್ನ ಎದುರಾಳಿಯ ಈ ರೀತಿಯ ದೌರ್ಬಲ್ಯಗಳನ್ನು ಉಪಯೋಗಿಸಿ ಅವರನ್ನು ಮಟ್ಟ ಹಾಕುತ್ತಾರೆ. ಯಾರು ಈ ತಂತ್ರವನ್ನು ಉಪಯೋಗಿಸುತ್ತಾರೋ ಅವರು ಯಶಸ್ವಿಯಾಗಿ ತಮ್ಮ ಕೆಲಸವನ್ನು ಪೂರೈಸಿಕೊಳ್ಳುತ್ತಾರೆ. ಇದರ ಹೊರತು ಬೇರೆ ಉಪಾಯದ ಮೂಲಕ ತಮ್ಮ ಗುರಿಯನ್ನು ಸಾಧಿಸಬಯಸುವವರು ದಾರಿಯು ಮುಚ್ಚಿದ್ದಾಗಿ ಕಂಡುಕೊಳ್ಳುತ್ತಾರೆ." (ಇಗಾತತ್ ಅಲ್ಲಹ್‌ಫಾನ್' 1/32)

ನಮ್ಮ ಆದಿಪಿತರಾದ ಆದಮ್‌ರವರನ್ನು عليه السلام ಮೋಸಗೊಳಿಸಲು ಶೈತಾನನು ಯಾವ ರೀತಿಯಲ್ಲಿ ತಂತ್ರಗಳನ್ನು ಹೆಣೆದನು ಎಂದು ಇಮಾಮ್ ಇಬ್ನುಲ್ ಖಯ್ಯಿಮ್ ವಿವರಿಸುತ್ತಾರೆ. 'ನಮ್ಮ ಮಾತಾಪಿತರು (ಆದಮ್ ಮತ್ತು ಹವ್ವಾ) ಏನನ್ನು ಇಷ್ಟ ಪಡುತ್ತಾರೆ ಎಂಬುದನ್ನು ಅಲ್ಲಾಹನ ಶತ್ರು (ಇಬ್ಲೀಸ್) ಅರಿತುಕೊಂಡನು. ಆನಂದದಾಯಕವಾದ ಆ ವಾಸಸ್ಥಾನದಲ್ಲಿ (ಸ್ವರ್ಗದಲ್ಲಿ) ಅವರು ಶಾಶ್ವತವಾಗಿ ಜೀವಿಸಬಯಸುತ್ತಾರೆಂದು ಅವನು ಗ್ರಹಿಸಿಕೊಂಡನು. ಅವರತ್ತ ತಲುಪಲು ಬೇರೆ ಯಾವುದೇ ದಾರಿಯಿಲ್ಲ ಎಂದು ಮನಗಂಡ ಆತ ತಾನೊಬ್ಬ ನಿಷ್ಕಳಂಕನೆಂದು ಅವರನ್ನು ನಂಬಿಸಲು ಈ ರೀತಿ ಹೇಳಿದ 'ನೀವು ದೇವಚರರಾಗುವುದರಿಂದ ಅಥವಾ ಚಿರಂತನರಾಗುವುದರಿಂದ ತಡೆಯುವ ಉದ್ದೇಶದ ಹೊರತು ನಿಮ್ಮ ಪ್ರಭುವು ಈ ಮರವನ್ನು ನಿಮಗೆ ನಿಷೇಧಿಸಿಲ್ಲ.' ಅಲ್ಲಾಹನ ಮೇಲೆ ಆಣೆ ಹಾಕಿ ಅವರಿಬ್ಬರೊಂದಿಗೂ ಶೈತಾನನು (ಹೇಳುತ್ತಾನೆ) 'ಖಂಡಿತವಾಗಿಯೂ ನಾನು ನಿಮಿಬ್ಬರ ಹಿತೈಷಿಯೂ, ನಿಷ್ಕಳಂಕನೂ ಆಗಿದ್ದೇನೆ.' ಈ ರೀತಿ ಅವರೀರ್ವರನ್ನು ಶೈತಾನನು ವಂಚನೆಗೊಳಪಡಿಸುತ್ತಾನೆ. ನಂತರ ಶೈತಾನನ ಪ್ರಲೋಭನೆಗೆ ಒಳಪಟ್ಟು ಅವರಿಬ್ಬರು ಆ ಮರದ ಸ್ವಾದವನ್ನು ಸವಿದಾಗ ಪರಸ್ಪರರಿಂದ ಮರೆಯಾಗಿದ್ದ ಅವರ ಗುಪ್ತಾಂಗಗಳು ಅವರ ಮುಂದೆ ವ್ಯಕ್ತಗೊಂಡವು, ಮತ್ತು ತಮ್ಮ ನಗ್ನತೆಯನ್ನು ಅವರು ಸ್ವರ್ಗದ ಎಲೆಗಳಿಂದ ಮುಚ್ಚಿಕೊಂಡರು. ಆಗ ಅವರ ಪ್ರಭುವು ಅವರನ್ನು ಕರೆದು (ಹೇಳಿದನು), "ನಾನು ನಿಮಗೆ ಈ ಮರವನ್ನು ನಿಷೇಧಿಸಿರಲಿಲ್ಲವೆ? ಹಾಗೂ ಶೈತಾನನು ನಿಮ್ಮ ಪ್ರತ್ಯಕ್ಷ ಶತ್ರುವೆಂದು ನಿಮಗೆ ಹೇಳಿರಲಿಲ್ಲವೇ." (ಸೂರ ಅಲ್-ಅಅ್‌ರಾಫ್: 22)

ಒಬ್ಬನನ್ನು ನೇರವಾಗಿ ಕೆಡುಕು ಅಥವಾ ಅವಿಧೇಯತೆಯ ಮಾರ್ಗಕ್ಕೆ ಆಹ್ವಾನಿಸುವುದು ಶೈತಾನನ ವಿಧಾನವಲ್ಲ. ನಮಾಜ್‌ನಲ್ಲಿ ಅಸಡ್ಡೆ ತೋರುವಂತೆ ವ್ಯಕ್ತಿಯೊಬ್ಬನನ್ನು ಪ್ರೋತ್ಸಾಹಿಸಲು ಮೊದಲು (ದೈನಂದಿನ) ಲೌಕಿಕ ಕೆಲಸಗಳನ್ನು ಪೂರ್ತಿಗೊಳಿಸಿ ನಂತರ ನಮಾಝ್‌ಗೆ ಹೋಗೋಣವೆಂಬಂತೆ ಆತ ಅವನ ಕಿವಿಯೂದುತ್ತಾನೆ. ಆ ಕೆಲಸಗಳು ಮುಗಿದು ನಮಾಝ್‌ಗೆ ಹೊರಡಲನುವಾದವನಿಗೆ ಆಹಾರದ ಬಗ್ಗೆ ಜ್ಞಾಪಿಸುತ್ತಾನೆ. ಆ ನಂತರ ಬೇರ್‍ಯಾವುದೋ ವಿಷಯವನ್ನು ನೆನಪಿಸಿ ಆತ ವ್ಯಸ್ತನಾಗುವಂತೆ ಮಾಡುತ್ತಾನೆ. ಅಷ್ಟರಲ್ಲಿ ನಮಾಝ್‌ನ ವೇಳೆ ಮಿತಿ ಮುಗಿದು ಹೋಗಿರುತ್ತದೆ.

ಇದೇ ರೀತಿ ವ್ಯಕ್ತಿಯೊಬ್ಬನು ವ್ಯಾಪಾರವೊಂದನ್ನು ನಡೆಸುತ್ತಿದ್ದರೆ ಶೈತಾನನು ಆತನ ಬಳಿಹೋಗಿ 'ನೀನು ನಮಾಝ್‌ಗೆ ಹೋದರೆ ನಿನ್ನ ಕೆಲವು ಗ್ರಾಹಕರು ತಪ್ಪಿ ಹೋಗುವ ಸಾಧ್ಯತೆಯಿದೆ' ಎಂದು ಕಿವಿಯೂದುತ್ತಾನೆ. ವ್ಯಕ್ತಿಯೊಬ್ಬ ಶ್ರದ್ಧೆಯೊಂದಿಗೆ ನಮಾಝ್ ನಿರ್ವಹಿಸುವವನಾಗಿ ಶೈತಾನನಿಗೆ ಕಂಡರೆ ಆ ವ್ಯಕ್ತಿಯ ನ್ಯೂನತೆಗಳನ್ನು ಉಪಯೋಗಿಸುವ ಮೂಲಕ ವಿವಿಧ ರೀತಿಯಲ್ಲಿ ಆತನನ್ನು ಸಮೀಪಿಸುತ್ತಾನೆ. ಆತನ ಸಂಪನ್ನತೆಯನ್ನು ದಾಳವನ್ನಾಗಿಸಿ ಅವನನ್ನು ದಾರಿಗೆಡಿಸುತ್ತಾನೆ. ಇನ್ನೊಬ್ಬರ ಸಂಪತ್ತನ್ನು ಅನ್ಯಾಯವಾಗಿ ಕಿತ್ತುಕೊಳ್ಳುವಂತೆಯೂ, ಝಕಾತ್ (ಕಡ್ಡಾಯದಾನ) ನೀಡಿದರೆ ದಾರಿದ್ರ್ಯವುಂಟಾಗಬಹುದೆಂದೂ ಆತನ ಕಿವಿಯೂದಿ ಝಕಾತ್ ಪಾವತಿಸದಂತೆಯೂ ತಡೆಯುತ್ತಾನೆ. ಆದರೆ ಪ್ರವಾದಿﷺ ಈ ಕುರಿತು ಹೇಳುತ್ತಾರೆ, "ಝಕಾತನ್ನು ಪಾವತಿಸುವುದರಿಂದಾಗಿ ನಿಮ್ಮ ಸಂಪನ್ನತೆಯು ಕಡಿಮೆಯಾಗಲಾರದು." (ಸಹೀಹ್ ಮುಸ್ಲಿಂ)

ಇನ್ನು ವಿಶ್ವಾಸಿಯೊಬ್ಬನು ತನ್ನ ಆರಾಧನ ಕರ್ಮಗಳಲ್ಲಿ (ನಮಾಝ್, ಝಕಾತ್) ಬದ್ಧತೆಯಿರುವವನಾಗಿದ್ದರೆ ಸ್ತ್ರೀಯ ಸೌಂದರ್ಯಕ್ಕೆ ಮಾರು ಹೋಗುವಂತೆ ಮಾಡಿ ವ್ಯಭಿಚಾರವೆಸಗುವಂತೆ ಆತನನ್ನು ಪ್ರೇರೇಪಿಸುತ್ತಾನೆ. ಆದರೂ ಇವೆಲ್ಲವುಗಳಿಂದಲೂ ಮುಕ್ತನಾಗಿ ಆತ ದೃಢವಾಗಿ ನೆಲೆನಿಂತರೆ ಅಮಲು ಪದಾರ್ಥ ಅಥವಾ ಮದ್ಯಪಾನದ ಆಮಿಷವನ್ನೊಡ್ಡುತ್ತಾನೆ. ತಿಳಿಗೇಡಿತನ, ಕೃತಘ್ನತೆ, ವಾದವಿವಾದಶೀಲತೆ, ಮಿತಿಗಳ ಉಲ್ಲಂಘನೆ, ಅಜಾಗರೂಕತೆ, ಹೆಮ್ಮೆ, ಸಂಶಯ, ಗುಮಾನಿ, ಹತಾಶೆ, ನಿರಾಶವಾದ, ಎಚ್ಚರಗೇಡಿತನ, ಆತುರ, ವಿಕೃತ ಸಂತೋಷ, ಸ್ವಪ್ರಶಂಸೆ, ಕೆಟ್ಟ ನಡತೆ, ಅಸಡ್ಡೆ, ಪೀಡನೆ, ಜಿಪುಣತನ, ದುರಾಶೆ, ಜಗಳ ಮತ್ತು ವಾದ ವಿವಾದದ ಸಂದರ್ಭದಲ್ಲಿ ಅತಿಯಾದ ಹಗೆತನ, ಭಯ, ದಿಗಿಲು, ಬಂಡಾಯ, ನಿರಂಕುಶಾಧಿಕಾರ, ಸಂಪತ್ತಿನೊಂದಿಗೆ ಮೋಹ ಇವೇ ಮುಂತಾದ ಯಾವುದಾದರೂ ಕೆಡುಕುಗಳ ಮೂಲಕ ಆತನನ್ನು ವಂಚಿಸುತ್ತಾನೆ. ಇವುಗಳು ಮನುಷ್ಯನ ಹೃದಯದೊಳಕ್ಕೆ ಶೈತಾನನ ಪ್ರವೇಶ ಕವಾಟಗಳಾಗಿವೆ.

# 'ವಸ್‌ವಾಸ್'ನ 3 ಮೂಲಗಳು

**1.ಒಬ್ಬನು ಸ್ವಯಂ ಕೆಡುಕಿನೊಂದಿಗೆ ಒಲವನ್ನು ಹೊಂದಿರುವುದು.**

**"ನಿಶ್ಚಯವಾಗಿಯೂ, ಮನುಷ್ಯನನ್ನು ನಾವು ಸೃಷ್ಟಿಸಿದ್ದೇವೆ.**
**ಅವನ ಮನಸ್ಸು ಅವನಿಗೆ ನೀಡುವ ದುರ್ಬೋಧನೆಗಳನ್ನು ನಾವು ಅರಿತಿರುವೆವು..."**
**(ಸೂರ ಕಾಫ್: 16)**

**2. ಜಿನ್ನ್‌ಗಳ ಪೈಕಿಯಿರುವ ಶೈತಾನ್.**

**"ಆಗ ಶೈತಾನನು ಅವರಿಗೆ ದುರ್ಬೋಧನೆಯನ್ನು ನೀಡಿದನು.**
**'ಓ ಆದಮ್, ಅಮರತ್ವವನ್ನು ನೀಡುವ ಒಂದು ವೃಕ್ಷ ಹಾಗೂ ನಶಿಸಿ ಹೋಗದ**
**ಒಂದು ಅಧಿಪತ್ಯದ ಕುರಿತು ನಾನು ನಿನಗೆ ತಿಳಿಸಿಕೊಡಲೇ?"**
**(ಸೂರ ತಾಹಾ: 120)**

**3. ಮನುಷ್ಯರ ಪೈಕಿಯಿರುವ ಶೈತಾನ್.**

**"ಹೇಳಿರಿ, ಮನುಷ್ಯರ ಪರಿಪಾಲಕನೂ, ಮನುಷ್ಯರ ಅಧಿಪತಿಯೂ,**
**ಮನುಷ್ಯರ ಆರಾಧನೆಗರ್ಹನೂ ಆಗಿರುವವನೊಂದಿಗೆ ನಾನು ಅಭಯವನ್ನು**
**ಯಾಚಿಸುತ್ತೇನೆ. ಮನುಷ್ಯರ ಹೃದಯಗಳಲ್ಲಿ**
**ದುರ್ಬೋಧನೆಗಳನ್ನು ಹಾಕಿ ಹಿಂದೆ ಸರಿಯುವ**
**ಮನುಷ್ಯರು ಹಾಗೂ ಜಿನ್ನ್‌ಗಳ ಪೈಕಿಯಿರುವ ದುರ್ಬೋಧಕರ ಕೇಡಿನಿಂದ"**
**(ಸೂರ ಅನ್ನಾಸ್:1-6)**

# ಒಬ್ಬನು ಅವನ ವಸ್‌ವಾಸ್‌ಗಾಗಿ ಶಿಕ್ಷಿಸಲ್ಪಡುವನೇ?

ಸೂರ ಬಕರಾದ 284ನೇ ಸೂಕ್ತ 'ನಿಮ್ಮ ಮನಸ್ಸುಗಳಲ್ಲಿ ಇರುವುದನ್ನು ನೀವು ಬಹಿರಂಗಗೊಳಿಸಿದರೂ, ಮುಚ್ಚಿಟ್ಟರೂ ಅಲ್ಲಾಹನು ನಿಮ್ಮಿಂದ ಅದರ ಕುರಿತು ಲೆಕ್ಕಾಚಾರಗಳನ್ನು ಕೇಳಿಯೇ ತೀರುತ್ತಾನೆ." ಎಂಬ ಸೂಕ್ತದ ಕುರಿತು ಇಮಾಮ್ ಇಬ್ನು ಕಸೀರ್ ಈ ರೀತಿ ಬರೆಯುತ್ತಾರೆ. 'ಇದರರ್ಥ; ಅಲ್ಲಾಹು ಈ ಕುರಿತು ವಿಚಾರಣೆಯನ್ನು ತಂದು ನಿನ್ನನ್ನು ಪ್ರಶ್ನಿಸಿದರೂ ನಿನ್ನನ್ನು ಶಿಕ್ಷಿಸುವವನಲ್ಲ, ನಿಯಂತ್ರಿಸಿಕೊಳ್ಳಲು ಸಾಧ್ಯವಾಗಿದ್ದವನಾಗಿದ್ದು ಕೂಡ ನಿಯಂತ್ರಿಸದವನ ಹೊರತು.'

ಇದು ಒಬ್ಬನಿಗೆ ನಿಯಂತ್ರಣಾತೀತವಾಗಿದ್ದರೆ ಅದು ನಫ್ಸ್‌ನಿಂದುಂಟಾಗುವ ವಸ್‌ವಾಸ್ ಆಗಿದೆ. ಇದಕ್ಕಾಗಿ ಯಾರನ್ನೂ ಉತ್ತರದಾಯಿಯನ್ನಾಗಿ ಮಾಡಲಾಗುವುದಿಲ್ಲ ಮತ್ತು ಕೆಟ್ಟ ವಸ್‌ವಸವನ್ನು ದ್ವೇಷಿಸುವುದು ವಿಶ್ವಾಸದ ಒಂದು ಭಾಗವಾಗಿದೆ. ಈ ಸಂಬಂಧವಾಗಿ ಇಬ್ನು ಕಸೀರ್(ರಹಿಮಹುಲ್ಲಾಹ್) ಹದೀಸೊಂದನ್ನು ಉಲ್ಲೇಖಿಸುತ್ತಾರೆ. "ಅವರು ತಮಗೆ ತಾವು ಏನನ್ನು ಹೇಳಿಕೊಂಡರೋ, ಅದಕ್ಕಾಗಿ ನನ್ನ ಉಮ್ಮತನ್ನು (ಸಮುದಾಯವನ್ನು) ಅಲ್ಲಾಹು ಕ್ಷಮಿಸುತ್ತಾನೆ. ಅದನ್ನು ಉಚ್ಚರಿಸುವ ಅಥವಾ ಅದರಂತೆ ಪ್ರವೃತ್ತಿಸುವ ತನಕ."

ನಫ್ಸ್ ಅಥವಾ ಶೈತಾನ್ ಇವೆರಡರಲ್ಲಿ ಯಾವುದೇ ಒಂದರ ಕಾರಣದಿಂದ ಉಂಟಾದ ವಸ್‌ವಾಸ್ (ಕೆಟ್ಟ ಮನದಿಂಗಿತ) ಆಗಿದ್ದರೂ ಅದನ್ನು ಮಾತು ಅಥವಾ ಕೃತಿಯ ಮೂಲಕ ಪ್ರಕಟಿಸುವ ಹೊರತು ಯಾರೊಬ್ಬನೂ ಶಿಕ್ಷಿಸಲ್ಪಡುವುದಿಲ್ಲ. ಹೇಗಿದ್ದರೂ ವಸ್‌ವಾಸ್‌ನ (ದುಷ್ಪ್ರೇರಣೆ) ವಿರುದ್ಧ ಪ್ರತಿರೋಧತೆಯನ್ನು ತೋರಬೇಕೆಂದು ನಮ್ಮನ್ನು ನಿರ್ದೇಶಿಸಲಾಗಿದೆ.

# ನಶಿಸಿಹೋದ ಮನೆಯಲ್ಲಿ ಶೈತಾನನಿಗೇನು ಕೆಲಸ?

ಶೈಖುಲ್‌ಇಸ್ಲಾಮ್ ಇಬ್ನುತೈಮಿಯ್ಯಾ (ರಹಿಮಹುಲ್ಲಾಹ್) ಹೇಳುತ್ತಾರೆ, "ಅಲ್ಲಾಹನನ್ನು ಸ್ಮರಿಸುವ ಮತ್ತು ಅವನತ್ತ ತಿರುಗುವ ಪ್ರತಿಯೊಬ್ಬರೊಂದಿಗೂ ಸಂಭವಿಸುವಂತಹದ್ದಾಗಿದೆ ವಸ್‌ವಾಸ್. ಅದು ಆತನಿಗೆ ತಪ್ಪಿಸಿಕೊಳ್ಳಲಾಗದಂತಹದ್ದು ಮತ್ತು ಅನಿವಾರ್ಯವಾಗಿಯೂ ಸಂಭವಿಸುವುದು. ಆದ್ದರಿಂದ, ಆತ (ವಿಶ್ವಾಸಿ) ದೃಢವಾಗಿದ್ದು, ತಾಳ್ಮೆ ಕೈಗೊಂಡು, ಅಲ್ಲಾಹನ ಸ್ಮರಣೆ ಹಾಗೂ ಆರಾಧನೆಯಲ್ಲಿ ನೆಲೆಗೊಳ್ಳಬೇಕು. ಈ ವೇಳೆಯಲ್ಲಿ ಎದೆಗುಂದದೆ ಕಠಿಣ ಪ್ರಯತ್ನವನ್ನು ಮಾಡಿದರೆ ಶೈತಾನನ ತಂತ್ರವನ್ನು ವಿಫಲಗೊಳಸಬಹುದು." ಕುರ್‌ಆನ್ ಹೇಳುತ್ತದೆ.

"ನಿಶ್ಚಯವಾಗಿಯೂ, ಶೈತಾನನ ಕುತಂತ್ರವು ಅತ್ಯಂತ ದುರ್ಬಲವಾಗಿದೆ."

(ಸೂರ ಅನ್ನಿಸಾ:*76*)

ವ್ಯಕ್ತಿಯೊಬ್ಬನು ತನ್ನ ಹೃದಯವನ್ನು ಅಲ್ಲಾಹನತ್ತ ತಿರುಗಿಸಲು ಇಚ್ಛಿಸುವಾಗಲೆಲ್ಲಾ ಅನ್ಯ ವಿಷಯಗಳ ಕುರಿತಾದ ಯೋಚನೆಗಳು ಆತನ ಮನದಾಳದಲ್ಲಿ ಹೊಂಚು ಹಾಕತೊಡಗುತ್ತವೆ. ಶೈತಾನನು ಒಬ್ಬ ಡಕಾಯಿತನಂತಾಗಿದ್ದಾನೆ. ವಿಶ್ವಾಸಿಯೊಬ್ಬ ಅಲ್ಲಾಹನ ಪಥದಲ್ಲಿ ಮುನ್ನಡೆಯಲು ಬಯಸುವಾಗಲೆಲ್ಲ ಆತನು ಅವನನ್ನು ಅಡ್ಡಗಟ್ಟಲು ಪ್ರಯತ್ನಿಸುತ್ತಾನೆ. ಸಲಫುಸ್ವಾಲಿಹೀನ್‌ಗಳ ಪೈಕಿಯ ವಿದ್ವಾಂಸರೊಬ್ಬರೊಂದಿಗೆ 'ಯಹೂದಿಗಳು ಮತ್ತು ಕ್ರೈಸ್ತರು ತಮಗೆ ಯಾವುದೇ ವಸ್‌ವಾಸ್‌ನ ಅನುಭವವಾಗುವುದಿಲ್ಲವೆಂದು ಹೇಳುತ್ತಿದ್ದಾರಲ್ಲಾ? ಎಂದು ಕೇಳಲ್ಪಟ್ಟಾಗ, 'ಅವರು ಸರಿಯಾಗಿಯೇ ಹೇಳುತ್ತಿದ್ದಾರೆ! ನಶಿಸಿ ಹೋದ ಮನೆಯಲ್ಲಿ ಶೈತಾನನಿಗೇನು ತಾನೆ ಕೆಲಸವಿದೆ' ಎಂದು ಉತ್ತರಿಸಿದ್ದರು. (ಮಜ್ಮೂಅಲ್ ಫತಾವಾ 22/608)

## ನಿಷಿದ್ಧ ಕಾರ್ಯಗಳನ್ನು ಮನಮೋಹಕವಾಗಿ ಹೆಸರಿಸುವ ಮೂಲಕ ಶೈತಾನನು ಅಸತ್ಯವನ್ನು ಅಂದಗೊಳಿಸಿಯೂ ಮತ್ತು ಪಾಪವನ್ನು ಆಕರ್ಷಕವಾಗಿಸಿಯೂ ತೋರಿಸುತ್ತಾನೆ.

"ಯಾರಾದರೂ ಪರಮ ಕರುಣಾಮಯಿಯ (ಅಲ್ಲಾಹನ) ಉದ್ಬೋಧನೆಯ ಕುರಿತು ಅಂಧತೆಯನ್ನು ನಟಿಸಿದರೆಂದಾದರೆ ಅವನಿಗೆ ನಾವು ಕರೀನ್‌ನೊಬ್ಬನನ್ನು (ಪಿಶಾಚಿ) ನಿಯೋಗಿಸುತ್ತೇವೆ. ನಂತರ ಅವನು (ಪಿಶಾಚಿ) ಆತನ ಆಪ್ತ ಮಿತ್ರನಾಗಿರುತ್ತಾನೆ ಮತ್ತು ಅವರು (ಪಿಶಾಚಿಗಳು) ಇಂತವರನ್ನು ನೇರಮಾರ್ಗದಿಂದ ತಡೆಯುತ್ತಾರೆ. ಆದರೆ ನಾವು ಸನ್ಮಾರ್ಗದಲ್ಲಿದೇವೆಂದೇ ಅವರು ಭಾವಿಸುತ್ತಾರೆ." (ಸೂರ ಅಝ್ಝುಖ್‌ರುಫ್: 36, 37) ಈ ಸೂಕ್ತವು ಕರೀನ್ (ಪಿಶಾಚಿ) ಮಾಡುತ್ತಿರುವ ಕೆಲಸವೇನೆಂದು ನಮಗೆ ತಿಳಿಸಿಕೊಡುತ್ತದೆ. ಅವೇನೆಂದರೆ,

1. ಅಲ್ಲಾಹನ ಪಥದಿಂದ ಮನುಷ್ಯನನ್ನು ತಡೆಯುವುದು.
2. ತಾನು ಸತ್ಯದಲ್ಲಿಯೇ ನೆಲೆಗೊಂಡಿದ್ದೇನೆಂದು ವ್ಯಕ್ತಿ ವಿಶ್ವಾಸವಿಡುವಂತೆ ಮಾಡಲು ಆತನಲ್ಲಿ ಗೊಂದಲವನ್ನು ಮೂಡಿಸುವುದು.

ವ್ಯಕ್ತಿಯೊಬ್ಬನ ದೃಷ್ಟಿಗೆ ಅಸತ್ಯವನ್ನು ಮನೋಹರಗೊಳಿಸಿ ಅಂದವಾಗಿ ತೋರ್ಪಡಿಸದಿರುವ ತನಕ ಮತ್ತು ಅದೇ ರೀತಿ ಆತನು ಅಲ್ಲಾಹನ ಶರೀಯತ್‌ಗೆ ವಿರುದ್ಧವಾಗಿದ್ದಾನೆಂದು ಗ್ರಹಿಸಲು ಆತನಿಗೆ ಆಸ್ಪದ ನೀಡುವ ತನಕ ಅಲ್ಲಾಹನ ಪಥದಿಂದ ಆತನನ್ನು ತಡೆಯುವುದು ಸಾಧ್ಯವಿಲ್ಲ.

ತನ್ನ ಸಂಪೂರ್ಣ ಜೀವನದಲ್ಲಿ ತಾನು ಮಾಡಿದ ಕರ್ಮಗಳು ಸರಿಯಾಗಿಯೇ ಇವೆ ಎಂಬ ಊಹೆಯಲ್ಲಿದ್ದ ಮನುಷ್ಯ ಒಂದು ದಿನ ಸತ್ಯವೇನೆಂದು ಅರಿತುಕೊಳ್ಳುವಾಗ ಸಮಯ ಮೀರಿ ಹೋಗಿರುತ್ತದೆ! ಆ ದಿನ,

"ಅವನು (ಮನುಷ್ಯ) ತನ್ನ ಕರೀನ್ (ಶೈತಾನ್)ನೊಂದಿಗೆ ಹೇಳುತ್ತಾನೆ,
'ನನ್ನ ಮತ್ತು ನಿನ್ನ ನಡುವೆ ಉದಯಾಸ್ತಮಾನಗಳ ಅಂತರವಿರುತ್ತಿದ್ದರೆ
ಎಷ್ಟೊಂದು ಉತ್ತಮವಾಗಿರುತ್ತಿತ್ತು.
ಎಷ್ಟೊಂದು ಕೆಟ್ಟ ಸಹಚರನಾಗಿರುವೆ ನೀನು"
(ಸೂರ ಅಝ್ಝುಖ್‌ರುಫ್: 38)

ಇದರ ಅರ್ಥಾನ್ವಯದಲ್ಲಿ ಇಮಾಮ್ ಇಬ್ನುಲ್ ಖಯ್ಯಿಂ ಹೇಳುತ್ತಾರೆ, 'ಮನುಷ್ಯರು ವಂಚನೆಗೆ ಒಳಪಡುವವರೆಗೂ ನಿರಂತರವಾಗಿ ಅವರ ಮನಸ್ಸನ್ನು ಮರಳುಗೊಳಿಸುತ್ತಾ ಇರುವುದು ಶೈತಾನನ ಹೂಟಗಳಲ್ಲಿ ಒಂದಾಗಿದೆ. ಅಲ್ಲಾಹು ಇಚ್ಛಿಸುವವರನ್ನು ಹೊರತುಪಡಿಸಿ ಯಾರೂ ಅವನ ಮಾಯಾವಿದ್ಯೆಯಿಂದ ಸುರಕ್ಷಿತರಲ್ಲ. ಹಾನಿಕಾರಕವಾಗಿರುವುದನ್ನು (ಕೆಡುಕನ್ನು) ವ್ಯಕ್ತಿಯೊಬ್ಬನ ಮನಸ್ಸಿಗೆ ಆಕರ್ಷಣೀಯವಾಗಿ ತೋರಿಸಿ ಆ ವ್ಯಕ್ತಿ ಅದನ್ನು ಲಾಭದಾಯಕವೆಂದು ಪರಿಗಣಿಸುವಂತೆ ಮಾಡುತ್ತಾನೆ. ಲಾಭದಾಯಕ ಹಾಗೂ ಉತ್ತಮವಾದವುಗಳ ಬಗ್ಗೆ ಅವನಲ್ಲಿ ನಿರುತ್ಸಾಹವನ್ನು ಮೂಡಿಸಿ ಅವು ತನಗೆ ಕೇಡನ್ನುಂಟು ಮಾಡಬಲ್ಲುದು ಎಂದು ಆತ ನಂಬುವಂತೆ ಮಾಡುತ್ತಾನೆ. ಲಾ ಇಲಾಹ ಇಲ್ಲಲ್ಲಾಹ್. ಆತನ ಮಾಯಗಾರಿಕೆಗೆ ಬಲಿಯಾದ ಎಷ್ಟೊಂದು ಜನರು!' (ಆಲಮ್ ಅಲ್ ಜಿನ್ನ್ ವಶ್ಶಯಾತೀನ್‌ನಿಂದ ಉಲ್ಲೇಖ)

ಆದಮ್‌ರವರು(عليه السلام) ನಿಷೇಧಿತ ವೃಕ್ಷದಿಂದ ಭಕ್ಷಿಸುವಂತೆ ಮಾಡಲು ಶೈತಾನನು ಆ ಮರವನ್ನು ಮೋಹಕ ಹಾಗೂ ಆಕರ್ಷಣೀಯವಾಗಿ ಹೆಸರಿಸಿ ಅವರಿಗೆ ತೋರಿಸುವಂತಹ ತಂತ್ರವನ್ನು ಹೆಣೆದಿದ್ದನು. ಆ ಮರವು 'ಅಮರತ್ತ್ವವನ್ನು ನೀಡುವ ವೃಕ್ಷ' ಎಂಬ ವಾದವನ್ನು ಅವನು ಆದಮರ ಮುಂದೆ ಮಂಡಿಸಿದನು ಮತ್ತು ಆ ಮರದಿಂದ ಭಕ್ಷಿಸಿದರೆ ಶಾಶ್ವತವಾಗಿ ಸ್ವರ್ಗದಲ್ಲಿ ಜೀವಿಸಬಹುದು ಅಥವಾ ಅದು ನಿಮ್ಮನ್ನು ದೇವಚರರನ್ನಾಗಿ ಪರಿವರ್ತಿಸುತ್ತದೆ ಎಂದೂ ಹೇಳಿದ್ದನು. "ಆಗ ಶೈತಾನನು ಅವರಿಗೆ ದುರ್ಭೋದನೆ ನೀಡಿದನು. ಓ ಆದಮ್, ಅಮರತ್ವವನ್ನು ನೀಡುವ ಒಂದು ವೃಕ್ಷ ಹಾಗೂ ನಶಿಸಿ ಹೋಗದ ಒಂದು ಅಧಿಪತ್ಯದ ಕುರಿತು ನಾನು ನಿಮಗೆ ತಿಳಿಸಿಕೊಡಲೇ?" (ಸೂರ ತಾಹಾ: 120) ಮತ್ತು "ನೀವು ದೇವಚರರಾಗುವುದರಿಂದ ಅಥವಾ ಚಿರಂಜೀವಿಗಳಾಗುವುದರಿಂದ ತಡೆಯುವ ಉದ್ದೇಶದ ಹೊರತು ನಿಮ್ಮ ಪ್ರಭುವು ಈ ಮರವನ್ನು ನಿಮಗೆ ನಿಷೇಧಿಸಿಲ್ಲ." (ಸೂರ ಅಅ್‌ರಾಫ್: 20) ಆದಮ್‌ರವರು(عليه السلام) ಶೈತಾನನ ಮಾತನ್ನು ಅನುಸರಿಸಿದರು. ತರುವಾಯ ಸ್ವರ್ಗದಿಂದ ಹೊರಹಾಕಲ್ಪಟ್ಟರು.

ಶೈತಾನನು ಸುಳ್ಳನ್ನು ಯಾವ ರೀತಿ ತನ್ನ ಹಿಂಬಾಲಕರಿಗೆ ಆಕರ್ಷಣೀಯ ಹಾಗೂ ಮನೋಹರವಾಗಿ ತೋರಿಸುತ್ತಾನೆ ಮತ್ತು ಅವನು ಉದ್ದೇಶಿಸುವ ರೀತಿಯಲ್ಲಿ ನಂತರ ಅವರು ಹೇಗೆ ಸಂಚರಿಸುತ್ತಾರೆ ಎನ್ನುವುದರ ಕುರಿತು ಕುರ್‌ಆನ್ ಹಲವಾರು ದೃಷ್ಟಾಂತಗಳನ್ನು ನಮ್ಮ ಮುಂದಿಡುತ್ತದೆ.

ಆ ಹುದ್‌ಹುದ್ (ಮರ ಕುಟುಕುವ ಸುಂದರ ಪಕ್ಷಿ) ಸುಲೈಮಾನ್‌ಗೆ ಅವಳ ಕುರಿತು ಈ ರೀತಿಯ ವಿವರಗಳನ್ನು ನೀಡಿತು. "....... ಸಬಾದಿಂದ ಸತ್ಯವಾದ ಒಂದು ವಾರ್ತೆಯೊಂದಿಗೆ ನಾನು ಬಂದಿರುವೆನು. ಸ್ತ್ರೀಯೊಬ್ಬಳು ಅವರನ್ನು ಆಳುತ್ತಿರುವುದಾಗಿ ನಾನು ಕಂಡುಕೊಂಡೆನು. ಎಲ್ಲಾ ಕಾರ್ಯಗಳಲ್ಲೂ ಅವಳಿಗೆ ನೀಡಲ್ಪಟ್ಟಿದೆ. ಅವಳು ಮಹಾ ಸಿಂಹಾಸನವೊಂದನ್ನು ಹೊಂದಿದ್ದಾಳೆ. ಅವಳು ಮತ್ತು ಅವಳ ಜನತೆ ಅಲ್ಲಾಹನಿಗೆ ಬದಲಾಗಿ ಸೂರ್ಯನಿಗೆ ಸಾಷ್ಟಾಂಗವೆರಗುತ್ತಿರುವುದಾಗಿ ನಾನು ಕಂಡೆನು. ಶೈತಾನನು ಅವರಿಗೆ ಅವರ ಕರ್ಮಗಳನ್ನು ಸುಂದರವಾಗಿ ತೋರಿಸುತ್ತಾ ಅವರನ್ನು ನೇರಮಾರ್ಗದಿಂದ ತಡೆದು ಬಿಟ್ಟಿರುವನು. ಆದುದರಿಂದ ಅವರು ಸನ್ಮಾರ್ಗವನ್ನು ಹೊಂದುವವರಲ್ಲ. ಆಕಾಶಗಳಲ್ಲೂ, ಭೂಮಿಯಲ್ಲೂ ಅಡಗಿರುವವುಗಳನ್ನು ಹೊರತರುವ, ನೀವು ರಹಸ್ಯವಾಗಿಡುವುದನ್ನೂ, ಬಹಿರಂಗಪಡಿಸುವುದನ್ನೂ ಅರಿಯುವ ಅಲ್ಲಾಹನಿಗೆ ಅವರು ಸಾಷ್ಟಾಂವೆರಗದಿರಲಿಕ್ಕಾಗಿ (ಪಿಶಾಚಿ ಆ ರೀತಿ ಮಾಡುತ್ತಿದ್ದಾನೆ)" (ಸೂರ ಅನ್ನಮ್ಲ್ 22-25)

ಶೈತಾನನ ತಂತ್ರಗಳು ತುಂಬಾ ಅಪಾಯಕಾರಿಯಾಗಿರುತ್ತವೆ. ಏಕೆಂದರೆ ಅಸತ್ಯವನ್ನು (ಕೇಡನ್ನು) ವ್ಯಕ್ತಿಯೊಬ್ಬನ ದೃಷ್ಟಿಗೆ ಆಕರ್ಷಣೀಯವಾಗಿ ಗೋಚರಿಸುವಂತೆ ಮಾಡಿದರೆ ಹೇಗೆ ತಾನೇ ಆ ವ್ಯಕ್ತಿ ಉತ್ತಮವಾದುದನ್ನು (ಸತ್ಕರ್ಮವನ್ನು) ಸಾಧಿಸಲು ಪ್ರಯತ್ನಿಸುವನು? ಮತ್ತು ಹೇಗೆ ತಾನೇ ಶೈತಾನನನ್ನು ಹಿಮ್ಮೆಟ್ಟಿಸುವನು?

ಪ್ರವಾದಿ ಸ್ವಾಲಿಹ್‌ರವರ عليه السلام ಸಮುದಾಯವಾದ 'ಸಮೂದ್'ನವರ ದೃಷ್ಟಾಂತವನ್ನು ಮುಂದಿಟ್ಟು ಯಾವ ರೀತಿ ಶೈತಾನನು ಕೇಡನ್ನು ಹಿತಕರವಾಗಿ ಭಾಸವಾಗುವಂತೆ ಮಾಡುತ್ತಾನೆ ಎಂಬ ಮತ್ತೊಂದು ಉದಾಹರಣೆಯನ್ನು ನೋಡಿ. ಅಲ್ಲಾಹು ಹೇಳುತ್ತಾನೆ, "ಮತ್ತು ನಾವು ಅವರಿಗೆ ಕೆಲವು ಜೊತೆಗಾರರನ್ನು (ಶಯಾತೀನ್‌ಗಳು) ಗೊತ್ತುಪಡಿಸಿಕೊಟ್ಟಿವು (ಇಹಲೋಕದಲ್ಲಿ). ಆ ಜೊತೆಗಾರರು ಅವರಿಗೆ ಅವರ ಮುಂದಿರುವುದನ್ನು (ಪುನರುತ್ಥಾನ, ಸ್ವರ್ಗ, ನರಕವೆಂಬುದಿಲ್ಲವೆಂದು ಭವಿಷ್ಯದ ಕುರಿತು ತಪ್ಪಾಭಿಪ್ರಾಯವನ್ನು ಮನೋಹರಗೊಳಿಸಿ ತೋರಿಸಿದನು) ಮತ್ತು ಹಿಂದಿರುವುದನ್ನೂ (ಈ ಜಗತ್ತು ತುಂಬಾ ಪ್ರಾಚೀನವಾಗಿದೆ. ಇದನ್ನು ಯಾವುದೇ ಸೃಷ್ಟಿಕರ್ತನು ಸೃಷ್ಟಿಸಿಲ್ಲ, ಇದು ನೈಸರ್ಗಿಕವಾಗಿ ಸೃಷ್ಟಿಗೊಂಡಿದೆಯೆಂಬ ಗತಕಾಲದ ಕುರಿತು ತಪ್ಪಾಭಿಪ್ರಾಯವನ್ನು ಮನೋಹರಗೊಳಿಸಿ ತೋರಿಸಿದನು) ಮೋಹಕವಾಗಿ ತೋರಿಸಿದರು" (ಸೂರ ಫುಸ್ಸಿಲತ್: 25) (ರಾಜ್ಜಿಯವರ ತಫ್ಸೀರ್ ಅಲ್ ಕಬೀರ್ 27/103 ನೋಡಿ)

ಈ ಜಗತ್ತಿಗೆ ಯಾವನೇ ಸೃಷ್ಟಿಕರ್ತನಿಲ್ಲ ಮತ್ತು ಪುನರುತ್ಥಾನ ದಿನವೆಂಬುದೂ ಕೇವಲ ಮಿಥ್ಯೆಯಾಗಿದೆ ಎಂಬ ನಂಬಿಕೆಯನ್ನು ಜನರೆಡೆಯಲ್ಲಿ ಪ್ರಚುರಪಡಿಸುವ ಮೂಲಕ ಈ ಜಗತ್ತನ್ನು ಮನಮೋಹಕವಾಗಿ ಪ್ರದರ್ಶಿಸಿದರೆ ಅದು ಜನರನ್ನು ದೀನ್‌ನಿಂದ (ಧರ್ಮದಿಂದ) ಹೊರಳುವಂತೆ ಮಾಡಿ ದುರ್ಮಾರ್ಗಕ್ಕೆಳೆಯುತ್ತದೆ. ಸುಬ್‌ಹಾನಲ್ಲಾಹ್! ಇದು ತಾನೆ ಇಂದು ನಾವು ಡಾರ್ವಿನಿಸ್ಟ್‌ಗಳಿಂದ (ಡಾರ್ವಿನ್ನನ ನಿರೀಶ್ವರವಾದದಿಂದ

ಪ್ರೇರಿತರಾದವರಿಂದ) ಕಾಣುತ್ತಿರುವುದು?

ಸಮೂದ್‌ನ ಜನರು (ಪ್ರವಾದಿ ಸ್ವಾಲಿಹ್‌ರವರ ಸಮುದಾಯ) ತಮ್ಮ ಬುದ್ಧಿಮತ್ತೆಗಾಗಿ ತುಂಬಾ ಹೆಸರುವಾಸಿಯಾಗಿದ್ದರು. ಅಲ್ಲಾಹನಿಂದ ಅವತೀರ್ಣಗೊಳ್ಳುವ ದಿವ್ಯವಾಣಿಗಿಂತಲೂ ಮಿಗಿಲಾಗಿ ವ್ಯಕ್ತಿಯೊಬ್ಬನ ವಿಚಾರ ಹಾಗೂ ಅಭಿಪ್ರಾಯಗಳಿಗೆ ಪ್ರಾಮುಖ್ಯತೆ ಸಿಗುವಂತಹ ತಂತ್ರದ ಮೂಲಕ ಶೈತಾನನು ಅವರನ್ನು ಸಮೀಪಿಸಿದನು. ಹಾಗಾದ್ದರಿಂದ ಅವರು ಮೊಂಡುತನ ಹಾಗೂ ತರ್ಕವಿತರ್ಕಗಳಲ್ಲಿ ಬಿದ್ದು ನಶಿಸಿ ಹೋದರು.

"ಆದ್ ಮತ್ತು ಸಮೂದ್ ಸಮುದಾಯಗಳನ್ನೂ,
(ನಾವು ನಾಶಗೊಳಿಸಿದೆವು) ಅವರ ವಾಸಸ್ಥಾನಗಳಿಂದ ನಿಮಗದು
ಸುವ್ಯಕ್ತಗೊಂಡವು. ಶೈತಾನನು ಅವರ ಕರ್ಮಗಳನ್ನು ಅವರಿಗೆ
ಅಂದಗೊಳಿಸಿ ತೋರಿಸಿ ಅವರನ್ನು ನೇರಮಾರ್ಗದಿಂದ ತಡೆದಿದ್ದನು.
(ವಾಸ್ತವದಲ್ಲಿ) ಅವರು ಗ್ರಹಿಸಲು ಸಾಮರ್ಥ್ಯವಿದ್ದವರಾಗಿದ್ದರು."
(ಸೂರ ಅಂಕಬೂತ್: 38)

ಬುದ್ಧಿವಂತರಾದ ಎಷ್ಟೊಂದು ಜನರು ಇಂದು ಶೈತಾನನಿಂದ ಮೂರ್ಖಗೊಳಿಸಲ್ಪಟ್ಟಿದ್ದಾರೆ. ''ಕಮ್ಯೂನಿಸಂ' ಹಾಗೂ 'ಸೆಕ್ಯುಲರಿಸಂ'ನಂತಹ ದುರ್ವಿಚಾರಧಾರೆಗಳಿಗೆ ಮೋಸ ಹೋದ ಎಷ್ಟೊಂದು ಬುದ್ಧಿವಂತರು! ಶೈತಾನನು ಅಸತ್ಯವನ್ನು ಅವರಿಗೆ ಮನೋಹರಗೊಳಿಸಿ ತೋರಿಸಿದ್ದರಿಂದ ಅವರು ಪಥಭ್ರಷ್ಟರಾದರು. ಎಲ್ಲಾ ಗತ ಸಮುದಾಯಗಳೊಂದಿಗೂ ಶೈತಾನನ ಕಾರ್ಯತಂತ್ರ ಇದುವೇ ಆಗಿತ್ತು ಎಂದು ಅಲ್ಲಾಹು ಕುರ್‌ಆನ್‌ನಲ್ಲಿ ಬೋಧಿಸುತ್ತಾನೆ.

"ಅಲ್ಲಾಹನಾಣೆ, ತಮಗಿಂತ ಮುಂಚೆ ಹಲವು ಸಮುದಾಯಗಳಿಗೆ ನಾವು
ದೂತರನ್ನು ಕಳುಹಿಸಿದ್ದೇವೆ. ಆದರೆ ಶೈತಾನನು ಅವರಿಗೆ ಅವರ
(ದುಷ್ಟ)ಕರ್ಮಗಳನ್ನು ಮನೋಹರಗೊಳಿಸಿ ತೋರಿಸಿದ್ದನು. ಹೀಗೆ ಅವನು
(ಶೈತಾನ್) ಇಂದು ಅವರ ಮಿತ್ರನಾಗಿದ್ದಾನೆ.
ಅವರಿಗಾದರೋ ವೇದನಾಜನಕ ಶಿಕ್ಷೆಯಿದೆ."
(ಸೂರ ಅನ್ನಹ್ಲ್: 63)

ಈ ಸೂಕ್ತವನ್ನು ವ್ಯಾಖ್ಯಾನಿಸುತ್ತಾ ಇಮಾಮ್ ಇಬ್ನು ಕಸೀರ್ ತನ್ನ ತಫ್ಸೀರ್‌ನಲ್ಲಿ ಈ ರೀತಿ ಬರೆಯುತ್ತಾರೆ, "ಈ ರೀತಿ ಅವನು (ಶೈತಾನ್) ಇಂದು ಅವರ (ವಲಿ) ಮಿತ್ರನಾಗಿದ್ದಾನೆ." ಅಂದರೆ ವೇದಾನಾಜನಕ ಶಿಕ್ಷೆಯಿಂದಾಗಿ ಅವರು ಕಷ್ಟವನ್ನು ಅನುಭವಿಸುವ ವೇಳೆ ಶೈತಾನನು ಅವರ ಒಬ್ಬನೇ ಒಬ್ಬ ಸಹಾಯಕನಾಗಿದ್ದೂ ಅವರನ್ನು ರಕ್ಷಿಸಲಾರನು, ಅವರು ಸಹಾಯಕ್ಕಾಗಿ ಮೊರೆಯಿಡುವಾಗ ಅವರ ಸಹಾಯಕ್ಕೆ ಯಾರೊಬ್ಬರೂ ಇರಲಾರರು ಮತ್ತು ಅವರಿಗೆ ಅಲ್ಲಿ ವೇದನಾಜನಕ ಶಿಕ್ಷೆಯಿದೆ."

ಈ ತಂತ್ರಗಳ ಮೂಲಕ ಶೈತಾನನು ಅಲ್ಲಾಹು ನಿಷಿದ್ಧಗೊಳಿಸಿದ್ದನ್ನು ಸ್ವತಹ ನ್ಯಾಯ ಸಮ್ಮತಗೊಳಿಸಿಕೊಳ್ಳುವಂತೆ ಮತ್ತು ಸ್ವಯಂ ತಪ್ಪುದಾರಿಯನ್ನು ಆರಿಸಿಕೊಳ್ಳುವಂತೆ ಮಾನವ ರಾಶಿಯನ್ನು ಮರುಳುಗೊಳಿಸುತ್ತಾನೆ. ಯಹೂದಿಗಳ ಪೈಕಿಯಿದ್ದ 'ಸ್ಸಬ್ತ್' ಜನಾಂಗದವರ ಕುರಿತಾದ ಕುತೂಹಲಕರ ಕಥನವೊಂದನ್ನು ಕುರ್‌ಆನ್ ನಮ್ಮ ಮುಂದೆ ಉಲ್ಲೇಖಿಸುತ್ತದೆ. ಒಂದು ಪರೀಕ್ಷೆಯೆಂಬಂತೆ ಸ್ಸಬ್ತ್‌ನಂದು (ಶನಿವಾರ) ಮೀನುಗಾರಿಕೆ ನಡೆಸುವುದನ್ನು ಅಲ್ಲಾಹು ಅವರಿಗೆ ನಿಷಿದ್ಧಗೊಳಿಸಿದ್ದನು.

"(ಓ ಪ್ರವಾದಿಯವರೇ) ಕಡಲ ತೀರದಲ್ಲಿರುವ ಆ ನಾಡಿನವರ ಕುರಿತು ನೀವು ಅವರೊಂದಿಗೆ ಕೇಳಿ ನೋಡಿರಿ, ಸ್ಸಬ್ತ್ (ಶನಿವಾರ) ದಿನದ ಆಚರಣೆಯಲ್ಲಿ ಅವರು ಅತಿಕ್ರಮವನ್ನು ತೋರಿಸಿದ ಸಂದರ್ಭದ ಕುರಿತು. ಅವರ ಸಬ್ತ್‌ನಂದು ಅವರಿಗೆ ಬೇಕಾಗಿದ್ದ ಮೀನುಗಳು ಜಲದ ಮೇಲೆ ತಲೆ ಕಾಣಿಸುತ್ತಾ ಅವರತ್ತ ಬರುತ್ತಿದ್ದವು. ಅವರಿಗೆ ಸಬ್ತ್ ಆಚರಿಸಲಿಲ್ಲದ ದಿವಸಗಳಲ್ಲಿ (ಬಾಕಿ ದಿವಸಗಳಲ್ಲಿ) ಅವುಗಳು (ಮೀನುಗಳು) ಅವರತ್ತ ಬಾರದ ಸಂದರ್ಭ. ಅವರು ಧಿಕ್ಕಾರವನ್ನು ತೋರಿದ ಫಲವಾಗಿ ಈ ರೀತಿ ನಾವು ಅವರನ್ನು ಪರೀಕ್ಷೆಗೊಳಪಡಿಸಿದ್ದೆವು" (ಸೂರ ಅಲ್-ಅಅ್‌ರಾಫ್:163)

ಹೀಗೆ 'ಸ್ಸಬ್ತ್'ನ ಮಹತ್ತ್ವದಿಂದ (ಆಚರಣೆಯಿಂದ) ತಪ್ಪಿಸಿಕೊಳ್ಳಲು ಅವರು ಕಾಪಟ್ಯತೆಯಿಂದ ಕೂಡಿದ ತಂತ್ರಗಳನ್ನು ಹೆಣೆಯಲು ಪ್ರಾರಂಭಿಸಿದರು. ಸಬ್ತ್‌ಗಿಂತ ಮುಂಚೆಯೇ (ಶುಕ್ರವಾರದಂದು) ಅವರು ಹಗ್ಗ ಮತ್ತು ಬಲೆಗಳನ್ನು ಬೀಸಿಟ್ಟು ಕೃತಕ ತೊಟ್ಟಿಗಳನ್ನು ಮೀನುಗಾರಿಕೆಯ ಉದ್ದೇಶದಿಂದ ಸಮುದ್ರದಲ್ಲಿ ನಿರ್ಮಿಸಿಟ್ಟರು. ವಾಡಿಕೆಯಂತೆ ಶನಿವಾರದಂದು ಹೇರಳವಾಗಿ ಬಂದ ಮೀನುಗಳು ಇವರು ಈಗಾಗಲೇ ಬೀಸಿಟ್ಟದ್ದ ಹಗ್ಗ ಹಾಗೂ ಬಲೆಗಳೊಳಗೆ ಬಿದ್ದವು. ಶನಿವಾರ ಪೂರ್ತಿ ಈ ಬಲೆಗಳೊಳಗೆ ಬಿದ್ದುಕೊಂಡಿದ್ದ ಮೀನುಗಳನ್ನು ಸ್ಸಬ್ತ್ ಆಚರಣೆಯ ವೇಳೆಯು ಅಂತ್ಯವಾಗುತ್ತಲೇ ಯಹೂದಿಗಳು ಸಂಗ್ರಹಿಸಿಕೊಂಡು ಹೋಗುತ್ತಿದ್ದರು. ಇಂತಹುದೇ ಅವಿಧೇಯತೆಯಲ್ಲಿ ತೊಡಗಿದ್ದ ರಾತ್ರಿಯೊಂದರಲ್ಲಿ ಅಲ್ಲಾಹು ಅವರನ್ನು ಪ್ರಾಣಿಗಳ ಪೈಕಿ ರೂಪ ಸಾದೃಶ್ಯದಲ್ಲಿ ಮನುಷ್ಯರಿಗೆ ಹತ್ತಿರವಿರುವಂತಹ ಕೋತಿಗಳನ್ನಾಗಿ ಮಾರ್ಪಡಿಸಿಬಿಟ್ಟನು. (ಅವರು ತೋರಿಸಿದ ಕಾಪಟ್ಯದ ಫಲವಾಗಿ) ಅವರ ದುಷ್ಕೃತ್ಯ ಹಾಗೂ ಕಪಟತೆಗಳು ಬಾಹ್ಯರೂಪಕ್ಕೆ ನ್ಯಾಯ ಸಮ್ಮತವಾಗಿ ಗೋಚರಿಸಿದರೂ ವಾಸ್ತವದಲ್ಲಿ ಅವರು ಅಧರ್ಮಿಗಳಾಗಿದ್ದರು. ಈ ಕಾರಣಕ್ಕಾಗಿಯೇ ಅವರು ತಮ್ಮ ಅಪರಾಧಕ್ಕೆ ಅನುರೂಪವಾಗಿಯೇ ಅವರು ಶಿಕ್ಷಿಸಲ್ಪಟ್ಟರು.

ಅಬೂಹುರೈರಾರಿಂದ  ಇಮಾಮ್ ಅಬೂ ಅಬ್ದುಲ್ಲಾಹ್ ಬಿನ್ ಬತ್ತಾ ವರದಿ ಮಾಡಿರುತ್ತಾರೆ. ಪ್ರವಾದಿﷺ ಹೇಳಿದರು, "ಕೀಳ್ತರದ ವಂಚನಾಯುಕ್ತ ಉಪಾಯಗಳನ್ನು ಹೂಡುವುದರ ಮೂಲಕ ಯಹೂದಿಗಳು ಎಸಗಿದಂತಹ ತಪ್ಪನ್ನು ನೀವು ಎಸಗಬೇಡಿ. ಅವರು ಅಲ್ಲಾಹು ನಿಷೇಧಿಸಿದ್ದನ್ನು ಧರ್ಮ ಸಮ್ಮತಗೊಳಿಸಿಕೊಂಡರು."(ಅಲ್ಲಾಹನ ನಿರೋಧವನ್ನು ಉಲ್ಲಂಘಿಸಿದರು) (ತಫ್ಸೀರ್ ಇಬ್ನ್ ಕಸೀರ್ ನೋಡಿ)

ಇಮಾಮ್ ಇಬ್ನುಲ್‌ಖಯ್ಯಿಮ್(ರಹಿಮಹುಲ್ಲಾಹ್) ಬರೆಯುತ್ತಾರೆ, 'ಆತನಿಂದ (ಶೈತಾನನಿಂದ) ಆತನ ಅನುಯಾಯಿಗಳು ನಿಷಿದ್ಧ ಕಾರ್ಯಗಳನ್ನು (ಹರಾಮನ್ನು) ಜನಾಕರ್ಷಕವಾಗಿ ತೋರುವ ಹೆಸರಿನಿಂದ ಕರೆಯುವ ರೀತಿಯನ್ನು ಕಲಿತುಕೊಂಡರು. ಈ ಮೂಲಕ ಅವರು ಮದಿರೆಯನ್ನು 'ಆನಂದ ಜನನಿ' ಎಂದೂ ಮಾದಕ ಪದಾರ್ಥಗಳನ್ನು 'ಹರ್ಷದ ತುಣುಕು' ಎಂದೂ ಮತ್ತು ರಿಬಾವನ್ನು (ಬಡ್ಡಿ) 'ವ್ಯಾಪಾರ ವಹಿವಾಟು' (**Business dealing**) ಎಂದೂ ಕರೆದರು.' (ವಬಿಲ್‌ಅಸಯ್ಯಿಬ್‌ನಲ್ಲಿ ಉಲ್ಲೇಖಿತ) ಪ್ರವಾದಿವರ್ಯﷺ ಹೇಳಿದರು, "ನನ್ನ ಸಮುದಾಯದಲ್ಲಿರುವ ವಿಭಾಗವೊಂದು ಅಮಲು ಪದಾರ್ಥವನ್ನು ನ್ಯಾಯ ಸಮ್ಮತಗೊಳಿಸಲಿದ್ದಾರೆ. ಅವರು ಸ್ವಯಂ ಅದಕ್ಕೊಂದು ನಾಮಕರಣವನ್ನು ಮಾಡುವ ಮೂಲಕ." ಮತ್ತೊಂದು ವರದಿಯಲ್ಲಿ ಈ ರೀತಿಯಿದೆ. "ಅವರು ಅದರ ಯೋಗ್ಯ ಹೆಸರಿಗೆ ಹೊರತಾದ ಅನ್ಯ ರೀತಿಯಲ್ಲಿ ನಾಮಕರಣ ಮಾಡುವರು." (ನೋಡಿ, ಇಬ್ನು ಮಾಜ 3385 ಮತ್ತು ಮುಸ್ನದ್ ಅಹ್ಮದ್ 4/237 ಹಾಗೂ 5/318)

ಇಂದು ಗಾಯನ, ಸಂಗೀತ, ನೃತ್ಯ, ನಟನೆ, ಶಿಲ್ಪ ರಚನೆ ಮುಂತಾದವುಗಳನ್ನು ಕಲೆ (**Art**) ಎಂದು ಕರೆಯಲಾಗುತ್ತದೆ. ಆದರೆ ಈ ರೀತಿಯ ಕುಟಿಲ ಮತ್ತು ವಕ್ರ ವರ್ತನೆಗಳ ಮೂಲಕ ವ್ಯಕ್ತಿ ಸ್ವಯಂ ತನ್ನನ್ನು ತಾನೇ ಮೂರ್ಖಗೊಳಿಸುತ್ತಿದ್ದಾನೆಯೇ ಹೊರತು ಯಾರೊಬ್ಬನಿಗೂ ಸರ್ವಜ್ಞಾನಿಯಾದ ಅಲ್ಲಾಹನನ್ನು ವಂಚಿಸಲು ಸಾಧ್ಯವಿಲ್ಲ.

# ಶ್ಯೈತಾನನು ಸ್ತ್ರೀ, ಪುರುಷರಿಬ್ಬರ ಮಧ್ಯೆ ಪಾಪ ಕೃತ್ಯವನ್ನು ಮನೋಹರಗೊಳಿಸಿ ತೋರಿಸಬಲ್ಲನು.

ಅಲ್ಲಾಹನ ಪ್ರವಾದಿ ﷺ ಹೇಳಿದರು, "ಪುರುಷನು ಸ್ತ್ರೀಗಿಂತ ಹೆಚ್ಚಾಗಿ ಬೇರ್‍ಯಾವುದರಿಂದಲೂ ಪ್ರಲೋಭನೆಗೊಳಪಟ್ಟಿಲ್ಲ." (ಮುತ್ತಫಕುನ್ ಅಲೈಹಿ) ಈ ಕಾರಣಕ್ಕಾಗಿ ಸ್ತ್ರೀಯರು ತಮ್ಮ ಶರೀರವನ್ನು ಮುಚ್ಚಿಕೊಳ್ಳುವಂತೆ ಆದೇಶಿಸಲ್ಪಟ್ಟರು ಮತ್ತು ಪುರುಷರಿಗೆ ತಮ್ಮ ದೃಷ್ಟಿಯನ್ನು ಕೆಳಗಿಡುವಂತೆ ಆದೇಶ ನೀಡಲ್ಪಟ್ಟಿತು. ಪ್ರವಾದಿ ﷺ ಪುರುಷನೊಬ್ಬನು ಮಹ್ರಮ್ (ವಿವಾಹ ನಿಷಿದ್ಧ) ಅಲ್ಲದ ಸ್ತ್ರೀಯೊಬ್ಬಳೊಂದಿಗೆ ಒಬ್ಬಂಟಿಯಾಗಿರುವುದನ್ನು ನಿರೋಧಿಸಿದರು ಮತ್ತು ಹೇಳಿದರು, "ಶ್ಯೈತಾನನು ಮೂರನೆಯವನಾಗಿರದ ಹೊರತು ಯಾವೊಬ್ಬ ಪುರುಷನೂ ಮಹ್ರಮ್ ಅಲ್ಲದ ಸ್ತ್ರೀಯೊಬ್ಬಳೊಂದಿಗೆ ಒಂಟಿಯಾಗಿರಲಾರ." ಈ ಮೂಲಕ ಶ್ಯೈತಾನನು ಅವರಿಬ್ಬರನ್ನು ಪಾಪ ಕೃತ್ಯದತ್ತ ಆಕರ್ಷಿತಗೊಳಿಸುವ ಸಾಧ್ಯತೆಯಿದೆಯೆಂಬುವುದು ಇದರರ್ಥವಾಗಿದೆ. ಶ್ಯೈತಾನನ್ನು ನಿಗ್ರಹಿಸುವ ಪ್ರಯತ್ನ ಮಾಡಬೇಕಾಗಿರುವುದು ನಮಗೆ ಅತ್ಯಗತ್ಯವಾಗಿದೆ ಮತ್ತು ನಾವು ಆತನ ಕಪಟತೆ ಹಾಗೂ ತಂತ್ರಗಳಿಗೆ ಬಲಿಯಾಗದೆ ಅಲ್ಲಾಹನ ಪ್ರವಾದಿಯವರﷺ ಮಾರ್ಗರೇಖೆಗೆ ಅನುರೂಪವಾಗಿ ಪ್ರವರ್ತಿಸಬೇಕು. ಅವರುﷺ ಹೇಳಿದರು, "ಸ್ತ್ರೀಯು ಶ್ಯೈತಾನನ ರೂಪದಲ್ಲಿ ಬರುತ್ತಾಳೆ ಹಾಗೂ ಶ್ಯೈತಾನನ ರೂಪದಲ್ಲಿ ಹೋಗುತ್ತಾಳೆ. ನಿಮ್ಮ ಪೈಕಿ ಯಾರಾದರೂ ಸ್ತ್ರೀಯೊಬ್ಬಳನ್ನು ನೋಡಿ ಆಕರ್ಷಿತರಾದರೆ ಅವನು ತನ್ನ ಕುಟುಂಬದತ್ತ (ಪತ್ನಿಯತ್ತ) ಮರಳಲಿ ಮತ್ತು ಅದು ಅವನಲ್ಲಿರುವುದನ್ನು ತಡೆಯುತ್ತದೆ."(ಸಹೀಹ್ ಮುಸ್ಲಿಂ)

# ಗಾಯನ ಹಾಗೂ ಸಂಗೀತಗಳ ಮೂಲಕ ಶೈತಾನನು ಜನರ ಹೃದಯ ಮತ್ತು ಆತ್ಮಗಳನ್ನು ಭ್ರಷ್ಟಗೊಳಿಸುತ್ತಾನೆ.

**'ಇಗಾತತ್ ಅಲ್ಲಹ್‌ಫಾನ್'ನಲ್ಲಿ (1/242) ಇಮಾಮ್ ಇಬ್ನುಲ್ ಖಯ್ಯಿಮ್ (ರಹಿಮಹುಲ್ಲಾಹ್) ಬರೆಯುತ್ತಾರೆ, "ಜ್ಞಾನ, ವಿವೇಕ ಹಾಗೂ ಧರ್ಮಬದ್ಧತೆಯಲ್ಲಿ ದುರ್ಬಲರಾದವರನ್ನು ತನ್ನ ಕುಯುಕ್ತಿಯ ಪ್ರಯೋಗಕ್ಕೆ ಒಳಪಡಿಸಬಯಸುವುದು ಅಲ್ಲಾಹನ ಶತ್ರುವಿನ (ಶೈತಾನನ) ಹಲವಾರು ತಂತ್ರ ಹಾಗೂ ಹೂಟಗಳ ಪೈಕಿಯಲ್ಲೊಂದಾಗಿದೆ. ಅವನು ಅಜ್ಞಾನಿಗಳನ್ನು ಚಪ್ಪಾಳೆ, ನಿಷೇಧಿತ ಸಂಗೀತೋಪಕರಣಗಳನ್ನು ಉಪಯೋಗಿಸಿ ಗಾಯನ ಮುಂತಾದವುಗಳ ಮೂಲಕ ತನ್ನ ಬಲೆಯಲ್ಲಿ ಕೆಡವುತ್ತಾನೆ. ಇವುಗಳೆಲ್ಲವೂ ಜನರ ಹೃದಯಗಳನ್ನು ಅಲ್ಲಾಹನ ಗ್ರಂಥದಿಂದ ತಡೆಯುತ್ತದೆ ಮತ್ತು ಅವರನ್ನು ದುರಾಚಾರ ಹಾಗೂ ಪಾಪಗಳ ಉಪಾಸಕರನ್ನಾಗಿಯೂ ಮಾಡುತ್ತದೆ. ಇದು (ಸಂಗೀತ) ಶೈತಾನನ 'ಕುರ್‌ಆನ್' (ವಾಣಿ) ಆಗಿದೆ ಮತ್ತು ಪರಮ ದಯಾಳುವೂ, ಕರುಣಾಮಯಿಯೂ ಆದ ಅಲ್ಲಾಹನಿಂದ ಜನರನ್ನು ತಡೆಯುವ ಬಲಿಷ್ಠ ತಡೆಗೋಡೆಯಾಗಿದೆ. ಮಾತ್ರವಲ್ಲ ಇದು ಅವರನ್ನು ವಿಕೃತ ಲೈಂಗಿಕತೆ ಹಾಗೂ ವ್ಯಭಿಚಾರ (ಹಾದರ)ದತ್ತ ಮುನ್ನಡೆಸುತ್ತದೆ. ಇದರ ಮೂಲಕ ಶೈತಾನನು ಅಸತ್ಯವನ್ನು ಅನುಸರಿಸುವಂತಹ ಜನರ ಹೃದಯಗಳನ್ನು ಸ್ವಾಧೀನಪಡಿಸಿಕೊಂಡು ಅವರಿಗೆ ತಮ್ಮ ದುಷ್ಕರ್ಮಗಳನ್ನು ಆಕರ್ಷಕವಾಗಿ ತೋರಿಸಿಕೊಟ್ಟು ಅವರನ್ನು ವಂಚಿಸುತ್ತಾನೆ. ಇವು (ಸಂಗೀತ) ಮನಸ್ಸಿಗೆ ಆಹ್ಲಾದಕರವಾಗಿದೆ, ಇದರ ಮೂಲಕ ಹೃದಯಕ್ಕೆ ಶಾಂತಿ, ಸಮಾಧಾನಗಳು ಲಭಿಸುತ್ತವೆಯೆಂದು ಅವನು (ಶೈತಾನ್) ಬಾಲಿಶವಾದ ತರ್ಕಗಳನ್ನು ಮುಂದಿಡುತ್ತಾ ಅವರನ್ನು ಉತ್ತೇಜಿಸುತ್ತಾನೆ. ಹೀಗೆ ಅವರು ಆತನ ಉಪಾಯಕ್ಕೆ ಬಲಿಬಿದ್ದು ಸಂಗೀತ ಹಾಗೂ ಗಾಯನಗಳಿಗಾಗಿ ಅಲ್ಲಾಹನ ಗ್ರಂಥವನ್ನು ಪರಿತ್ಯಜಿಸುತ್ತಾರೆ.........**

# ಜನರು ಧರ್ಮದಲ್ಲಿ ನಿರ್ಲಕ್ಷ್ಯ ಅಥವಾ ಅತಿರೇಕ ಎಸಗುವಂತೆ ಮಾಡಲು ಶೈತಾನನು ಪ್ರಯತ್ನಿಸುತ್ತಾನೆ.

ಇಮಾಮ್ ಇಬ್ನುಲ್ ಖಯ್ಯಿಮ್ (ರಹಿಮಹುಲ್ಲಾಹ್) ಬರೆಯುತ್ತಾರೆ. "ಅಲ್ಲಾಹನು ಯಾವುದೇ ನಿಯಮ, ಕಟ್ಟಳೆಗಳನ್ನುಂಟು ಮಾಡಿಲ್ಲ. ಶೈತಾನನು (ಕರ್ಮವನ್ನು ನಿಷ್ಫಲಗೊಳಿಸುವ ನಿಟ್ಟಿನಲ್ಲಿ) ಅದರೊಂದಿಗೆ (ಆ ನಿಯಮಗಳೊಂದಿಗೆ) ವ್ಯವಹರಿಸುವ ಕೆಲವು ವಿಧಾನಗಳ ಹೊರತು. ಒಂದೋ ಜನರು ಧರ್ಮಶ್ರದ್ಧೆಯಲ್ಲಿ ಅತ್ಯಲ್ಪ ಒಲವು ಹೊಂದಿ ಕೊನೆಗೆ ತೀರಾ ನಿರ್ಲಕ್ಷ್ಯರಾಗುವುದು ಅಥವಾ ಅತಿಯಾದ (ತೀವ್ರ) ವರ್ತನೆಯಿಂದಾಗಿ (ಧಾರ್ಮಿಕ ವಿಷಯಗಳಲ್ಲಿ) ಅತಿರೇಕಿಯಾಗಿ ಮಾರ್ಪಾಡಾಗುವುದು. ಜನರನ್ನು ಇವೆರಡರಲ್ಲಿ ಒಂದರತ್ತ ಪ್ರೇರೇಪಿಸಲು ಅವನು ಶ್ರಮಿಸುತ್ತಾನೆ. ವ್ಯಕ್ತಿಯೊಬ್ಬ ಇವೆರಡರಲ್ಲಿ ಯಾವ ಪ್ರಮಾದವನ್ನು ಎಸಗುತ್ತಾನೆನ್ನುವುದು ಆತನಿಗೊಂದು ವಿಷಯವಲ್ಲ. ಪ್ರಾಯಶಃ ಶೈತಾನನಿಗೆ ವ್ಯಕಿಯೊಬ್ಬನು ಆಲಸ್ಯ, ನಿರ್ಲಕ್ಷ್ಯತೆಯನ್ನು ಹೊಂದಿದವನಾಗಿದ್ದು ಮತ್ತು (ಧಾರ್ಮಿಕ ಕಾರ್ಯಗಳಲ್ಲಿ) ರಿಯಾಯತಿಯನ್ನು ಅಪೇಕ್ಷಿಸುವವನಾಗಿ ಕಂಡುಬಂದಲ್ಲಿ ಮುಂದೆ ಆತನನ್ನು ಅದೇ ದಿಕ್ಕಿನತ್ತ ಮುಂದುವರಿಸಲು ಆತ ಕಾರ್ಯೋನ್ಮುಖನಾಗುತ್ತಾನೆ. ಆತನನ್ನು ಕರ್ಮಾನುಷ್ಠಾನಗಳಿಂದ ತಡೆದು ಹಿಂದಕ್ಕೆಳೆಯುತ್ತಾನೆ. ಆತ (ಧರ್ಮದಲ್ಲಿ) ಆಲಸ್ಯ, ಉದಾಸೀನತೆ ಹಾಗೂ ನಿರ್ಲಕ್ಷ್ಯ ಹೊಂದುವಂತೆ ಮಾಡುತ್ತಾನೆ ಮತ್ತು ಧಾರ್ಮಿಕ ವಿಷಯಗಳಲ್ಲಿ ಪರ್ಯಾಯ ವ್ಯಾಖ್ಯಾನವನ್ನು ಹುಡುಕಲು ಮತ್ತು ಅಲ್ಲಾಹನಿಂದ (ತನ್ನ ಅಲಕ್ಷ್ಯಕ್ಕಾಗಿ) ಕ್ಷಮೆಯನ್ನು ನಿರೀಕ್ಷಿಸಲು ಆತನನ್ನು ಪ್ರೋತ್ಸಾಹಿಸುತ್ತಾನೆ. ವ್ಯಕ್ತಿಯೊಬ್ಬ ಆಜ್ಞಾಪಿಸಲ್ಪಟ್ಟ ಕರ್ಮಗಳನ್ನೆಲ್ಲ ತೊರೆದು ಬಿಡುವವರೆಗೂ ಇದು ಮುಂದುವರಿಯುತ್ತದೆ."

ಮನುಷ್ಯರನ್ನು ಪಥಭ್ರಷ್ಟಗೊಳಿಸಬೇಕೆನ್ನುವ ತನ್ನ ಗುರಿಯನ್ನು ಸಾಧಿಸುವತ್ತ ಶೈತಾನನು ಉಪಯೋಗಿಸುವ ಮಾರ್ಗೋಪಾಯಗಳಲ್ಲೊಂದನ್ನು ಇಮಾಮ್ ಬುಖಾರಿ (ರಹಿಮಹುಲ್ಲಾಹ್) ತನ್ನ ಸಹೀಹ್‌ನಲ್ಲಿ ದಾಖಲಿಸಿದ್ದಾರೆ.

ಅಬೂ ಹುರೈರಾರಿಂದﷺ ವರದಿ. ಅಲ್ಲಾಹನ ಸಂದೇಶವಾಹಕರುﷺ ಹೇಳಿದರು, "ನಿಮ್ಮಲ್ಲಿ ಯಾರಾದರೂ ನಿದ್ರಿಸಲನುವಾದಾಗ ಶೈತಾನನು ಅವನ ಶಿರಸ್ಸಿನ ಹಿಂದೆ ಮೂರು ಗಂಟುಗಳನ್ನು ಬಿಗಿಯುತ್ತಾನೆ. ಪ್ರತಿಯೊಂದು ಗಂಟನ್ನು ಬಿಗಿಯುವಾಗಲೂ ಆತ ಈ ರೀತಿ ಪಠಿಸಿ ಊದುತ್ತಾನೆ. 'ರಾತ್ರಿಯೂ ದೀರ್ಘವಾಗಿದೆ, ಆದುದರಿಂದ ನೀನು ಸುಖವಾಗಿ ನಿದ್ರಿಸು.' ಒಬ್ಬನು ಎಚ್ಚರಗೊಂಡು ಅಲ್ಲಾಹನನ್ನು ನೆನಪಿಸಿದನೆಂದಾದರೆ ಒಂದನೆಯ ಗಂಟು ಬಿಚ್ಚಿಕೊಳ್ಳುತ್ತದೆಹಾಗೂ ಅವನು ಅಂಗ ಶುದ್ಧಿಯನ್ನು ನಿರ್ವಹಿಸಿದರೆ ಎರಡನೆಯ ಗಂಟು ಮುರಿದು ಬೀಳುತ್ತದೆ ಮತ್ತು ಅವನು ನಮಾಝುನ್ನು ನಿರ್ವಹಿಸಿದರೆ ಮೂರನೆಯ ಗಂಟು ಕೂಡ ಮುರಿದು ಬಿದ್ದು ಆತ ಉತ್ಸಾಹ ಭರಿತನಾಗಿ ಉತ್ತಮವಾದ ಹೃದಯದೊಂದಿಗೆ ಪ್ರಾತಃಕಾಲದಲ್ಲಿ ಎದ್ದೇಳುತ್ತಾನೆ. ಹಾಗಾಗದಿದ್ದಲ್ಲಿ ಆತ ಆಲಸ್ಯ ಮತ್ತು ಕೆಡುಕಿನಿಂದ ತುಂಬಿದ ಹೃದಯದೊಂದಿಗೆ (ಪ್ರಾತಃಕಾಲದಲ್ಲಿ) ಎದ್ದೇಳುವನು." (ಸಹೀಹ್ ಅಲ್ ಬುಖಾರಿ 21/243)

ಅಬೂ ಹುರೈರಾರವರಿಂದﷺ ವರದಿ, ಪ್ರವಾದಿ ﷺ ಹೇಳಿದರು,<br>"ನಿಮ್ಮಲ್ಲಿ ಯಾರಾದರೂ ನಿದ್ರೆಯಿಂದ ಎಚ್ಚೆತ್ತು ನಂತರ<br>ಅಂಗಶುದ್ಧಿ ನಿರ್ವಹಿಸುವನೆಂದಾದರೆ ಆತ ತನ್ನ ಮೂಗಿನೊಳಕ್ಕೆ<br>ಮೂರು ಸಲ ನೀರನ್ನೆಳೆದು ಹೊರಗೆ ಬಿಡುವ ಮೂಲಕ ಶುದ್ದೀಕರಿಸಿಕೊಳ್ಳಲಿ.<br>ಏಕೆಂದರೆ ಶೈತಾನನು ಆತನ ಮೂಗಿನ ಮೇಲ್ಭಾಗದಲ್ಲಿ<br>ರಾತ್ರಿಯಿಡೀ ತಂಗಿರುವನು."<br>(ಸಹೀಹ್ ಅಲ್ ಬುಖಾರಿ)

ಶೈತಾನನು ಯಾವ ರೀತಿ ಒಬ್ಬನನ್ನು ಆಲಸ್ಯತನದತ್ತ (ಕಾಲಹರಣದತ್ತ) ಪ್ರೋತ್ಸಾಹಿಸುತ್ತಾನೆ ಮತ್ತು ಯಾವ ರೀತಿ ಆತನ ಕಿವಿಯೂದಿ ಪಶ್ಚಾತ್ತಾಪವನ್ನು ಮುಂದೂಡುವಂತೆ ಮಾಡುತ್ತಾನೆ ಎಂಬುದನ್ನು ವಿವರಿಸುತ್ತಾ ಇಬ್ನು ಜೌಝಿ (ರಹಿಮಹುಲ್ಲಾಹ್) ಹೇಳುತ್ತಾರೆ, ".....ಆತನು (ಶೈತಾನನು) ಪಾಪಿಯೊಬ್ಬನು ಪಶ್ಚಾತ್ತಾಪಪಡುವುದನ್ನು ಮುಂದೂಡುವಂತೆ (ವಿಳಂಬಿಸುವಂತೆ) ಪ್ರೇರೇಪಿಸಿ ಆತನನ್ನು ಆತನ ಇಚ್ಛೆ, ಆಕಾಂಕ್ಷೆಗಳಲ್ಲಿ ಮನಃಪೂರ್ತಿ ತಲ್ಲೀನನಾಗುವಂತೆ ಮಾಡುತ್ತಾನೆ. ಒಂದಿಲ್ಲೊಂದು ದಿನ ಇದರ ಕುರಿತಾಗಿ ಪಶ್ಚಾತ್ತಾಪಪಟ್ಟು ಮರಳಬಹುದು ಎಂದು ಆತನ ಕಿವಿಯೂದುತ್ತಾನೆ.........ಒಂದು ವೇಳೆ ಫಕೀಹನೊಬ್ಬನು ಕೆಲವೊಂದು ತನ್ನ ತಪ್ಪುಗಳನ್ನು ತಿದ್ದಲು ಉದ್ದೇಶಿಸಿದರೂ ಶೈತಾನನು ಇನ್ನೂ ಸ್ವಲ್ಪ ಕಾಲ ಕಳೆಯಲಿ ಎಂದು ಆತನನ್ನು ಪುಸಲಾಯಿಸುತ್ತಾನೆ. ಅದೇ ರೀತಿ ವಿಶ್ವಾಸಿಯೊಬ್ಬ ರಾತ್ರಿಯಲ್ಲಿ ಅಥವಾ ಬೆಳಗ್ಗಿನ ಜಾವ ಆರಾಧನೆಯ ಉದ್ದೇಶದೊಂದಿಗೆ ಎದ್ದೇಳ ಬಯಸಿದರೆ ಆತ (ಶೈತಾನ್) 'ಇನ್ನೂ ಬಹಳಷ್ಟು ಸಮಯ ಬಾಕಿಯಿದೆ' ಎಂದು ಆತನಲ್ಲಿ ಹೇಳುತ್ತಾನೆ. ಈ ರೀತಿ ಜನರು

ಆಲಸಿಗಳಾಗಿ ಉತ್ತಮ ಕಾರ್ಯಗಳನ್ನು ಮುಂದೂಡುವಂತೆ ಮಾಡಲು ಆತ ಸದಾ ಕಾರ್ಯಮಗ್ನನಾಗಿರುತ್ತಾನೆ ಮತ್ತು 'ನಿಮ್ಮಲ್ಲಿ ಬೇಕಾದಷ್ಟು ಸಮಯಾವಕಾಶವಿದೆಯೆಂದು' ಹೇಳುತ್ತಾ ಅತಿಯಾದ ನಿರೀಕ್ಷೆಯನ್ನು ಹುಟ್ಟಿಸಿ ಅವರನ್ನು ತಪ್ಪು ದಾರಿಗೆಳೆಯುತ್ತಾನೆ."

ಸತ್ಕರ್ಮವನ್ನು ಮಾಡಲು ಉದ್ದೇಶಿಸುವವನು ತನ್ನ ಕರ್ಮಗಳನ್ನು ದೃಢ ಸಂಕಲ್ಪ ಹಾಗೂ ನಿರ್ಧಾರಗಳ ಮೂಲಕ ಕಾರ್ಯ ರೂಪಕ್ಕೆ ತರಬೇಕು. ದೃಢ ನಿರ್ಧಾರವೆಂದರೆ ಕಾಲಹರಣ ಮಾಡದಿರುವುದು ಅಥವಾ ಕಾರ್ಯಗಳನ್ನು ಮುಂದೂಡದೆ ಇರುವುದು. ಬೇಕಾದಷ್ಟು ಸಮಯಾವಕಾಶವಿದೆ ಎಂಬ ಭ್ರಮೆಯಲ್ಲಿ ಇರಲೇಬಾರದು. ಯಾಕೆಂದರೆ ಮುನ್ನೆಚ್ಚರಿಕೆಯು ಲಭಿಸಲ್ಪಟ್ಟ ಒಬ್ಬನು ಯಾವುದೇ ಖಾತ್ರಿಯಲ್ಲಿರಬಾರದು. ಒಮ್ಮೆ ನೀನು ಕಳೆದುಕೊಂಡದ್ದನ್ನು ಮರಳ ಪಡೆಯಲು ನಿನ್ನಿಂದ ಸಾಧ್ಯವಿಲ್ಲ.

**ಬೇಕಾದಷ್ಟು ಸಮಯಾವಕಾಶವಿದೆ ಎಂಬ ನಂಬಿಕೆ ಹಾಗೂ ಅತಿಯಾದ ನಿರೀಕ್ಷೆ ಎಲ್ಲಾ ರೀತಿಯ ನ್ಯೂನತೆ ಹಾಗೂ ಕೆಟ್ಟ ಪ್ರವೃತ್ತಿಯ ಹಿಂದಿರುವ ಪ್ರಮುಖ ಕಾರಣವಾಗಿದೆ.** ಏಕೆಂದರೆ ವ್ಯಕ್ತಿಯು ತನ್ನಲ್ಲಿರುವ ಕೆಡುಕನ್ನು ತ್ಯಜಿಸಿ ಒಳಿತಿನತ್ತ ಬದಲಾವಣೆಗೊಳ್ಳಬೇಕೆಂಬ ಯೋಚನೆಯಲ್ಲಿರುತ್ತಾನೆ ಆದರೆ ಕೊನೆಗೊಂದು ದಿನ ತಡವಾಗಿರುತ್ತದೆ. ಯಾವುದೇ ಸಂಶಯವಿಲ್ಲ, ಯಾರೊಬ್ಬನು ತನ್ನ ಮುಂದೆ ಪೂರ್ತಿ ದಿನವೊಂದಿದೆ ಎಂದು ಭಾವಿಸಿ ಕೊಳ್ಳುತ್ತಾನೆಯೋ ಆತನು ತನ್ನ ಸಮಯವನ್ನು ತೆಗೆದುಕೊಳ್ಳುತ್ತಾನೆ (ವ್ಯರ್ಥವಮಾಡುತ್ತಿದ್ದಾನೆ). ಯಾರೊಬ್ಬನು ತಾನು ಮುಂಜಾವಿನವರೆಗೂ ಇರಲಿದ್ದೇನೆ ಎಂದು ಭಾವಿಸಿಕೊಳ್ಳುತ್ತಾನೋ ಆತನು ರಾತ್ರಿವೇಳೆಯಲ್ಲಿ ಅತ್ಯಲ್ಪವಾದ ಸತ್ಕರ್ಮಗಳನ್ನು ಮಾತ್ರ ಮಾಡುತ್ತಾನೆ. ಆದರೆ ಮರಣವು ಆಸನ್ನವಾಗಿದೆಯೆಂದು ಭಾವಿಸುವವನು ಕಠಿಣ ತರದ ಪರಿಶ್ರಮದಲ್ಲಿ ಸ್ವಯಂ ತನ್ನನ್ನು ತೊಡಗಿಕೊಳ್ಳುತ್ತಾನೆ. (ತಲ್‌ಬೀಸ್ ಇಬ್ಲೀಸ್ ಪುಟ 458)

ವ್ಯಕ್ತಿಯೊಬ್ಬನನ್ನು ಅವನ ಧಾರ್ಮಿಕ ವಿಷಯಗಳಲ್ಲಿ ಅತಿವರ್ತನೆ (ಉತ್ಪ್ರೇಕ್ಷೆ)ಯತ್ತ ಶೈತಾನನು ಯಾವ ರೀತಿ ಪ್ರೇರೇಪಿಸುತ್ತಾನೆ ಎನ್ನುವುದನ್ನು ಇಬ್ನುಲ್ ಖಯ್ಯಿಮ್ (ರಹಿಮಹುಲ್ಲಾಹ್) ಮುಂದೆ ವಿವರಿಸುತ್ತಾರೆ, "...........ಇನ್ನು ಆತನಿಗೆ (ಧಾರ್ಮಿಕ ಕಾರ್ಯಗಳಲ್ಲಿ) ವ್ಯಕ್ತಿಯೊಬ್ಬನು ಮುಂಜಾಗ್ರತೆ, ಗಂಭೀರತೆ, ಉತ್ಸಾಹವುಳ್ಳವನಾಗಿ ಮತ್ತು ಅರ್ಹನಾಗಿ ಕಂಡುಬಂದರೆ ಆತನನ್ನು ಮುಂದಿನಿಂದ ನೇರವಾಗಿ ತನ್ನ ಬಲೆಗೆ ಬೀಳಿಸಿಕೊಳ್ಳುವುದರ ಕುರಿತು ಹತಾಶನಾಗುತ್ತಾನೆ. ಹಾಗಾಗಿ ಅವನು ಆ ವ್ಯಕ್ತಿಯನ್ನು (ಧಾರ್ಮಿಕ ವಿಷಯಗಳಲ್ಲಿ) ಮಿತಿಮೀರಿ ಪ್ರಯತ್ನಿಸುವಂತೆ ಹುರಿದುಂಬಿಸುತ್ತಾನೆ. 'ನಾನು ಮಾಡುತ್ತಿರುವುದು ಅಲ್ಪವಾಗಿದೆ, ಇನ್ನು ಹೆಚ್ಚಿನದ್ದು ಮಾಡಬೇಕಾಗಿದೆ ಮತ್ತು ಇನ್ನುಳಿದವರಿಗಿಂತ ಹೆಚ್ಚಾಗಿ ನಾನು ಪ್ರವೃತಿಸಬೇಕಾಗಿದೆ' ಎಂಬ ಮಹತ್ವಾಕಾಂಕ್ಷೆ ಆತನಲ್ಲಿ ಬೆಳೆಯುವಂತೆ ಮಾಡುತ್ತಾನೆ.

ಹೀಗಾಗಿ ಆತ (ಶೈತಾನ್) ನಿದ್ರಿಸಲು ತೆರಳಲು ಇಚ್ಛಿಸುವವರೊಂದಿಗೆ ನಿದ್ರಿಸಬೇಡಿರೆಂದೂ, ಉಪವಾಸ ತೊರೆಯಬಯಸುವವರಿಗೆ ಉಪವಾಸ ದೀರ್ಘಗೊಳಿಸಿರೆಂದೂ, ಆಯಾಸಗೊಂಡವರೊಂದಿಗೆ ಈಗ ದಣಿವಾರಿಸುವ ಸಮಯವಲ್ಲವೆಂದೂ ಕಿವಿಯೂದುತ್ತಾನೆ. ಇಂತಹವರ ಪೈಕಿಯಲ್ಲಿರುವವರು ಅಂಗ ಶುದ್ಧಿಯನ್ನು ಮಾಡುವಾಗ ಕೈ ಮತ್ತು ಮುಖವನ್ನು ಮೂರು ಸಲ ತೊಳೆಯುತ್ತಿದ್ದರೆ ಶೈತಾನನು ಮೂರು ಸಲ ಸಾಕಾಗದು ಏಳು ಸಲ ತೊಳೆಯಬೇಕೆಂಬ 'ವಸ್‌ವಸ'ವನ್ನು ಅವರಲ್ಲಿ ಹುಟ್ಟು ಹಾಕುತ್ತಾನೆ. ನಮಾಝ್ ನಿರ್ವಹಣೆಗಿಂತ ಮುಂಚೆ ಅಂಗಸ್ನಾನ ಮಾಡುವ ವ್ಯಕ್ತಿಯನ್ನು ವುದೂ ಸಾಕಾಗದು ಸ್ನಾನವೇ ಮಾಡಬೇಕೆಂಬಂತೆ ಪ್ರೇರೇಪಿಸುತ್ತಾನೆ. ನಮಾಜ್ ನಿರ್ವಹಿಸುವಾಗ ನಿಯ್ಯತ್‌ನ ಕುರಿತಾಗಿ ಸಂಶಯವನ್ನು ಹುಟ್ಟಿಸಿ ಪುನಃ ಪುನಃ ನಮಾಜ್‌ನಿಂದ ಕೈ ಬಿಡುವಂತೆ ಮಾಡುತ್ತಾನೆ. ಇದೇ ರೀತಿಯ ಬೇರೆ ಹಲವು ತರಹದ ಉತ್ಪ್ರೇಕ್ಷೆ ಹಾಗೂ ಅತಿ ವರ್ತನೆಯತ್ತ ವಿಶ್ವಾಸಿಗಳನ್ನು ದಾರಿಗೆಡಿಸುತ್ತಾನೆ ಮತ್ತು ಅತಿರೇಕವೆಸಗುವಂತೆ ಅವರನ್ನು ಪ್ರೇರೇಪಿಸಿ ಅವರು ನೇರಮಾರ್ಗದಿಂದ ಸರಿಯುವಂತೆ ಮಾಡುತ್ತಾನೆ. ಮೊದಲನೇ ವ್ಯಕ್ತಿಯನ್ನು (ಧಾರ್ಮಿಕ ಅಶ್ರದ್ಧೆಯುಳ್ಳವನನ್ನು) ಧರ್ಮದಲ್ಲಿ ಒಲವು ಹೊಂದದಂತೆ ತಡೆದು ಯಾವ ರೀತಿ ನೇರಮಾರ್ಗದಿಂದ ದೂರವಿಡುತ್ತಾನೋ ಅದೇ ರೀತಿಯಲ್ಲಿ ಇಲ್ಲಿಯೂ ಕೂಡ ಶೈತಾನನು ಅತಿರೇಕದ ತಂತ್ರವನ್ನು ಪ್ರಯೋಗಿಸುತ್ತಾನೆ. ಎರಡು ವಿಷಯಗಳಲ್ಲೂ ಶೈತಾನನ ಗುರಿ ಈ ಎರಡು ತರಹದ ವ್ಯಕ್ತಿಗಳನ್ನು ನೇರ ಮಾರ್ಗದಿಂದ ವ್ಯತಿಚಲಿಸುವಂತೆ ಮಾಡುವುದಾಗಿದೆ. ಒಬ್ಬನನ್ನು (ಧಾರ್ಮಿಕ ವಿಷಯಗಳ) ಹತ್ತಿರವೇ ಸುಳಿಯದಂತೆ ಮಾಡಿ ಅಲ್ಲಾಹನಿಂದ ತಡೆಯುವ ವಿಧಾನವನ್ನು ಅನುಸರಿಸಿದರೆ ಮತ್ತೊಬ್ಬನನ್ನು ಧರ್ಮದಲ್ಲಿ ತೀವ್ರ ಚಿಂತನೆಯತ್ತ ಪ್ರೇರೇಪಿಸಿ, ಅತಿರೇಕ ಮತ್ತು ತೀವ್ರವಾದಗಳಲ್ಲಿ ಬಹುದೂರ ಸಾಗುವಂತೆ ಮಾಡಿ ಲಕ್ಷ್ಯದಿಂದ ವಿಮುಖಗೊಳಿಸುತ್ತಾನೆ.

ಈ ರೀತಿ ಹೆಚ್ಚಿನ ಜನರೂ ಶೈತಾನನ ಪ್ರಲೋಭನೆಗೊಳಪಟ್ಟಿದ್ದಾರೆ. ಆಳವಾದ ಧಾರ್ಮಿಕ ಜ್ಞಾನ ಮತ್ತು ದೃಢ ವಿಶ್ವಾಸದ ಹೊರತಾದ ಬೇರೆ ಯಾವುದೂ ಶೈತಾನನ್ನು ಪ್ರತಿರೋಧಿಸಿ ನಿಂತು ಮಧ್ಯಮ ಪಥದಲ್ಲಿ ಸ್ಥಿರವಾಗಿ ನೆಲೆಗೊಳ್ಳಲು ನಮ್ಮನ್ನು ಸಹಾಯಿಸಲಾರವು ಮತ್ತು ಈ ಕುರಿತಾಗಿ ಏಕನಾದ ಅಲ್ಲಾಹನಿಂದ ಮಾತ್ರ ನಾವು ಸಹಾಯವನ್ನು ಯಾಚಿಸುತ್ತೇವೆ."
(ಅಲ್-ವಬಿಲ್ ಅಸ್ಸಯ್ಯಿಬ್, ಪುಟ 19)

# ಅರಿವಿನ ಕೊರತೆಯಿದ್ದರೂ ಅಲ್ಲಾಹನ ಕುರಿತು ತರ್ಕಿಸುತ್ತಾ ಅನಗತ್ಯ ಹೇಳಿಕೆಗಳನ್ನು ನೀಡುವಂತೆ ಶೈತಾನ್ ಮಾನವರನ್ನು ಉತ್ತೇಜಿಸುತ್ತಾನೆ.

ಅಜ್ಞಾನದಿಂದಾಗಿ ಅಲ್ಲಾಹನ ಕುರಿತಾಗಿ ತರ್ಕವಿತರ್ಕದಲ್ಲಿ ತೊಡಗಿ ಪ್ರತಿಕ್ರಿಯೆ ನೀಡಿದ್ದೇ ಸ್ವಯಂ ಶೈತಾನನು ಕೂಡ ಅಪಮಾನ ಹಾಗೂ ದುಃಖಾವಸ್ಥೆಗೆ ಈಡಾಗಲು ಪ್ರಮುಖ ಕಾರಣವಾಗಿತ್ತು. ನಿರಾವಲಂಬಿಯಾದ ಅಲ್ಲಾಹನ ಅಪಾರ ಮತ್ತು ಅನಿಯಮಿತ ಜ್ಞಾನದೊಂದಿಗೆ ಮತಭೇದವನ್ನು ಹೊಂದುತ್ತಾ ಆತ ತರ್ಕಿಸಿದ, "....ನಾನು ಅವನಿಗಿಂತಲೂ (ಆದಮ್‌ರಿಗಿಂತಲೂ) ಶ್ರೇಷ್ಟನಾಗಿದ್ದೇನೆ, ನನ್ನನ್ನು ನೀನು ಬೆಂಕಿಯಿಂದ ಸೃಷ್ಟಿಸಿರುವೆ ಮತ್ತು ಅವನನ್ನು ನೀನು ಸೃಷ್ಟಿಸಿರುವುದು ಮಣ್ಣಿನಿಂದಾಗಿದೆ." (ಸೂರ ಅಲ್ ಅಅ್‌ರಾಫ್: 12)

ಇಮಾಮ್ ಇಬ್ನು ಕಸೀರ್ (ರಹಿಮಹುಲ್ಲಾಹ್) ಬರೆಯುತ್ತಾರೆ, "(ಅಲ್ಲಾಹನ ಆಜ್ಞೆಯನ್ನು ಉಲ್ಲಂಘಿಸುತ್ತಾ ಶೈತಾನನು ಮಾಡಿದ) ಈ ನೆಪವು ಆತನು ಮಾಡಿದ ಅಪರಾಧಕ್ಕಿಂತಲೂ ಕೆಟ್ಟದ್ದಾಗಿದೆ. ಶೈತಾನನು ಹೇಳಿದ ಪ್ರಕಾರ; ಶ್ರೇಷ್ಟತೆಯಲ್ಲಿ ಆತನಿಗಿಂತ ಕೆಳದರ್ಜೆಯವನೊಬ್ಬನ ಮುಂದೆ ಸಾಷ್ಟಾಂಗವೆರಗಲು ಸಾಧ್ಯವಿಲ್ಲವೆನ್ನುವ ಕಾರಣಕ್ಕಾಗಿ ಆತ ಅಲ್ಲಾಹನ ಆಜ್ಞೋಲ್ಲಂಘನೆಯನ್ನು ಮಾಡಿದ್ದನು. ಶೈತಾನ್ (ಆತನ ಮೇಲೆ ಅಲ್ಲಾಹನ ಶಾಪವಿರಲಿ) ಈ ಮೂಲಕ ಉದ್ದೇಶಿಸಿದ್ದೇನೆಂದರೆ, "ನಾನು ಆದಮ್‌ಗಿಂತಲೂ ಶ್ರೇಷ್ಟನಾಗಿದ್ದೇನೆ. ಆದುದರಿಂದ ನೀನು ಆತನ ಮುಂದೆ ಸಾಷ್ಟಾಂಗವೆರಗುವಂತೆ ನನಗೆ ಅಪ್ಪಣೆ ನೀಡಲು ಹೇಗೆ ಸಾಧ್ಯ"?

ಶೈತಾನನ್ನು ಅಗ್ನಿಯಿಂದ ಸೃಷ್ಟಿಸಲಾಗಿರುವುದರಿಂದ ಆತ ಸ್ವಯಂ ತನ್ನನ್ನು ಆದಮ್‌ರಿಗಿಂತಲೂ ಶ್ರೇಷ್ಟವೆಂದು ಸಾರಿದ. 'ನೀನು ಆತನನ್ನು ಮಣ್ಣಿನಿಂದ ಸೃಷ್ಟಿಸಿರುವೆ ಮತ್ತು ಅಗ್ನಿಯು ಶ್ರೇಷ್ಟವಾಗಿದೆ.' ಎಂದು ಹೇಳಿದ.

ಆ ಶಾಪಗ್ರಸ್ತನು ಸೃಷ್ಟಿಗಳ ಹುಟ್ಟಿನ (ಉತ್ಪತ್ತಿಯ) ಮೂಲದತ್ತ ಗಮನ ಹರಿಸಿದನೇ ಹೊರತು ನೀಡಲ್ಪಟ್ಟ ಮನ್ನಣೆ ಮತ್ತು ಆದರಗಳ ವಿಷಯದಲ್ಲಿ ಆತ ನಿರ್ಲಕ್ಷ್ಯನಾಗಿದ್ದ. ಅಂದರೆ, ಅಲ್ಲಾಹು ಆದಮ್‍ರವರನ್ನು عليه السلام ತನ್ನ ಕೈಯಿಂದ ಸೃಷ್ಟಿಸಿ ಅವರಿಗೆ ಪ್ರಾಣವನ್ನು ಊದಿದ್ದನು. ಅಲ್ಲಾಹನ ಆಜ್ಞೆಗೆ ಎದುರು ನಿಲ್ಲುತ್ತಾ ಶೈತಾನನು ಆತ್ಮ ವಂಚನೆಯಿಂದ ಕೂಡಿದ ತುಲನೆಯೊಂದನ್ನು ಮಾಡಿದ್ದನು. ಈ ಮೂಲಕ ಆತನು ಅನುಗ್ರಹದಿಂದ 'ಅಬ್ಲಸ'ನಾಗಿ ಹೋದನು. ತಾತ್ಪರ್ಯ; 'ಅಲ್ಲಾಹನ ಅನುಗ್ರಹವನ್ನು ಪಡೆಯುವ ನಿರೀಕ್ಷೆಯನ್ನು ಕೈ ಬಿಡುವುದು.' ತಾನು ಮಾಡಿದ ಆತ್ಮವಂಚಕ ತುಲನೆಯ ಕಾರಣದಿಂದ ಆತ (ಶೈತಾನ್) ಈ ಘೋರ ಪ್ರಮಾದವನ್ನೆಸಗಿದ್ದನು.

ಬೆಂಕಿಯು ಮಣ್ಣಿಗಿಂತಲೂ ಉತ್ತಮವಾದುದು ಎಂಬ ಆತನ ಹಕ್ಕು ಮಂಡನೆ ಕೂಡ ಆಧಾರ ರಹಿತವಾಗಿದೆ. ಏಕೆಂದರೆ ಹಸಿಮಣ್ಣು ವಿವೇಕ, ಸಹಿಷ್ಣುತೆ, ತಾಳ್ಮೆ ಮತ್ತು ಭರವಸೆಯಂತಹ ಗುಣಗಳನ್ನು ಹೊಂದಿದೆ. ಹಸಿ ಮಣ್ಣಿನಲ್ಲಿಯೇ ಸಸ್ಯ ಲತಾದಿಗಳು ಮೊಳೆತು ಸೊಂಪಾಗಿ ಬೆಳೆದು ಅಭಿವೃದ್ಧಿ ಹೊಂದುತ್ತವೆ ಮತ್ತು ಆಹಾರವನ್ನು ಒದಗಿಸುತ್ತದೆ. ಇದಕ್ಕೆ ವಿರುದ್ಧವಾಗಿ ಬೆಂಕಿಯು ದಹನ, ಅಜಾಗರೂಕತೆ ಮತ್ತು ದುಡುಕಿನ ಗುಣಗಳನ್ನು ಹೊಂದಿದೆ. ಆದ್ದರಿಂದ ಸೃಷ್ಟಿಸಲ್ಪಟ್ಟ ಮೂಲವು ಶೈತಾನನ್ನು ವಿಫಲತೆಯತ್ತ ಕೊಂಡೊಯ್ಯಿತು. ಆದಮರ ಸೃಷ್ಟಿಯ ಹಿಂದಿರುವ ಮೂಲವು ಅವರನ್ನು ಪಶ್ಚಾತ್ತಾಪ, ವಿನಮ್ರತೆ, ವಿಧೇಯತೆ ಹಾಗೂ ಅಧೀನತೆಯೊಂದಿಗೆ ಅಲ್ಲಾಹನತ್ತ ತಿರುಗುವಂತೆ ಪ್ರೇರೇಪಿಸಿತು. ತನ್ನ ತಪ್ಪನ್ನು ಒಪ್ಪಿಕೊಂಡು ಪಶ್ಚಾತ್ತಾಪದೊಂದಿಗೆ ಅವರು ಅಲ್ಲಾಹನ ಕ್ಷಮೆಯನ್ನು ಯಾಚಿಸಿದರು. (ಇಬ್ನ್ ಕಸೀರ್)

ಅರಿವಿಲ್ಲದಿದ್ದರೂ ಶೈತಾನನು ಅಲ್ಲಾಹನ ಕುರಿತು ಮಾಡಿದ ತರ್ಕ ಹಾಗೂ ಅಭಿಪ್ರಾಯಗಳ ಕುರಿತಂತೆ ಕುರ್‍ಆನ್ ಹೇಳುತ್ತದೆ;

"ದುಷ್ಕೃತ್ಯಗಳಲ್ಲೂ, 'ಫಹಶಾ'ಗಳಲ್ಲೂ (ಲಜ್ಜಾಹೀನ ಪಾಪಕೃತ್ಯ)
ತೊಡಗಿಕೊಳ್ಳುವಂತೆಯೂ, ಅಲ್ಲಾಹನ ಕುರಿತು
ನಿಮಗರಿವಿಲ್ಲದಿರುವುದು ಹೇಳುವಂತೆಯೂ ಅವನು (ಶೈತಾನ್)
ನಿಮಗೆ ಆದೇಶ ನೀಡುತ್ತಾನೆ."
(ಸೂರ ಅಲ್ ಬಕರ: 169)

"ಯಾವ ಅರಿವೂ ಇಲ್ಲದೆ ಅಲ್ಲಾಹನ ವಿಷಯದಲ್ಲಿ ತರ್ಕಿಸುತ್ತಾ, ಪ್ರತಿಯೋರ್ವ
ಧಿಕ್ಕಾರಿ ಶೈತಾನನ್ನು ಅನುಸರಿಸುವ ಕೆಲವರು ಮನುಷ್ಯರ ಪೈಕಿಯಲ್ಲಿದ್ದಾರೆ. ಅವನನ್ನು
(ಶೈತಾನನ್ನು) ಯಾರಾದರೂ ಮಿತ್ರನನ್ನಾಗಿ ಮಾಡಿಕೊಂಡರೆ ಅವನು (ಶೈತಾನನು)
ನಿಶ್ಚಯವಾಗಿಯೂ ಅವನನ್ನು ದಾರಿಗೆಡಿಸುತ್ತಾನೆ, ದಗದಗಿಸುವ ನರಕ ಶಿಕ್ಷೆಯತ್ತ
ಅವನನ್ನು ಕೊಂಡೊಯ್ಯುತ್ತಾನೆ ಎಂಬುದು ಅವನ (ಶೈತಾನನ) ಕುರಿತು
ವಿಧಿಸಲ್ಪಟ್ಟಿದೆ." (ಸೂರ ಅಲ್ ಹಜ್ಜ್ 3, 4)

ದರ್ಪವನ್ನು ಪ್ರದರ್ಶಿಸುತ್ತಾ ಶೈತಾನನು ಅಲ್ಲಾಹನ ಪರಮೋನ್ನತ ಜ್ಞಾನವನ್ನು (ಆಜ್ಞೆಯನ್ನು) ವಿರೋಧಿಸುತ್ತಾ ತರ್ಕವನ್ನೊಡ್ಡಿದ. ಅಲ್ಲಾಹು ಹೇಳುತ್ತಾನೆ;

"ಅವನು ಅಹಂಕಾರವನ್ನು ತೋರ್ಪಡಿಸಿದನು ಮತ್ತು
ಸತ್ಯನಿಷೇಧಿಗಳ ಪೈಕಿಯಲ್ಲಾದನು"
(ಸೂರ ಸ್ವಾದ್:74)

ಮತ್ತು ಸೂರ ಗಾಫಿರ್‌ನಲ್ಲಿ ಅಲ್ಲಾಹು ಹೇಳುತ್ತಾನೆ;

"ನಿಶ್ಚಯವಾಗಿಯೂ, ತಮಲ್ಲಿಗೆ ಯಾವುದೇ ಪ್ರಮಾಣವು
ಬಂದಿರದಿದ್ದರೂ ಅಲ್ಲಾಹನ ಆಯಾತ್‌ಗಳ (ದೃಷ್ಟಾಂತಗಳು, ನಿದರ್ಶನಗಳು,
ಸೂಕ್ತಗಳು, ಎಚ್ಚರಿಕೆ, ಸಂಕೇತಗಳು, ದಿವ್ಯವಾಣಿ,
ಮೊದಲಾದವುಗಳು) ಕುರಿತು ತರ್ಕಿಸುವರ್‍ಯಾರೋ,
ಅವರ ಹೃದಯಗಳಲ್ಲಿ ಅಹಂಕಾರ ಮಾತ್ರವಿದೆ....."
(ಸೂರ ಗಾಫಿರ್: 56)

ಇದರರ್ಥ; ಅವರು ಸತ್ಯವನ್ನು ಅಸತ್ಯ, ಅಸಮರ್ಪಕ ನಿದರ್ಶನ ಮತ್ತು ಅಸ್ಪಷ್ಟವಾದ ತರ್ಕಗಳ ಮೂಲಕ ಖಂಡಿಸಲು ಪ್ರಯತ್ನಿಸುತ್ತಿದ್ದಾರೆ. ಅಲ್ಲಾಹನ ಕಡೆಯಿಂದ ಯಾವುದೇ ಸಾಕ್ಷ್ಯ ಹಾಗೂ ನಿದರ್ಶನಗಳು ಅವರ ಬಳಿ ಇರಲಾರವು. 'ಅವರ ಹೃದಯಗಳಲ್ಲಿ ಅಹಂಕಾರದ ವಿನಹ ಬೇರೇನೂ ಇಲ್ಲ..... ಆದುದರಿಂದ ಇಂತಹವರ ಪೈಕಿಯಲ್ಲಿ ಸೇರ್ಪಡೆಯಾಗುವುದರಿಂದ ನೀನು ಅಲ್ಲಾಹನಲ್ಲಿ ಅಭಯವನ್ನು ಯಾಚಿಸು.' (ನೋಡಿ, ತಫ್ಸೀರ್ ಇಬ್ನು ಕಸೀರ್ **40:56**) ಏಕೆಂದರೆ ಅಲ್ಲಾಹನ ಪ್ರವಾದಿವರ್ಯﷺ ಹೇಳಿದರು, "ಒಂದು ಕಣದಷ್ಟಾದರೂ ತನ್ನ ಹೃದಯದಲ್ಲಿ ಅಹಂಭಾವವನ್ನು ಹೊಂದಿದ ಒಬ್ಬಾತ ಸ್ವರ್ಗವನ್ನು ಪ್ರವೇಶಿಸಲಾರ"(ಸಹೀಹ್ ಮುಸ್ಲಿಂ)

# ಶೈತಾನನು ಹುಸಿ ವಾಗ್ದಾನವನ್ನು ನೀಡಿ ಉನ್ನತ ನಿರೀಕ್ಷೆಯನ್ನು ಹುಟ್ಟಿಸುತ್ತಾನೆ.

"ಅವನು (ಶೈತಾನನು) ಅವರಿಗೆ (ಮನುಷ್ಯರಿಗೆ) (ಹುಸಿ) ವಾಗ್ದಾನವನ್ನು ನೀಡುತ್ತಾ ಅವರು ವ್ಯಾಮೋಹ ಪಡುವಂತೆ ಮಾಡುತ್ತಾನೆ.
ಶೈತಾನನು ಅವರಿಗೆ ನೀಡುವ ವಾಗ್ದಾನವು ವಂಚನೆಯಲ್ಲದೆ ಬೇರೇನೂ ಅಲ್ಲ.
ಅಂತವರ ತಾಣವು ನರಕವಾಗಿದೆ. ಅದರಿಂದ (ನರಕದಿಂದ) ಪಾರಾಗುವ ಯಾವುದೇ ದಾರಿಯನ್ನು ಅವರು ಕಾಣಲಾರರು."
**(ಸೂರ ಅನ್ನಿಸಾ:120,121)**

ಬದ್ರ್ ಯುದ್ಧದ ಸಂದರ್ಭದಲ್ಲಿ ಶೈತಾನನು ಸುರಾಖಾ ಇಬ್ನ್ ಮಾಲಿಕ್‌ನ ರೂಪದಲ್ಲಿ ಅವಿಶ್ವಾಸಿಗಳತ್ತ ಬಂದು ಅವರಿಗೆ ಜಯ, ನಿಯಂತ್ರಣ (ಶಕ್ತಿ), ಅಧಿಪತ್ಯ ಮತ್ತು ಕೀರ್ತಿಯ ವಾಗ್ದಾನವನ್ನಿತ್ತನು. 'ನೀವು ಅತ್ಯಂತ ಶಕ್ತಿಶಾಲಿಗಳು ಮತ್ತು ಸಂಖ್ಯೆಯಲ್ಲಿ ಕಡಿಮೆಯಿರುವ ಮುಸ್ಲಿಮರ ವಿರುದ್ದ ನೀವು ಜಯಶಾಲಿಗಳಾಗುವಿರಿ' ಎಂದು ಹೇಳುತ್ತಾ ಶೈತಾನನು ಅವರ ಹೃದಯಗಳಲ್ಲಿ ದುರಾಭಿಮಾನವು ನೆಲೆಗೊಳ್ಳುವಂತೆ ಮಾಡುವ ಮೂಲಕ ತನ್ನ ಕಾರ್ಯವನ್ನು ಸಾಧಿಸಿದ್ದನು. ಆತನು ಅವರಿಗೆ (ಮುಶ್ರಿಕರಿಗೆ) ತಮ್ಮ ಶಕ್ತಿಯನ್ನು ಪರಮಾಲಂಕೃತಗೊಳಿಸಿ ತೋರಿಸುತ್ತಾ ಅವರಲ್ಲಿ ವಿಜಯದ ನಿರೀಕ್ಷೆಯನ್ನು ಹುಟ್ಟಿಸಿದನು. ಮಾತ್ರವಲ್ಲದೆ ಮುಸ್ಲಿಮರಿಗೆದುರಾಗಿ ನಡೆಯುವ ಯುದ್ಧದಲ್ಲಿ ಅವರ ಪರ ಭಾಗವಹಿಸುವುದಾಗಿ ವಾಗ್ದಾನವಿತ್ತನು. ಕುರ್‌ಆನ್ ಹೇಳುತ್ತದೆ; "ಮತ್ತು (ಸ್ಮರಿಸಿರಿ) ಶೈತಾನನು ಅವರ ಕರ್ಮಗಳನ್ನು ಅವರಿಗೆ ಸುಂದರಗೊಳಿಸಿ ತೋರಿಸುತ್ತಾ ಹೇಳಿದ (ಸಂದರ್ಭ), ಈ ದಿನ (ಬದ್ರ್ ಯುದ್ಧದ ದಿನ) ಜನರಲ್ಲಿ ನಿಮ್ಮನ್ನು ಜಯಿಸುವವರು ಯಾರೂ ಇಲ್ಲ, ನಾನು ನಿಮ್ಮ ಆಪ್ತ ಸಹಾಯಕನಾಗಿದ್ದೇನೆ....." (ಸೂರ ಅನ್‌ಫಾಲ್: 48)

ಈ ಪ್ರಕಾರ ಅಹಂಭಾವ ತುಂಬಿದ ಹೃದಯದೊಂದಿಗೆ ಶೈತಾನನ್ನು ನೆಚ್ಚಿಕೊಂಡು ಮುಶ್ರಿಕರು ಮುಸ್ಲಿಮರೊಂದಿಗೆ ಯುದ್ದದಲ್ಲೇರ್ಪಟ್ಟರು. "ಆದರೆ ಆ ಎರಡು ತಂಡಗಳು ಪರಸ್ಪರ ಸಂಧಿಸಿದಾಗ 'ನನಗೆ ನಿಮ್ಮೊಂದಿಗೆ (ಮುಶ್ರಿಕರೊಂದಿಗೆ) ಯಾವುದೇ

ಸಂಬಂಧವಿಲ್ಲ, ನಿಶ್ಚಯವಾಗಿಯೂ ನೀವು ಕಾಣದೇ ಇರುವುದನ್ನು ನಾನು ಕಾಣುತ್ತಿದ್ದೇನೆ. ನಿಶ್ಚಯವಾಗಿಯೂ ನಾನು ಅಲ್ಲಾಹನನ್ನು ಭಯಪಡುತ್ತಿದ್ದೇನೆ, ಅಲ್ಲಾಹು ಅತ್ಯಂತ ಕಠಿಣವಾಗಿ ಶಿಕ್ಷಿಸುವವನಾಗಿದ್ದಾನೆ' ಎಂದು ಹೇಳುತ್ತಾ ಆತ (ಶೈತಾನ್) ಹಿಂದೆ ಸರಿದು ಬಿಟ್ಟನು." (ಸೂರ ಅನ್‌ಫಾಲ್: 48)

ಶೈತಾನನ ಕಪಟ ವಾಗ್ದಾನಗಳು ಹಾಗೂ ಆತನ ವಂಚನೆಯ ಮತ್ತೊಂದು ವೃತ್ತಾಂತವು ಗ್ರಂಥದ ಜನರಿಂದ ವಿವರಿಸಲ್ಪಟ್ಟಿರುವುದನ್ನು ಇಬ್ನು ಜರೀರ್(ರಹಿಮಹುಲ್ಲಾಹ್) ತನ್ನ ಸೂರ ಅಲ್ ಹಶ್ರ್‌ನ ತಫ್ಸೀರ್‌ನಲ್ಲಿ ವರದಿ ಮಾಡಿದ್ದಾರೆ. ಅದರಿಂದ ಕೆಲವು ಪಾಠಗಳನ್ನು ಕಲಿಯಲಿಕ್ಕಾಗಿ ಅದನ್ನು ಇಲ್ಲಿ ಉಲ್ಲೇಖಿಸುತ್ತಿದ್ದೇನೆ.

ಇಸ್ರಾಯೀಲ್ ಸಂತತಿಗಳ ಪೈಕಿ ಬಹುದೊಡ್ಡ ಆರಾಧಕರೊಬ್ಬರು (ಪುರೋಹಿತರು) ಇದ್ದರು. ಅರುವತ್ತು ವರ್ಷಗಳಷ್ಟು ಕಾಲ ಅವರು ಅಲ್ಲಾಹನನ್ನು ಆರಾಧಿಸಿದ್ದರು. ಈ ವ್ಯಕ್ತಿಯನ್ನು ಪಥಭ್ರಷ್ಟಗೊಳಿಸಲು ಶೈತಾನನು ತನ್ನಿಂದಾಗುವ ಎಲ್ಲಾ ಶ್ರಮಗಳನ್ನು ನಡೆಸಿದ್ದರೂ ವಿಫಲನಾಗಿದ್ದ. ಶೈತಾನನು ತನ್ನ ತಂತ್ರವನ್ನು ಬದಲಿಸಿ ಪ್ರಯೋಗಿಸಲು ಉದ್ದೇಶಿಸುತ್ತಾ ಸ್ತ್ರೀಯೊಬ್ಬಳ ಮೇಲೆ ತನ್ನ ತಂತ್ರವನ್ನು ಪ್ರಯೋಗಿಸಿ ಅವಳು ಭ್ರಾಂತತೆಗೊಳಗಾಗುವಂತೆ ಮಾಡಿದ. ತದನಂತರ ಅವನು ಈ ಸ್ತ್ರೀಯನ್ನು ರೋಗ ನಿವಾರಣೆಗಾಗಿ ಸದ್ರಿ ಪುರೋಹಿತರತ್ತ ಕೊಂಡೊಯ್ಯುವಂತೆ ಅವಳ ಸಹೋದರರಿಗೆ ಸಲಹೆಯಿತ್ತ. ಇದನ್ನೊಪ್ಪಿದ ಅವಳ ಸಹೋದರರು ಪುರೋಹಿತರತ್ತ ಚಿಕಿತ್ಸೆಗಾಗಿ ಆ ಸ್ತ್ರೀಯನ್ನು ಕೊಂಡೊಯ್ದರು. ಅಲ್ಲಾಹನ ಅನುಮತಿಯೊಂದಿಗೆ ಚಿಕಿತ್ಸೆಯನ್ನು ನೀಡಿ ಆ ಮಹಿಳೆಯ ಭ್ರಾಂತತೆಯನ್ನು ಗುಣಪಡಿಸಲು ಸಾಧ್ಯವಿದ್ದವರಾಗಿದ್ದರವರು. ಹೀಗಿರುತ್ತಾ ಒಂದು ದಿನ ಆ ಸ್ತ್ರೀಯು ಪುರೋಹಿತರ ಸಂಗಡವಿದ್ದಾಗ ಶೈತಾನನು ಪುರೋಹಿತರ ಕಣ್ಣಿಗೆ ಆ ಸ್ತ್ರೀಯನ್ನು ಶೃಂಗಾರಭೂಷಿತೆ ಮತ್ತು ಸೌಂದರ್ಯವತಿಯನ್ನಾಗಿ ತೋರಿಸಿ ಅವರ ಮನಸ್ಸಿನೊಳಗೆ ಕೆಟ್ಟ ಯೋಚನೆಗಳು ಆವೃತವಾಗುವಂತೆ ಪ್ರೋತ್ಸಾಹಿಸಿದ. ಈ ಕೆಟ್ಟ ಯೋಚನೆಗಳು ಪುರೋಹಿತರನ್ನು ಆ ಸ್ತ್ರೀಯೊಂದಿಗೆ ಅನೈತಿಕ ದೈಹಿಕ ಸಂಬಂಧದಲ್ಲಿ ಏರ್ಪಡುವತ್ತ ಕೊಂಡೊಯ್ಯಿತು. ಈ ಮೂಲಕ ಆ ಹೆಂಗಸು ಗರ್ಭ ಧರಿಸಿದಾಗ ಭಯದಿಂದಾಗಿ ಪುರೋಹಿತರು ಆ ಸ್ತ್ರೀಯನ್ನು ಕೊಲೆಗೈದರು. (ಪುನಃ ಶೈತಾನನ ಪ್ರಲೋಭನೆಗೊಳಪಟ್ಟು ಅವರು ಹೀಗೆ ಮಾಡಿದ್ದರು)

ಸ್ತ್ರೀಯ ಸಹೋದರರಿಗೆ ಈ ವಿಷಯವು ತಿಳಿದಾಗ ಅವರು ಪುರೋಹಿತರನ್ನು ವಧಿಸಲು ತೀರ್ಮಾನಿಸಿದರು. ಈ ಸಂರ್ಭದಲ್ಲಿಯೇ ಶೈತಾನನು ಪುರೋಹಿತರ ಮುಂದೆ ಪ್ರತ್ಯಕ್ಷಗೊಂಡು, 'ನಿಮ್ಮನ್ನು ಈ ಕುತಂತ್ರದಲ್ಲಿ ಕೆಡವಿದವನು ತಾನಾಗಿರುವೆ ಮತ್ತು ತನ್ನನ್ನು ಹೊರತು ಪಡಿಸಿ ಬೇರೆ ಯಾರಿಂದಲೂ ನಿಮ್ಮನ್ನು ರಕ್ಷಿಸಲು ಸಾಧ್ಯವಿಲ್ಲ' ಎಂದನು ಮತ್ತು 'ನೀನು ಕೇವಲ ಒಂದು ಬಾರಿ ತನ್ನ ಮುಂದೆ ಸಾಷ್ಟಾಂಗವೆರಗುವಿಯೆಂದಾದರೆ ನಾನು ಅವರಿಂದ ನಿನ್ನನ್ನು ರಕ್ಷಿಸಬಲ್ಲೆ' ಎಂಬ ಆಮಿಷವನ್ನು ಆ ಪುರೋಹಿತರ ಮುಂದೆ ಒಡ್ಡಿದನು. ಅವನ ಮಾತಿಗೆ ಬಲಿಯಾಗಿ ಅವರು

ಅವನ (ಶೈತಾನನ) ಮುಂದೆ ಸಾಷ್ಟಾಂಗವೆರಗಿದಾಗ ಶೈತಾನನು ಪುರೋಹಿತರನ್ನು ಬಿಟ್ಟು ಓಡಿ ಹೋದನು. ನಂತರ ಪುರೋಹಿತರು ಕೊಲ್ಲಲ್ಪಟ್ಟರು. ಅಲ್ಲಾಹೇತರರಿಗೆ ಸಾಷ್ಟಾಂಗವೆರಗಿದ ಕಾರಣದಿಂದಾಗಿ ಆ ವ್ಯಕ್ತಿ ಅವಿಶ್ವಾಸದ ನೆಲೆಯಲ್ಲೇ ಇಹಲೋಕವನ್ನು ತ್ಯಜಿಸಿದರು. ಶೈತಾನನ ಇದೇ ರೀತಿಯ ಕುಟಿಲತೆಯ ಕುರಿತಾಗಿದೆ ಸೂರ ಅಲ್ ಹಶ್ರ್‌ನಲ್ಲಿ ನಮಗೆ ತಿಳಿಸಲ್ಪಟ್ಟಿರುವುದು.

"ಇವರ ಉಪಮೆಯು ಶೈತಾನನಂತೆಯೇ ಇದೆ. ಮನುಷ್ಯನೊಂದಿಗೆ ಅವನು
'ನೀನು ಅಲ್ಲಾಹನಲ್ಲಿ ಅವಿಶ್ವಾಸವನ್ನು ಹೊಂದು' ಎಂದು ಹೇಳಿದ ಸಂದರ್ಭ;
ಹಾಗೆ ಅವರು (ಮನುಷ್ಯರು) ಅವಿಶ್ವಾಸವನ್ನು
ತಾಳಿದಾಗ ಅವನು (ಶೈತಾನ್) ಹೇಳಿದನು
'ನಿಶ್ಚಯವಾಗಿಯೂ, ನಾನು ನಿನ್ನಿಂದ ಸಂಬಂಧ ಮುಕ್ತನಾಗಿರುವೆನು.
ಖಂಡಿತವಾಗಿಯೂ ನಾನು ಜಗದೊಡೆಯನಾದ ಅಲ್ಲಾಹನನ್ನು ಭಯಪಡುತ್ತೇನೆ."
(ಸೂರ ಅಲ್ ಹಶ್ರ್:16

ಪುನರುತ್ಥಾನ ದಿನದಂದು ಶೈತಾನ್ ತಾನು ಮಾಡಿದ ವಾಗ್ದಾನಗಳಿಂದ ನುಣುಚಿಕೊಂಡು ನಂಬಿಕೆ ದ್ರೋಹ ಪ್ರದರ್ಶಿಸಿ, ನಂತರ ತನ್ನ ಹಿಂಬಾಲಕರನ್ನು ನರಕದತ್ತ ಎಳೆದೊಯ್ಯುತ್ತಾನೆ ಮತ್ತು ಕುರ್‌ಆನ್ ಅವರ (ಶೈತಾನನ ಹಿಂಬಾಲಕರ) ವಿರುದ್ಧ ಸಾರಿದ್ದ ಎಚ್ಚರಿಕೆಯನ್ನು ಬಹಿರಂಗಪಡಿಸುತ್ತಾ ಅವರನ್ನುದ್ದೇಶಿಸಿ ತಾನು ಮಾಡಿದ ಕೃತ್ರಿಮ ವಾಗ್ದಾನದ ಕುರಿತು ಪ್ರಕಟಿಸುತ್ತಾನೆ.

"ವಿಷಯವು ತೀರ್ಮಾನಿಸಲ್ಪಟ್ಟ ನಂತರ ಶೈತಾನ್ ಹೇಳುವನು, 'ನಿಶ್ಚಯವಾಗಿಯೂ ಅಲ್ಲಾಹು ನಿಮ್ಮೊಂದಿಗೆ ವಾಗ್ದಾನವೊಂದನ್ನು ಮಾಡಿದನು, ಸತ್ಯವಾದಂತಹ ವಾಗ್ದಾನ. ನಾನೂ ನಿಮ್ಮೊಂದಿಗೆ ವಾಗ್ದಾನವೊಂದನ್ನು ಮಾಡಿದ್ದೆನು. ಆದರೆ ನಿಮ್ಮೊಂದಿಗೆ (ಮಾಡಿದ ವಾಗ್ದಾನ) ನಾನು ಉಲ್ಲಂಘಿಸಿದೆ. ನನಗೆ ನಿಮ್ಮ ಮೇಲೆ ಯಾವುದೇ ಅಧಿಕಾರವಿರಲಿಲ್ಲ, ನಾನು ನಿಮ್ಮನ್ನು ಆಹ್ವಾನಿಸಿದಾಗ ನೀವು ನನಗೆ ಉತ್ತರಿಸಿದ್ದೀರಿ ಎಂದು ಮಾತ್ರ. ಆದುದರಿಂದ ನೀವು ನನ್ನನ್ನು ದೂಷಿಸಬೇಡಿ, ನೀವು ಸ್ವಯಂ ನಿಮ್ಮನ್ನು ದೂಷಿಸಿಕೊಳ್ಳಿ. ನನಗೆ ನಿಮ್ಮನ್ನು ಸಹಾಯಿಸಲಾಗದು, ನೀವೂ ನನ್ನನ್ನು ಸಹಾಯಿಸಲಾರಿರಿ. (ನನ್ನನ್ನು ಅನುಸರಿಸುವ ಮೂಲಕ) ಈ ಮುಂಚೆ ನೀವು ನನ್ನನ್ನು (ಅಲ್ಲಾಹನ) ಪಾಲುದಾರನನ್ನಾಗಿಸಿದ್ದನ್ನು ನಾನಿದೋ ನಿರಾಕರಿಸುತ್ತಿದ್ದೇನೆ. ನಿಶ್ಚಯವಾಗಿಯೂ ಅಕ್ರಮಿಗಳಿಗೆ ವೇದನಾಯುಕ್ತ ಶಿಕ್ಷೆಯಿದೆ." (ಸೂರ ಇಬ್ರಾಹೀಮ್:22)

# ಶೈತಾನನಿಂದಾಗಿ ಜನರು ಅಲ್ಲಾಹನ ಆಜ್ಞೆಗಳನ್ನು ಮರೆಯುತ್ತಾರೆ

**"ಶೈತಾನ್ ಅವರನ್ನು ತನ್ನ ವಶದಲ್ಲಿಟ್ಟುಕೊಳ್ಳುತ್ತಾ ಅಲ್ಲಾಹನ ಕುರಿತಾದ ಉದ್ಬೋಧನೆಯನ್ನು ಅವರು ಮರೆಯುವಂತೆ ಮಾಡಿದ್ದಾನೆ. ಅಂತವರಾಗಿದ್ದಾರೆ ಶೈತಾನನ ಪಕ್ಷದವರು..........**

**(ಸೂರ–ಮುಜಾದಿಲ:19)**

**ಆದರೆ ನಮಗೆ ನೆನಪಾದ ಕೂಡಲೇ (ತಪ್ಪಿನ ಅರಿವಾದ ಕೂಡಲೇ) ನಾವು ಯಾವ ವಿಕ್ಷಿಪ್ತತೆ ಅಥವಾ ದುರ್ಮಾರ್ಗಕ್ಕೆ ಹೊರಳಿದ್ದೇವೆಯೋ ಅದನ್ನು ತೊರೆದು ಬಿಡಬೇಕೆಂದು ಕುರ್‌ಆನ್ ನಮಗೆ ಆಜ್ಞಾಪಿಸುತ್ತದೆ.**

**"........ಇನ್ನು ಯಾವಾಗಲಾದರೂ ನಿನ್ನನ್ನು ಶೈತಾನನು ಮರೆತು ಹೋಗುವಂತೆ ಮಾಡಿದ್ದರೆ, ನೆನಪು ಬಂದ ನಂತರ ಅಕ್ರಮಿಗಳಾದ ಜನರ ಬಳಿ ನೀನು ಕುಳಿತುಕೊಳ್ಳಬಾರದು"**

**(ಸೂರ–ಅನ್‌ಆಮ್:68)**

# ಶೈತಾನ್ ಮತ್ತು ಆತನನ್ನು ಅನುಸರಿಸುವವರ ವಿಧಿ

**ಶೈತಾನ್ ಮತ್ತು ಆತನನ್ನು ಹಿಂಬಾಲಿಸುವವರ ವಿಧಿಯು** ಅತ್ಯಂತ ಭಯಾನಕ ಮತ್ತು ಘೋರವಾಗಿರುತ್ತದೆ. ಪುನರುತ್ಥಾನ ದಿನದವರೆಗೂ ಅಲ್ಲಾಹನ ಶಾಪವು ಶೈತಾನನ ಮೇಲಿರುತ್ತದೆ ಎಂದು ಅಲ್ಲಾಹು ನಮಗೆ ತಿಳಿಸಿದ್ದಾನೆ ಮತ್ತು ನರಕವನ್ನು ಶೈತಾನ್ ಮತ್ತು ಆತನ ಹಿಂಬಾಲಕರಿಂದ ತುಂಬಲಾಗುತ್ತದೆಯೆಂದೂ ಅಲ್ಲಾಹು ಹೇಳುತ್ತಾನೆ.

**“(ಅಲ್ಲಾಹು ಹೇಳಿದನು) ನಿಂದ್ಯನಾಗಿಯೂ,**
**ತಿರಸ್ಕೃತನಾಗಿಯೂ ನೀನು ಇಲ್ಲಿಂದ (ಸ್ವರ್ಗದಿಂದ) ಹೊರಹೋಗು.**
**ಅವರ (ಮನುಷ್ಯರ) ಪೈಕಿ ಯಾರಾದರೂ ನಿನ್ನನ್ನು ಹಿಂಬಾಲಿಸುವವರಾದರೆ,**
**ನಿಮ್ಮೆಲ್ಲರನ್ನು ಸೇರಿಸಿ ನಾನು ನರಕವನ್ನು ತುಂಬಿಸಿಯೇ ತೀರುವೆನು.”**
**(ಸೂರ ಅಲ್‌-ಅಅ್‌ರಾಫ್: 18)**

ಶೈತಾನನ್ನು

# ದೂರವಿಡಲು

ಕುರ್‌ಆನ್ ಮತ್ತು ಸುನ್ನತ್‌ನಲ್ಲಿ
ನಿರ್ದೇಶಿಸಲ್ಪಟ್ಟ

# ವಿಧಾನಗಳು

# 1 ನೇರಮಾರ್ಗದಲ್ಲಿ ಸ್ಥಿರವಾಗಿ ನೆಲೆಗೊಳ್ಳುವುದು

ನೇರಮಾರ್ಗದಲ್ಲಿ ಸ್ಥಿರವಾಗಿ ಅಥವಾ ದೃಢವಾಗಿ ನಿಲ್ಲುವುದು ಎನ್ನುವುದರ ಅರ್ಥ ಅಲ್ಲಾಹನ ಗ್ರಂಥವಾದ ಕುರ್‌ಆನ್ ಹಾಗೂ ಅವನ ಪ್ರವಾದಿ ಮುಹಮ್ಮದ್ ಮುಸ್ತಫಾರವರ ﷺ ಸುನ್ನತ್‌ನಲ್ಲಿ (ಚರ್ಯೆ) ಮಾತು ಹಾಗೂ ಕೃತಿಯ ಮೂಲಕ ದೃಢವಾಗಿ ನೆಲೆಗೊಳ್ಳುವುದು. ಇದುವೇ ಶೈತಾನನ ವಿರುದ್ಧ ನಮ್ಮಲ್ಲಿರುವ ಅತಿ ದೊಡ್ಡ ರಕ್ಷಾ ಕವಚ. ಅಬ್ದುಲ್ಲಾ ಬಿನ್ ಮಸ್‌ಊದ್ ؓ ಹೇಳಿರುವುದಾಗಿ ಇಮಾಮ್ ಅಹ್ಮದ್ ಬಿನ್ ಹಂಬಲ್(ರಹಿಮಹುಲ್ಲಾಹ್) ಉಲ್ಲೇಖಿಸಿದ್ದಾರೆ, "ಅಲ್ಲಾಹನ ಸಂದೇಶವಾಹಕರಾದ ಪ್ರವಾದಿ ಮುಹಮ್ಮದ್ ﷺ ತಮ್ಮ ಕೈಯಿಂದ (ಮರಳಿನಲ್ಲಿ) ರೇಖೆಯೊಂದನ್ನು ಎಳೆದರು ಮತ್ತು ಈ ರೀತಿ ಹೇಳಿದರು, 'ಇದು ಅಲ್ಲಾಹನ ಪಥವಾಗಿದೆ, ನೇರವಾಗಿ ಮುನ್ನಡೆಯುವಂತಹದ್ದು'. ನಂತರ ಆ ನೇರ ರೇಖೆಯ ಎಡ ಮತ್ತು ಬಲ ಭಾಗಗಳಲ್ಲಿ ಮತ್ತೊಂದಿಷ್ಟು ರೇಖೆಗಳನ್ನೆಳೆದು ಈ ರೀತಿ ಹೇಳಿದರು, 'ಇದು ಬಾಕಿ ಪಥಗಳಾಗಿವೆ, ಈ ಪ್ರತಿಯೊಂದು ಪಥದಲ್ಲಿಯೂ ಅದರತ್ತ ಕರೆಯುವ ಶೈತಾನನೊಬ್ಬನಿದ್ದಾನೆ.' ಇದನ್ನು ಹೇಳಿದ ನಂತರ ಅವರು ಈ ಸೂಕ್ತವನ್ನು ಪಠಿಸಿದರು.

"ನಿಶ್ಚಯವಾಗಿಯೂ, ಇದು ನನ್ನ ನೇರವಾದ ಮಾರ್ಗವಾಗಿದೆ.
ನೀವಿದನ್ನು ಅನುಸರಿಸಿರಿ, ಅನ್ಯ ಮಾರ್ಗಗಳನ್ನು ಅನುಸರಿಸದಿರಿ.
ಅವುಗಳೆಲ್ಲವೂ ಅವನ (ಅಲ್ಲಾಹನ) ಮಾರ್ಗದಿಂದ ನಿನ್ನನ್ನು
ಚದುರಿಸಿ ಬಿಡುವುವು........."
**(ಸೂರ ಅನ್‌ಆಮ್:153)**

ವ್ಯಕ್ತಿಯೊಬ್ಬರು ಇಬ್ನು ಮಸ್‌ಊದ್‌ರವರೊಂದಿಗೆ ؓ ಪ್ರಶ್ನಿಸಿದರು. 'ಸಿರಾತೇ ಮುಸ್ತಖೀಮ್'(ನೇರವಾದ ಪಥ) ಅಂದರೆ ಏನು? ಇಬ್ನು ಮಸ್‌ಊದ್‌ರವರು ؓ ಉತ್ತರಿಸಿದರು, "ಪ್ರವಾದಿಯವರು ﷺ ನಮ್ಮನ್ನು ಇದರ ಇನ್ನೊಂದು ಅಂಚು ಸ್ವರ್ಗದಲ್ಲಿ

ಕೊನೆಗೊಳ್ಳುವ ಈ ಅಂಚಿನಲ್ಲಿ ಬಿಟ್ಟು ಹೋಗಿರುವರು. ಇದರ ಬಲಭಾಗದಲ್ಲಿ ಅನ್ಯ ಮಾರ್ಗಗಳಿವೆ ಮತ್ತು ಇದರ ಎಡ ಭಾಗದಲ್ಲೂ ಅನ್ಯಮಾರ್ಗಗಳಿವೆ. ಇದರ ಮೂಲಕ ಸಾಗುವವರನ್ನು ತಮ್ಮತ್ತ ಕರೆಯುವ ವ್ಯಕ್ತಿಗಳೂ (ಈ ಮಾರ್ಗಗಳಲ್ಲಿ) ಇದ್ದಾರೆ. (ಎಡ ಮತ್ತು ಬಲಭಾಗಗಳಲ್ಲಿರುವ) ಅನ್ಯಮಾರ್ಗಗಳಲ್ಲಿ ಸಂಚರಿಸುವವರ್‍ಯಾರೋ ಅವರು ನರಕದಲ್ಲಿ ಕೊನೆಗೊಳ್ಳುತ್ತಾರೆ. ನೇರಮಾರ್ಗದಲ್ಲಿ ಸಂಚರಿಸುವವರ್‍ಯಾರೋ ಅವರು ಸ್ವರ್ಗದಲ್ಲಿ ಕೊನೆಗೊಳ್ಳುತ್ತಾರೆ." ನಂತರ ಇಬ್ನು ಮಸ್‌ಊದ್ؓ ಮೇಲೆ ಉಲ್ಲೇಖಿಸಲ್ಪಟ್ಟ ಸೂರ ಅನ್‌ಆಮಿನ 153ನೇ ಸೂಕ್ತವನ್ನು ಪಠಿಸಿದರು (ಮುಸ್ನದ್ ಅಹ್ಮದ್)

ಇಮಾಮ್ ಅಹ್ಮದ್‌ರವರು(ರಹಿಮಹುಲ್ಲಾಹ್) ಕೂಡ ಅನ್ನವ್ವಾಸ್ ಇಬ್ನ್ ಸಮನ್ ಹೇಳರುವುದಾಗಿ ಈ ರೀತಿ ಉಲ್ಲೇಖಿಸಿದ್ದಾರೆ. ಅಲ್ಲಾಹನ ಸಂದೇಶವಾಹಕರುﷺ ಹೇಳಿದರು, " ಅಲ್ಲಾಹನು ಋಜು ಮಾರ್ಗದ ಉದಾಹರಣೆಯೊಂದನ್ನು ನೀಡುತ್ತಾನೆ. ಆ ಮಾರ್ಗದ ಎರಡು ಬದಿಗಳಲ್ಲಿ ತೆರೆದ ಬಾಗಿಲುಗಳಿರುವ ಎರಡು ಗೋಡೆಗಳಿವೆ. ಬಾಗಿಲುಗಳಲ್ಲಿ ಪರದೆಗಳನ್ನು ಹಾಕಲಾಗಿದೆ. ಕರೆ ನೀಡುವವನೊಬ್ಬ ಮಾರ್ಗದಂಚಿನ ಪ್ರವೇಶ ದ್ವಾರದಲ್ಲಿ ನಿಂತು ಕರೆಯುತ್ತಿದ್ದಾನೆ. 'ಜನರೆ! ಬನ್ನಿರಿ, ನೀವೆಲ್ಲರೂ ಈ ನೇರ ಮಾರ್ಗದಲ್ಲಿ ಸೇರಿಕೊಳ್ಳಿರಿ ಹಾಗೂ ಛಿನ್ನ ಭಿನ್ನರಾಗದಿರಿ.' ಇನ್ನೊಬ್ಬ ಕರೆ ನೀಡುವಾತನು ಕೂಡ ಮಾರ್ಗದಂಚಿನಿಂದ ಕರೆ ನೀಡುತ್ತಿದ್ದಾನೆ. ವ್ಯಕ್ತಿಯೊಬ್ಬ ಆ ಬಾಗಿಲುಗಳ ಪರದೆಗಳಲ್ಲೊಂದನ್ನು ಸರಿಸಲು ಪ್ರಯತ್ನಿಸಿದಾಗ ಅವನು ಹೇಳುತ್ತಾನೆ, 'ನಿನಗೆ ನಾಶವಿರಲಿ! ನೀನದನ್ನು ತೆರೆಯಬೇಡ, ನೀನದನ್ನು ತೆರೆದರೆ ಅದರೊಳಗೆ ಪ್ರವೇಶಿಸುವಿ. ನೇರ (ಋಜು) ಮಾರ್ಗವೆಂದರೆ ಅದು ಇಸ್ಲಾಮ್ ಆಗಿದೆ. ಎರಡು ಗೋಡೆಗಳು ಅಲ್ಲಾಹನು ನಿಶ್ಚಯಿಸಿದ ಮಿತಿಗಳಾಗಿವೆ. ತೆರೆದ ಬಾಗಿಲುಗಳು ಅಲ್ಲಾಹನು ನಿಷೇಧಿಸಿದವುಗಳತ್ತ ಸಾಗಿಸುತ್ತವೆ. ಮಾರ್ಗದ ಪ್ರವೇಶ ದ್ವಾರದಲ್ಲಿ ನಿಂತು ಕರೆಯುವವನು ಎಂದರೆ ಅಲ್ಲಾಹನ ಗ್ರಂಥವಾಗಿದೆ (ಕುರ್‌ಆನ್). ಮತ್ತೊಂದು ಬದಿಯಂಚಿನಲ್ಲಿ ಕರೆಯುವವನು ಎಂದರೆ ಪ್ರತಿಯೊಬ್ಬನ ಹೃದಯದಲ್ಲಿರುವ ಅಲ್ಲಾಹನ ಬುದ್ಧಿವಾದ(ಎಚ್ಚರಿಕೆ)ವಾಗಿದೆ." (ತಿರ್ಮಿದಿ ಈ ಹದೀಸನ್ನು ಹಸನ್ ಎಂದಿದ್ದಾರೆ)

# 2 ಅಲ್ಲಾಹನಲ್ಲಿ ಅಭಯವನ್ನು ಯಾಚಿಸುವುದು

ಶೈತಾನ್ ಮತ್ತು ಆತನ ಕೆಡುಕುಗಳಿಂದ ಅಲ್ಲಾಹನಲ್ಲಿ ಅಭಯಯಾಚಿಸುವಂತೆ ಆತನ ಪವಿತ್ರ ಗ್ರಂಥದಲ್ಲಿ ಅಲ್ಲಾಹು ಉಪದೇಶಿಸಿದ್ದಾನೆ.

**"ಶೈತಾನನಿಂದ ಯಾವುದಾದರೂ ದುಷ್ಪ್ರೇರಣೆ ನಿನ್ನನ್ನು**
**ಬಾಧಿಸುತ್ತಿದೆಯೆಂದಾದರೆ ನೀನು ಅಲ್ಲಾಹನಲ್ಲಿ ಅಭಯವನ್ನು ಯಾಚಿಸು...."**
**(ಸೂರ ಅಲ್–ಅಅ್‌ರಾಫ್: 200)**

**"ನೀನು ಹೇಳು, ನನ್ನ ಪ್ರಭುವೇ**
**ಶಯಾತೀನ್‌ಗಳ ದುಭೋ೯ಧನೆಗಳಿಂದ (ಸಲಹೆಗಳಿಂದ)**
**ನಾನು ನಿನ್ನ ಅಭಯವನ್ನು ಯಾಚಿಸುತ್ತೇನೆ.**
**ಅವರು (ಶಯಾತೀನ್‌ಗಳು) ನನ್ನ ಬಳಿ**
**ಸನ್ನಿಹಿತರಾಗುವುದರಿಂದಲೂ**
**ನನ್ನ ಪ್ರಭುವೇ ನಾನು ನಿನ್ನ ಅಭಯವನ್ನು ಯಾಚಿಸುತ್ತೇನೆ."**
**(ಸೂರ ಅಲ್ ಮುಅ್‌ಮಿನೂನ್: 97, 98)**

ಇಮಾಮ್ ಇಬ್ನುಕಸೀರ್ (ರಹಿಮಹುಲ್ಲಾಹ್) ಬರೆಯುತ್ತಾರೆ. 'ಇಸ್ತಿಆದ' (ಅಭಯವನ್ನು ಯಾಚಿಸುವುದು) ಎಂಬುದರರ್ಥ; 'ಶಪಿಸಲ್ಪಟ್ಟ ಶೈತಾನನಿಂದ ನಾನು ಅಲ್ಲಾಹನ ಅಭಯವನ್ನು ಯಾಚಿಸುತ್ತೇನೆ' ಎನ್ನುವುದಾಗಿದೆ. ಹೀಗೆ (ಈ ಮೂಲಕ) ನನ್ನ ಧಾರ್ಮಿಕ ಹಾಗೂ ಲೌಕಿಕ ಕಾರ್ಯಗಳಲ್ಲಿ ಪ್ರಭಾವ ಬೀರುವುದರಿಂದ ಅಥವಾ ಆಜ್ಞಾಪಿಸಲ್ಪಟ್ಟ ಕಾರ್ಯಗಳಲ್ಲಿ ನಾನು ದೃಢವಾಗಿ ನಿಲ್ಲಲು ಅಡ್ಡಿಪಡಿಸುವುದರಿಂದ ಅಥವಾ ನನಗೆ ನಿರೋಧಿಸಲ್ಪಟ್ಟ ಕಾರ್ಯಗಳತ್ತ ನನ್ನನ್ನು ಆಕರ್ಷಿಸುವುದರಿಂದ ಆತ (ಶೈತಾನ್) ತಡೆಯಲ್ಪಡಲಿ.'

ನಿಶ್ಚಯವಾಗಿಯೂ, ಶೈತಾನನ ಕೆಡುಕುಗಳು ಆದಮರ ಸಂತತಿಯನ್ನು ಸ್ಪರ್ಶಿಸದಂತೆ ತಡೆಯುವ ಸಾಮರ್ಥ್ಯ ಕೇವಲ ಅಲ್ಲಾಹನಿಗೆ ಮಾತ್ರವಿದೆ. ಈ ಕಾರಣದಿಂದಲೇ ಅಲ್ಲಾಹನು ಮನುಷ್ಯರ ಪೈಕಿ ಕೆಟ್ಟ ಪ್ರವೃತ್ತಿಯುಳ್ಳವರೊಂದಿಗೆ ಸಹನೆ ಹಾಗೂ ಸೌಜನ್ಯವಾಗಿ ವರ್ತಿಸಲು ನಮಗೆ ಅನುಮತಿ ನೀಡಿದ್ದಾನೆ. ಹೀಗೆ ನಮ್ಮ ಸೌಮ್ಯ ಸ್ವಭಾವವು ಕೆಡುಕಿನಲ್ಲಿ ತೃಪ್ತಿಯನ್ನು ಪಡೆಯುತ್ತಿದ್ದ ಒಬ್ಬನನ್ನು ಪ್ರಾಯಶಃ ಆ ಕೆಡುಕಿನ ಗೊಡವೆಗೆ ಹೋಗದಂತೆ ಮಾಡಲು ಕಾರಣವಾದೀತು.

ಹೇಗಿದ್ದರೂ, ಶೈತಾನನ ಕೆಡುಕಿನಿಂದ ಅಲ್ಲಾಹನ ಅಭಯವನ್ನು ಯಾಚಿಸುವಂತೆ ಅಲ್ಲಾಹು ನಮ್ಮಲ್ಲಿ ಆಗ್ರಹಿಸುತ್ತಾನೆ. ಏಕೆಂದರೆ ಆತ (ಶೈತಾನ್) ಯಾವುದೇ ರೀತಿಯ ಲಂಚವನ್ನು ಸ್ವೀಕರಿಸುವವನೋ ಅಥವಾ ಯಾವುದೇ ತರಹದ ಸೌಜನ್ಯ ಮತ್ತು ದಯಾಪರತೆಯನ್ನು ತೋರಿಸುವವನೋ ಅಲ್ಲ. ಆತ ಅಪ್ಪಟ ದುಷ್ಟನಾಗಿದ್ದಾನೆ. ಹೀಗಾಗಿ ಯಾರು ಶೈತಾನನನ್ನು ಸೃಷ್ಟಿಸಿದ್ದಾನೋ ಆತನೊಬ್ಬನೇ ಶೈತಾನನ ಕೆಡುಕುಗಳನ್ನು ತಡೆಯಬಲ್ಲನು. (ತಫ್ಸೀರ್ ಇಬ್ನು ಕಸೀರ್ ನೋಡಿ)

ನಿಶ್ಚಿತ ಸಮಯ, ಸಂದರ್ಭಗಳಲ್ಲಿ ಅಲ್ಲಾಹನಲ್ಲಿ ಅಭಯವನ್ನು ಯಾಚಿಸುವಂತೆ ಇಸ್ಲಾಮ್ ನಮ್ಮನ್ನು ಭೋಧಿಸುತ್ತದೆ. ಮುಂದಿನ ಪುಟಗಳಲ್ಲಿ ಅಂತಹ ಕೆಲವನ್ನು ಉಲ್ಲೇಖಿಸಲಾಗಿವೆ.

# ದಿನ ಅಥವಾ ರಾತ್ರಿಯ ಯಾವುದೇ ಸಮಯದಲ್ಲೂ ಶೈತಾನನ್ನು ದೂರವಿಡುವುದು

**ಅಲ್ಲಾಹನ ಸಂದೇಶವಾಹಕರುﷺ ಹೇಳಿದರು, "ಯಾರಾದರೂ ಬೆಳಗ್ಗೆ ಈ ರೀತಿ ಹೇಳಿದರೆ;**

﴿لاإِلَهَ إِلَّا اللَّهُ وَحْدَهُ لَا شَرِيكَ لَهُ.
لَهُ الْمُلْكُ وَلَهُ الْحَمْدُ
وَهُوَ عَلَى كُلِّ شَيْءٍ قَدِيرٌ﴾

**"ಏಕೈಕನಾದ ಅಲ್ಲಾಹನಲ್ಲದೆ ಆರಾಧನೆಗರ್ಹರಾದವರು ಯಾರೂ ಇಲ್ಲ. ಆತನಿಗೆ ಯಾವುದೇ ಪಾಲುಗಾರರಿಲ್ಲ. ಅಧಿಪತ್ಯವು ಆತನದ್ದಾಗಿದೆ, ಸರ್ವ ಪ್ರಶಂಸೆಯೂ ಆತನಿಗಾಗಿದೆ.ಅವನು ಸರ್ವಕಾರ್ಯಗಳಲ್ಲೂ ಸರ್ವ ಸಮರ್ಥನಾಗಿದ್ದಾನೆ."**
**ಈ ರೀತಿ ಹೇಳುವವನು ನಿಶ್ಚಯವಾಗಿಯೂ ಇಸ್ಮಾಯೀಲರ ಮಕ್ಕಳಿಂದ ಹತ್ತು ಗುಲಾಮರನ್ನು ವಿಮೋಚನೆಗೊಳಿಸಿದ ಪ್ರತಿಫಲವನ್ನು ಪಡೆಯುವನು ಮತ್ತು ಅವನ ಹತ್ತು ಪಾಪಗಳನ್ನು ಮನ್ನಿಸಲಾಗುವುದು ಮತ್ತು ಅವನಿಗೆ ಹತ್ತು ದರ್ಜೆಯನ್ನು ಉನ್ನತೀಕರಿಸಲಾಗುತ್ತದೆ, ಹಾಗೂ ಸಾಯಂಕಾಲದವರೆಗೂ ಶೈತಾನನು ಆತನಿಂದ ಹಿಮ್ಮೆಟ್ಟಿಸಲ್ಪಟ್ಟು ಅವನು ಸುರಕ್ಷಿತನಾಗಿರುವನು. ಸಮಾನ ರೀತಿಯಲ್ಲಿ (ಈ ಪ್ರಾರ್ಥನೆಯನ್ನು) ಆತ ಸಾಯಂಕಾಲ ಪಠಿಸಿದರೆ ಬೆಳಗ್ಗಿನವರೆಗೂ (ಶೈತಾನನ ಕಾಟದಿಂದ) ರಕ್ಷಿಸಲ್ಪಡುತ್ತಾನೆ." (ಸಹೀಹ್ ಇಬ್ನು ಮಾಜ)**

# ಮನೆಯಿಂದ ಶೈತಾನನ್ನು ದೂರವಿಡುವುದು

**ಅಬೂಹುರೈರಾರವರಿಂದ ವರದಿ; ಪ್ರವಾದಿ ﷺ ಹೇಳಿದರು, "ನಿಮ್ಮ ಮನೆಯನ್ನು ನೀವು ದಫನ ಭೂಮಿಯನ್ನಾಗಿ ಮಾಡದಿರಿ, ನಿಶ್ಚಯವಾಗಿಯೂ ಯಾವ ಮನೆಯಲ್ಲಿ ಅಲ್‌ಬಕರಾ ಸೂರವನ್ನು (ಕುರ್‌ಆನಿನ ಎರಡನೆಯ ಅಧ್ಯಾಯ) ಪಠಿಸಲಾಗುತ್ತದೆಯೋ ಆ ಮನೆಯಿಂದ ಶೈತಾನನು ಓಡಿ ಹೋಗುವನು." (ಸಹೀಹ್ ಮುಸ್ಲಿಮ್)**

# ಕೋಪೋದ್ರೇಕದ ವೇಳೆಯಲ್ಲಿ ಶೈತಾನನ್ನು ದೂರವಿಡುವುದು

**ಸುಲೈಮಾನ್ ಇಬ್ನ್ ಸರ್ದ್ ಹೇಳಿದರು, "ನಾನು ಪ್ರವಾದಿ ಮುಹಮ್ಮದ್ ರವರೊಂದಿಗೆ ಕುಳಿತುಕೊಂಡಿದ್ದಾಗ ಇಬ್ಬರು ವ್ಯಕ್ತಿಗಳು ಪರಸ್ಪರ ದೂಷಿಸಿಕೊಳ್ಳುತ್ತಿದ್ದರು. ಅವರಲ್ಲಿ ಒಬ್ಬನ ಮುಖವು (ಕೋಪೋದ್ರೇಕದಿಂದಾಗಿ) ಕೆಂಪೇರಿತ್ತು ಮತ್ತು ಆತನ ನರಗಳು ಊದಿಕೊಂಡಿತ್ತು. ಅಲ್ಲಾಹನ ಸಂದೇಶವಾಹಕರು ಹೇಳಿದರು, 'ನಾನು ನುಡಿ(ಪ್ರಾರ್ಥನೆ)ಯೊಂದನ್ನು ತಿಳಿದಿದ್ದೇನೆ. ಅದನ್ನು ಆತ (ಕೋಪಗೊಂಡವನು) ಹೇಳಿದನೆಂದಾದರೆ ಆತನ ಕೋಪವು ಆತನನ್ನು ಬಿಟ್ಟಗಲುವುದು. ಆತ ಹೇಳಲಿ,**

﴿أَعُوْذُ بِاللَّهِ مِنَ الشَّيْطَانِ الرَّجِيمِ﴾

**"ಶಾಪಗ್ರಸ್ತನಾದ ಶೈತಾನನಿಂದ ನಾನು ಅಲ್ಲಾಹನಲ್ಲಿ ಅಭಯವನ್ನು ಯಾಚಿಸುತ್ತೇನೆ"**
**(ಮುತ್ತಫಕುನ್ ಅಲೈಹಿ)**

# ಆಹಾರ, ಪಾನೀಯಗಳನ್ನು ಸೇವಿಸುವ ಹಾಗೂ ಮನೆಯೊಳಗೆ ಪ್ರವೇಶಿಸುವ ಮುಂಚೆ ಶೈತಾನನ್ನು ತೊಲಗಿಸುವುದು

**ಜಾಬಿರ್ ಹೇಳಿದರು, "ಪ್ರವಾದಿವರ್ಯರು ಹೇಳುತ್ತಿರುವುದಾಗಿ ನಾನು ಕೇಳಿದ್ದೇನೆ. ವ್ಯಕ್ತಿಯೊಬ್ಬ ತನ್ನ ಮನೆಯನ್ನು ಪ್ರವೇಶಿಸುವಾಗ ಅಲ್ಲಾಹನನ್ನು ಜ್ಞಾಪಿಸಿಕೊಂಡನೆಂದಾದರೆ ಆತ ಪ್ರವೇಶಿಸುವಾಗ ಹಾಗೂ ಆಹಾರ ಸೇವಿಸುವ ಮೊದಲು ಶೈತಾನನು (ಸ್ವಯಂ) ಈ ರೀತಿ ಹೇಳಿಕೊಳ್ಳುತ್ತಾನೆ. 'ರಾತ್ರಿ ತಂಗಲು ನಿನಗೆ ಇಲ್ಲಿ ಯಾವುದೇ ಸ್ಥಳಾವಕಾಶವಿಲ್ಲ ಮತ್ತು ನಿನಗೆ ರಾತ್ರಿ ಭೋಜನವೂ ಇಲ್ಲ.' ಆತ ಮನೆಯೊಳಗೆ ಪ್ರವೇಶಿಸುವಾಗ ಅಲ್ಲಾಹನನ್ನು ಜ್ಞಾಪಿಸಿಕೊಳ್ಳದಿದ್ದಲ್ಲಿ ಶೈತಾನನು (ಸ್ವಯಂ) ಹೇಳಿಕೊಳ್ಳುತ್ತಾನೆ, 'ರಾತ್ರಿ ಉಳಕೊಳ್ಳಲು ನಿನಗೆ ಸ್ಥಳವೊಂದು ಲಭ್ಯವಾಗಿದೆ' ಮತ್ತು ಆತ ತನ್ನ ಆಹಾರ ಸೇವನೆಯ ಸಮಯದಲ್ಲಿ ಅಲ್ಲಾಹನನ್ನು ಮರೆತನೆಂದಾದರೆ ಶೈತಾನನು (ಸ್ವಯಂ) ಹೇಳಿಕೊಳ್ಳುತ್ತಾನೆ, 'ನಿನಗೆ ತಂಗಿಕೊಳ್ಳಲು ಸ್ಥಳ ಲಭ್ಯವಾಗಿದೆ ಮತ್ತು ರಾತ್ರಿಯಲ್ಲಿ ಒಂದಿಷ್ಟು ಆಹಾರವೂ." (ಸಹೀಹ್ ಮುಸ್ಲಿಮ್)**

ಮನೆಯ ಬಾಗಿಲನ್ನು ಭದ್ರಪಡಿಸುವಾಗ ಹಾಗೂ ಪಾತ್ರೆಗಳನ್ನು ಮುಚ್ಚುವಾಗ ಅಲ್ಲಾಹನ ನಾಮವನ್ನು ಉಚ್ಚರಿಸುವ ಮೂಲಕ ನಮ್ಮ ವಿಪುಲತೆಯನ್ನು (ಸಮೃದ್ಧಿ) ಕಾಪಾಡಿಕೊಳ್ಳಬೇಕೆಂದು ಅಲ್ಲಾಹನ ಸಂದೇಶವಾಹಕರು ﷺ ನಮಗೆ ಆಜ್ಞಾಪಿಸಿದ್ದಾರೆ. ಸಹೀಹ್ ಮುಸ್ಲಿಮ್‌ನಲ್ಲಿ ಜಾಬಿರ್ ಇಬ್ನ್ ಅಬ್ದುಲ್ಲಾರವರಿಂದ ﷺ ವರದಿಯಾಗಿದೆ. ಅಲ್ಲಾಹನ ಪ್ರವಾದಿ ﷺ ಹೇಳಿದರು, "ಅಲ್ಲಾಹನ ನಾಮದೊಂದಿಗೆ ಬಾಗಿಲನ್ನು ಭದ್ರಪಡಿಸಿಕೊಳ್ಳಿರಿ. (ಈ ರೀತಿ) ಭದ್ರಪಡಿಸಿದ ಬಾಗಿಲನ್ನು ಶೈತಾನನು ತೆರೆಯಲಾರ. ಅಲ್ಲಾಹನ ನಾಮದೊಂದಿಗೆ ನಿಮ್ಮ ನೀರಿನ ಹೂಜಿಯನ್ನು ಕಟ್ಟಿರಿ ಮತ್ತು ನಿಮ್ಮ ಪಾತ್ರೆಯನ್ನು ಅಲ್ಲಾಹನ ನಾಮದೊಂದಿಗೆ ಮುಚ್ಚಿರಿ, ಅದರ (ಆ ಪಾತ್ರೆಯ) ಮೇಲೆ ನೀವು ಏನಾದರೊಂದನ್ನು ಅಡ್ಡಲಾಗಿ ಒರಗಿಸಿಡುವುದಾದರೂ ಕೂಡ, ಹಾಗೂ ದೀಪಗಳನ್ನು ನಂದಿಸಿ." (ಸಹೀಹ್ ಮುಸ್ಲಿಮ್ 3/1594 ನಂಬ್ರ 2012)

ಒಬ್ಬನು ನೀರು ಕುಡಿಯುವಾಗ ಕುಳಿತುಕೊಂಡು ಕುಡಿಯಬೇಕಾಗಿದೆ. ಏಕೆಂದರೆ ನಿಂತುಕೊಂಡು ನೀರು ಕುಡಿಯುವವನ ಸಂಗಡ ಶೈತಾನನೂ ಕುಡಿಯುತ್ತಾನೆ. ಅಬೂ ಹುರೈರಾರವರಿಂದ ﷺ ವರದಿ. ನಿಂತು ನೀರು ಕುಡಿಯುತ್ತಿದ್ದ ಒಬ್ಬನನ್ನು ನೋಡಿದಾಗ ಪ್ರವಾದಿಯವರು ﷺ ಆತನಲ್ಲಿ "ಹಾ" (ಅಸಮಾಧಾನ ಸೂಚಕವಾಗಿ) ಎಂದು ಉದ್ಗರಿಸಿದರು. ಆ ವ್ಯಕ್ತಿ ಕೇಳಿದರು 'ಏನು ವಿಷಯ?' ಪ್ರವಾದಿ ﷺ ಹೇಳಿದರು, 'ಬೆಕ್ಕೊಂದು ನಿನ್ನೊಂದಿಗೆ ಸೇರಿ ಕುಡಿಯುವುದನ್ನು ನೀನು ಇಷ್ಟಪಡುತ್ತಿಯಾ?' ಆತ 'ಇಲ್ಲ' ಎಂದು ಉತ್ತರಿಸಿದನು. ಅವರು ﷺ ಹೇಳಿದರು, 'ಅದಕ್ಕಿಂತಲೂ ನಿಕೃಷ್ಟವಾದವನು ನಿನ್ನೊಂದಿಗೆ ಸೇರಿ (ನೀರು) ಕುಡಿಯುತ್ತಿದ್ದಾನೆ, ಅವನು ಶೈತಾನನಾಗಿದ್ದಾನೆ." (ಅಸ್ಸಹೀಹ್ 1/175)

"ನೀನು ಆಹಾರ ಸೇವಿಸಲನುವಾದಾಗ ಈ ರೀತಿ ಹೇಳಬೇಕಾಗಿದೆ,

﴿بِسْمِ اللّٰهِ﴾

'ಅಲ್ಲಾಹನ ನಾಮದೊಂದಿಗೆ (ನಾನು ಪ್ರಾರಂಭಿಸುತ್ತಿದ್ದೇನೆ)......'

ಮತ್ತು ಪ್ರಾರಂಭದಲ್ಲಿ ಇದನ್ನು ಹೇಳಲು ಮರೆತುಬಿಟ್ಟರೆ (ನೆನಪು ಬಂದಾಗ) ನೀನು ಈ ರೀತಿ ಹೇಳಬೇಕಾಗಿದೆ,

﴿بِسْمِ اللّٰهِ أَوَّلَهُ وَآخِرَهُ﴾

"ಪ್ರಾರಂಭ ಹಾಗೂ ಅಂತ್ಯ ಅಲ್ಲಾಹನ ನಾಮದೊಂದಿಗಾಗಿದೆ" (ಸಹೀಹ್ ಅತ್ತಿರ್ಮಿದಿ 2/167) ನೋಡಿ)

# ಶೈತಾನನಿಗಾಗಿ ಆಹಾರವನ್ನು ಉಳಿಸಬೇಡಿ

**ಜಾಬಿರ್رضي الله عنه ಹೇಳಿದರು, ‘ಪ್ರವಾದಿ ﷺ ಹೇಳಿರುವುದಾಗಿ ನಾನು ಕೇಳಿರುವೆನು. “ನಿಮ್ಮಲ್ಲೊರ್ವನು ಮಾಡುವ ಪ್ರತಿಯೊಂದು ಕಾರ್ಯದಲ್ಲೂ ಶೈತಾನನು ಸಂಗಡವಿರುತ್ತಾನೆ. ಅವನು ಆಹಾರವನ್ನು ಸೇವಿಸುತ್ತಿರುವ ಸಮಯದಲ್ಲೂ ಕೂಡ. ಆದುದರಿಂದ ತನ್ನ ಕೈಯಿಂದ ಆಹಾರದ ತುಣುಕೊಂದು ಜಾರಿ ಕೆಳಗೆ ಬಿದ್ದು ಬಿಟ್ಟರೆ ಅದಕ್ಕೆ ಹತ್ತಿಕೊಂಡಿರುವ ಕೊಳಕನ್ನು ಶುದ್ಧೀಕರಿಸಿ ಅದನ್ನಾತ ಸೇವಿಸಲಿ, ಶೈತಾನನಿಗಾಗಿ ಅದನ್ನು ಬಿಟ್ಟು ಬಿಡದಿರಲಿ. ಆಹಾರ ಸೇವನೆಯನ್ನು ಕೊನೆಗೊಳಿಸುತ್ತಾ ಆತ ತನ್ನ ಕೈ ಬೆರಳುಗಳನ್ನು ನೆಕ್ಕಿಕೊಳ್ಳಲಿ. ಆತನ ಆಹಾರದ ಯಾವ ಭಾಗದಲ್ಲಿ ಅನುಗ್ರಹವಿದೆಯೆಂದು ಆತನಿಗೆ ತಿಳಿದಿಲ್ಲ.”(ಸಹೀಹ್ ಮುಸ್ಲಿಮ್)**

## ಹಾಸಿಗೆಗೆ ತೆರಳುವ ಮುಂಚೆ ಶೈತಾನನ್ನು ದೂರವಿಡುವುದು

**ಪ್ರವಾದಿﷺ ಹೇಳಿದರು, "ನೀವು ನಿದ್ರಿಸಲನುವಾದಾಗ ಕುರ್‌ಆನ್‌ನಿಂದ 'ಆಯತುಲ್‌ಕುರ್ಸಿ'ಯನ್ನು (ಸೂರ ಅಲ್‌ಬಕರಾದ 255ನೇ ಸೂಕ್ತ) ಅದರ ಕೊನೆಯವರೆಗೂ ಪಠಿಸಿರಿ. ಇದರಿಂದಾಗಿ ಅಲ್ಲಾಹನ ಸಂರಕ್ಷಣೆ ನಿಮ್ಮ ಮೇಲೆ ಉಳಿದುಕೊಳ್ಳುತ್ತದೆ ಮತ್ತು ಶೈತಾನನು ಬೆಳಗ್ಗಿನವರೆಗೂ ನಿಮ್ಮನ್ನು ಸಮೀಪಿಸಲಾರನು." (ಸಹೀಹ್ ಅಲ್ ಬುಖಾರಿ)**

## ದುಃಸ್ವಪ್ನವನ್ನು ಕಂಡಾಗ ಶೈತಾನನ್ನು ದೂರವಿಡುವುದು

**ಅಲ್ಲಾಹನ ಪ್ರವಾದಿಯವರು ﷺ ನಮಗೆ ತಿಳಿಸಿ ಕೊಟ್ಟಿದ್ದಾರೆ, "ಕನಸುಗಳು ಮೂರು ವಿಧಗಳಲ್ಲಿರುತ್ತವೆ. ಪರಮ ದಯಾಳುವಿನ (ಅಲ್ಲಾಹನ) ಕಡೆಯಿಂದ ಹರ್ಷದಾಯಕ ಸುದ್ದಿಯ ರೂಪದಲ್ಲಿ, ಒಬ್ಬನ ಸ್ವಂತದಿಂದ ಬರುವಂತಹದ್ದು ಮತ್ತು ಶೈತಾನನ ಕಡೆಯಿಂದ (ದುಃಸ್ವಪ್ನ) ಭಯಭೀತಗೊಳಿಸುವಂತಹದ್ದು." (ಸಹೀಹ್ ಇಬ್ನ್ ಮಾಜ 1/340 ನಂಬ್ರ 3154)**

**ಆದುದರಿಂದ, "ನಿಮ್ಮಲ್ಲಾರಾದರೂ ಅವನು ಇಷ್ಟ ಪಡುವಂತಹ ಕನಸನ್ನು ಕಂಡರೆ ಅದು ಅಲ್ಲಾಹನ ಕಡೆಯಿಂದಾಗಿದೆ ಮತ್ತು ಅದಕ್ಕಾಗಿ ಆತ ಅಲ್ಲಾಹನನ್ನು ಸ್ತುತಿಸಲಿ ಹಾಗೂ ಈ ಕುರಿತು ಬಾಕಿಯವರಿಗೆ (ತನ್ನ ಸಮೀಪಸ್ಥರಿಗೆ) ತಿಳಿಸಲಿ. ಇದಕ್ಕೆ ಹೊರತಾಗಿ ಆತನಿಗೆ ಅನಿಷ್ಟವಾದ ಕನಸನ್ನೇನಾದರೂ ಆತ ಕಂಡರೆ ಅದು ಶೈತಾನನ ಕಡೆಯಿಂದಾಗಿರುತ್ತದೆ. ಆದುದರಿಂದ, ಅದರ ಕೆಡುಕಿನಿಂದ ಆತ ಅಲ್ಲಾಹನ ಅಭಯವನ್ನು ಯಾಚಿಸಲಿ ಮತ್ತು ಈ ಕುರಿತು ಯಾರೊಂದಿಗೂ ಉಲ್ಲೇಖಿಸದಿರಲಿ. ಅದು ಆತನಿಗೆ ಯಾವುದೇ ಹಾನಿಯುಂಟು ಮಾಡದಿರಲಿಕ್ಕಾಗಿ." (ಸಹೀಹ್ ಅಲ್ ಬುಖಾರಿ)**

**ಅಬೂಸಲಮ رضي الله عنه ಹೇಳಿದರು. "ಅಬೂಕತಾದರವರು رضي الله عنه ಈ ರೀತಿ ಹೇಳುವುದನ್ನು ನಾನು ಕೇಳುವವರರಗೂ ನನಗೆ ಕಾಣುತ್ತಿದ್ದ ಕನಸುಗಳು ನನ್ನನ್ನು ವ್ಯಾಕುಲತೆಗೀಡು ಮಾಡಿದ್ದುವು. ಅವರು (ಅಬೂಕತಾದ) ಹೇಳಿದರು, 'ನಾನು ಕಾಣುತ್ತಿದ್ದ ಕನಸುಗಳಿಂದಾಗಿ ಅಸ್ವಸ್ಥಗೊಳ್ಳುತ್ತಿದ್ದೆ. ಪ್ರವಾದಿವರ್ಯರಿಂದﷺ ನಾನು ಈ ರೀತಿ ಕೇಳುವವರೆಗೂ.' ಅಲ್ಲಾಹನ ಸಂದೇಶವಾಹಕರುﷺ ಹೇಳಿದರು. 'ಉತ್ತಮವಾದಂತಹ ಕನಸುಗಳು ಅಲ್ಲಾಹನ ಕಡೆಯಿಂದಾಗಿದೆ. ನಿಮ್ಮಲ್ಲಿ ಯಾರಾದರೊಬ್ಬನು (ಕನಸಿನಲ್ಲಿ)**

ಅವನಿಗಿಷ್ಟವಿರುವುದನ್ನು ಕಂಡರೆ ಅದನ್ನು (ಅದರ ಕುರಿತು) ತನಗೆ ಪ್ರೀತಿಪಾತ್ರರಾದವರೊಂದಿಗೆ ಹೊರತು ಬೇರೆ ಯಾರೊಂದಿಗೂ ತಿಳಿಸದಿರಲಿ. ಇನ್ನಾತ ತಾನು ಇಷ್ಟಪಡದ(ಕನಸ)ನ್ನು ಕಂಡರೆ ಅವನು ಆ ವಿಚಾರವನ್ನು ಯಾರಿಗೂ ಬಹಿರಂಗಪಡಿಸದಿರಲಿ. ಅವನು ತನ್ನ ಎಡ ಭಾಗಕ್ಕೆ ಮೂರು ಬಾರಿ (ಹಗುರವಾಗಿ ಒಣರೂಪದಲ್ಲಿ) ಉಗುಳಲಿ ಮತ್ತು ಶಾಪಗ್ರಸ್ತನಾದ ಶೈತಾನನಿಂದ ಹಾಗೂ ತಾನು ಏನನ್ನು ದರ್ಶಿಸಿದನೋ ಅದರ ಕೆಡುಕಿನಿಂದ ಅಲ್ಲಾಹನ ಅಭಯವನ್ನು ಯಾಚಿಸಲಿ. ಅದು ಆತನಿಗೆ ಹಾನಿಯನ್ನುಂಟು ಮಾಡಲಾರದು." (ಸಹೀಹ್ ಮುಸ್ಲಿಂ 4/1772 ನೋಡಿ)

## ಪತ್ನಿಯನ್ನು ಸಮೀಪಿಸುವಾಗ ಶೈತಾನನ್ನು ದೂರವಿಡುವುದು

**ಪ್ರವಾದಿವರ್ಯ ﷺ ಹೇಳಿರುವುದಾಗಿ ಇಬ್ನ್ ಅಬ್ಬಾಸ್ ؓ ವರದಿ ಮಾಡಿರುತ್ತಾರೆ. "ಒಬ್ಬಾತ (ಸಂಸರ್ಗದಲ್ಲೇರ್ಪಡಲು) ತನ್ನ ಪತ್ನಿಯನ್ನು ಸಮೀಪಿಸುವಾಗ ಈ ರೀತಿ ಹೇಳಿದನೆಂದಾದರೆ,**

﴿بِسْمِ اللَّهِ، اللَّهُمَّ جَنِّبْنَا الشَّيْطَانَ
وَجَنِّبِ الشَّيْطَانَ مَا رَزَقْتَنَا﴾

**"ಅಲ್ಲಾಹನ ನಾಮದಿಂದ, ಓ ಅಲ್ಲಾಹ್ ಶೈತಾನನ್ನು ನಮ್ಮಿಂದ ದೂರವಿಡು ಮತ್ತು ನಮಗೆ ನೀನು ನೀಡಿದಂತಹ ಅನುಗ್ರಹದಿಂದಲೂ ಶೈತಾನನ್ನು ದೂರವಿಡು."**

**ಅನಂತರದ ಫಲಿತಾಂಶವೆಂಬಂತೆ ಅವರಿಗೆ (ಆ ಸಮ್ಮಿಲನದಲ್ಲಿ) ಮಗುವೊಂದು ವಿಧಿಸಲ್ಪಟ್ಟರೆ ಶೈತಾನನು ಅದಕ್ಕೆ (ಸಂತತಿಗೆ) ಯಾವುದೇ ಹಾನಿಯನ್ನುಂಟು ಮಾಡಬಲ್ಲವನಲ್ಲ."(ಮುತ್ತಫಕುನ್ ಅಲೈಹಿ)**

# ಶೌಚಾಲಯ ಪ್ರವೇಶಿಸುವ ಮುನ್ನ ಶೈತಾನನ್ನು ತೊಲಗಿಸುವುದು

**ಝೂಇದ್ ಇಬ್ನ್ ಅರ್ಕಮ್‌ರವರು ವರದಿ ಮಾಡಿರುತ್ತಾರೆ, ಪ್ರವಾದಿ ﷺ ಹೇಳಿದರು, "ಪಿಶಾಚಿಗಳು ವಾಸಿಸಲ್ಪಡುವಂತಹ ಸ್ಥಳಗಳಾಗಿವೆ ಇವು (ಶೌಚಾಲಯ). ಆದುದರಿಂದ ನಿಮ್ಮಲ್ಲಾದರೂ ಶೌಚಾಲಯವನ್ನು ಪ್ರವೇಶಿಸವುದಿದ್ದರೆ ಆತ ಈ ರೀತಿ ಹೇಳಲಿ,**

﴿اللَّهُمَّ إِنِّي أَعُوْذُ بِكَ مِنَ الْخُبُثِ وَالْخَبَائِثِ﴾

**"ಓ ಅಲ್ಲಾಹ್, ಗಂಡು ಪಿಶಾಚಿಗಳಿಂದಲೂ ಹೆಣ್ಣು ಪಿಶಾಚಿಗಳಿಂದಲೂ ನಾನು ನಿನ್ನ ಅಭಯವನ್ನು ಯಾಚಿಸುತ್ತೇನೆ".**
**{ಸಹೀಹ್ ಸುನನ್ ಅಬೂದಾವೂದ್ 1/4, ನಂಬ್ರ 4}**

# ಮಸೀದಿಗೆ ಪ್ರವೇಶಿಸುವ

## ಮುಂಚೆ ಶೈತಾನನ್ನು ಚದುರಿಸುವುದು

**ಅಬ್ದುಲ್ಲಾ ಇಬ್ನ್ ಉಮರ್ ಹೇಳಿದರು, "ಪ್ರವಾದಿ ﷺ ಮಸೀದಿಯೊಳಗೆ ಪ್ರವೇಶಿಸುವಾಗ ಈ ರೀತಿ ಹೇಳುತ್ತಿದ್ದರು,**

﴿أَعُوْذُ بِاللَّهِ الْعَظِيمِ وَبِوَجْهِهِ الْكَرِيمِ
وَسُلْطَانِهِ الْقَدِيمِ مِنَ الشَّيْطَانِ الرَّجِيمِ﴾

**"ಉನ್ನತವಾದ ಮುಖ ಹಾಗೂ ಶಾಶ್ವತವಾದ ಸತ್ತೆಯನ್ನು ಹೊಂದಿರುವ ಸರ್ವಶಕ್ತನಾದ ಅಲ್ಲಾಹನಲ್ಲಿ ನಾನು ಶಾಪಗ್ರಸ್ತನಾದ ಶೈತಾನ್‌ನಿಂದ (ಆತನ ಕೆಡುಕಿನಿಂದ) ಅಭಯವನ್ನು ಯಾಚಿಸುತ್ತೇನೆ". ನಂತರ ಅವರು ﷺ ಹೇಳಿದರು, "ಈ ರೀತಿ (ವ್ಯಕ್ತಿಯೊಬ್ಬ) ಹೇಳಿದರೆ ಶೈತಾನನು ಹೇಳುತ್ತಾನೆ, 'ಆತನು ನನ್ನಿಂದ ಪೂರ್ಣ ದಿವಸವೊಂದರ ಅವಧಿಯವರೆಗೆ ಸಂರಕ್ಷಿಸಲ್ಪಟ್ಟಿದ್ದಾನೆ."**
**(ಸಹೀಹ್ ಅಬೂದಾವೂದ್)**

# ನಮಾಝ್‌ನ ವೇಳೆಯಲ್ಲಿ ಶೈತಾನನ್ನು ದೂರವಿಡುವುದು

**ಉಸ್ಮಾನ್ ಬಿನ್ ಅಬಿಲ್‌ಆಸ್ﷺ ಪ್ರವಾದಿಯವರﷺ ಸನಿಹಕ್ಕೆ ಬಂದು ಹೇಳಿದರು, 'ನಾನು ಮತ್ತು ನನ್ನ ನಮಾಝ್ ಹಾಗೂ ಕುರ್‌ಆನ್ ಪಾರಾಯಣದ ಮಧ್ಯೆ ಶೈತಾನ್ ಬರುತ್ತಿದ್ದಾನೆ ಮತ್ತು ನನ್ನನ್ನು ಗೊಂದಲಕ್ಕೀಡು ಮಾಡುತ್ತಿದ್ದಾನೆ.' ಇದನ್ನು ಕೇಳಿ ಪ್ರವಾದಿವರ್ಯﷺ ಹೇಳಿದರು, "ಅದು 'ಖಿಂಝುಬ್' ಎನ್ನುವ ಪಿಶಾಚಿಯಾಗಿದೆ. ನಿಮಗದು ಗಮನಕ್ಕೆ ಬಂದರೆ ಆತನಿಂದ ನೀವು ಅಲ್ಲಾಹನಲ್ಲಿ ಅಭಯವನ್ನು ಯಾಚಿಸಿರಿ ಮತ್ತು ಹಗುರವಾಗಿ (ಒಣ ರೂಪದಲ್ಲಿ) ನಿಮ್ಮ ಎಡಭಾಗಕ್ಕೆ ಮೂರು ಸಲ ಉಗುಳಿರಿ." ಉಸ್ಮಾನ್ ಬಿನ್ ಅಬಿಲ್‌ಆಸ್ﷺ ಹೇಳುತ್ತಾರೆ, 'ನಾನು ಹಾಗೆಯೇ ಮಾಡಿದೆ. ಅಲ್ಲಾಹನು ಅವನನ್ನು (ಶೈತಾನನ್ನು) ನನ್ನಿಂದ ದೂರೀಕರಿಸಿದನು.' (ಸಹೀಹ್ ಮುಸ್ಲಿಂ)**

## ಪಂಕ್ತಿಗಳನ್ನು ನೇರಗೊಳಿಸಿ. ನಿಮ್ಮ ಮಧ್ಯೆ ನುಸುಳಲು ಶೈತಾನನಿಗೆ ಅನುವು ಮಾಡಿಕೊಡಬೇಡಿ.

**ಪಂಕ್ತಿಗಳ ಮಧ್ಯೆಯಿರುವ ಅಂತರಗಳ ನಡುವೆ ಶೈತಾನನು ಪ್ರವೇಶಿಸುತ್ತಾನೆ ಮತ್ತು ಮುಸ್ಲಿಮರ ನಡುವೆ ವೈರತ್ಯವನ್ನು ಹುಟ್ಟು ಹಾಕುತ್ತಾನೆ. ಅಲ್ಲಾಹನ ಸಂದೇಶವಾಹಕರುﷺ ಹೇಳಿದರು, "ಪರಸ್ಪರ ಸನಿಹವಾಗಿ ನಿಂತುಕೊಳ್ಳಿರಿ, ಅಂತರಗಳನ್ನು ಮುಚ್ಚಿ ಮತ್ತು ನಿಮ್ಮ ಭುಜಗಳನ್ನು ಪಂಕ್ತಿಬದ್ಧಗೊಳಿಸಿರಿ. ಏಕೆಂದರೆ ನನ್ನ ಆತ್ಮವು ಯಾರ ಕೈಯಲ್ಲಿದೆಯೋ ಆತನಾಣೆ, ಪಂಕ್ತಿಗಳ ಮಧ್ಯೆಯಿರುವ ಅಂತರಗಳ ನಡುವೆ ಶೈತಾನನು ಒಂದು (ಒಗೆಯಲ್ಪಡುವ) ಅಸ್ತ್ರದಂತೆ ಬಂದು ಸೇರಿಕೊಳ್ಳುವುದನ್ನು ನಾನು ನೋಡುತ್ತಿದ್ದೇನೆ."(ಅಬೂದಾವೂದ್)**

**ತಿಳಿದುಕೊಳ್ಳಿರಿ, ಭುಜಕ್ಕೆ ಭುಜವನ್ನು ತಾಗಿಸಿ ಮತ್ತು ಪಾದದ ಕೀಲಿಗೆ ಪಾದದ ಕೀಲನ್ನು ಸೇರಿಸಿಟ್ಟು ಪಂಕ್ತಿಯನ್ನು ನೇರಗೊಳಿಸಬೇಕೆಂದು ನುಅ್‌ಮಾನ್ ಬಿನ್ ಬಶೀರ್‌ರವರಿಂದﷺ ತಿಳಿದು ಬಂದಿದೆ. ಅವರು ಹೇಳುತ್ತಾರೆ, 'ಪ್ರವಾದಿﷺ ಜನರತ್ತ ತಿರುಗಿ ಈ ರೀತಿ ಹೇಳಿದರು, "ನಿಮ್ಮ ಪಂಕ್ತಿಗಳನ್ನು ನೇರಗೊಳಿಸಿರಿ (ಮೂರು ಸಲ) ಮತ್ತು ಅಲ್ಲಾಹು ನಿಮ್ಮ ಸ್ಥಾನಗಳನ್ನು ಪರಸ್ಪರ ಸನಿಹಗೊಳಿಸುತ್ತಾನೆ. ಅಥವಾ (ಹಾಗಾಗದಿದ್ದರೆ) ಅಲ್ಲಾಹು ನಿಮ್ಮ ಹೃದಯಗಳಲ್ಲಿ ಭಿನ್ನತೆಯನ್ನು ಹಾಕುತ್ತಾನೆ." ನಂತರ ಅವರು (ನುಅ್‌ಮಾನ್ ಬಿನ್ ಬಶೀರ್) ಹೇಳುತ್ತಾರೆ. 'ಅನಂತರ ಪ್ರತಿಯೊರ್ವ ವ್ಯಕಿಯೂ ಆತನ ಭುಜವನ್ನು ತನ್ನ ಪಕ್ಕದಲ್ಲಿರುವ ತನ್ನ ಸಹಚರನ ಭುಜಕ್ಕೆ ತನ್ನ ಮೊಣಕಾಲನ್ನು ತನ್ನ ಸಹಚರನ ಮೊಣಕಾಲಿಗೆ ತನ್ನ ಪಾದದ ಕೀಲನ್ನು ತನ್ನ ಸಹಚರನ ಪಾದದ ಕೀಲಿಗೆ ತಾಗಿಸಿ ನಿಲ್ಲುವುದನ್ನು ನಾನು ಕಂಡೆನು."(ಅಬೂದಾವೂದ್)**

# ನಮಾಝ್ ಮಾಡುವವನ ಮುಂದಿನಿಂದ ಹಾದು ಹೋಗುವಂತೆ ಶೈತಾನನು ಪ್ರೋತ್ಸಾಹಿಸುತ್ತಾನೆ.

**ಅಬೂ ಸ್ವಾಲಿಹ್ ಅಸ್ಸಮನ್ ಹೇಳಿರುವುದಾಗಿ ವರದಿಯಾಗಿದೆ. 'ನಾನು ಅಬೂಸಈದ್ ಅಲ್‌ಕುದ್ರೀ(ರ)ರವರನ್ನು ಒಂದು ಶುಕ್ರವಾರದಂದು ಜನರು ಅಡ್ಡಲಾಗಿ ಇಟ್ಟಂತಹ ಮರೆಯ (ಸತ್ರ) ಸಮೀಪ ನಿಂತು ನಮಾಝ್ ನಿರ್ವಹಿಸುತ್ತಿರುವುದಾಗಿ ಕಂಡೆನು. ಬನೀ ಅಬೀಮುಈತ್ ಗೋತ್ರದ ಯುವಕನೊಬ್ಬ ಅವರ ಮುಂದಿನಿಂದ ನೇರವಾಗಿ ಹಾದು ಹೋಗಲು ಬಯಸಿದಾಗ ಅಬೂ ಸಈದ್‌ರವರು(ರ) ಅವನ ಎದೆಯ ಭಾಗದ ಮೂಲಕ ಆ ಯುವಕನನ್ನು ಹಿಂದಕ್ಕೆ ದೂಡಿದರು. ಆ ಯುವಕ ತನ್ನ ಸುತ್ತಲೂ ಕಣ್ಣಾಡಿಸಿದಾಗ ಅಬೂಸಈದ್‌ರ ಮುಂದಿನಿಂದಲ್ಲದೆ ಹಾದು ಹೋಗಲು ಬೇರೆ ಯಾವುದೇ ದಾರಿಯು ಗೋಚರಿಸಲಿಲ್ಲ. ಆದುದರಿಂದ ಪುನಃ ಆತ ಅವರ ಮುಂದಿನಿಂದ ಹಾದು ಹೋಗಲು ಶ್ರಮಿಸಿದಾಗ ಅಬೂಸಈದ್‌ರವರು ಪುನಃ ದೂಡಿದರು. ನಂತರ ಮರ್‌ವಾನ್‌ರವರು(ರ) ಅತ್ತ ಬಂದಾಗ ಆ ಯುವಕ ಅಬೂಸಈದ್‌ರವರ ವರ್ತನೆಯ ಬಗ್ಗೆ ಅವರಲ್ಲಿ ದೂರು ಹೇಳಿದನು. ಅಬೂಸಈದ್ ಅಲ್‌ಕುದ್ರೀ(ರ) ಮರ್‌ವಾನ್‌ರವರನ್ನು(ರ) ಭೇಟಿಯಾದಾಗ ಮರ್‌ವಾನ್ ಕೇಳಿದರು, 'ನೀವು ಮತ್ತು ನಿಮ್ಮ ಸಹೋದರನ ಪುತ್ರನ ಮಧ್ಯೆ ಏನು ನಡೆಯಿತು ಓ! ಅಬೂ ಸಈದ್?' ಅವರು ಪ್ರತ್ಯುತ್ತರಿಸಿದರು, 'ಪ್ರವಾದಿಯವರಿಂದ (ಸ) ನಾನು ಈ ರೀತಿ ಕೇಳಿರುವೆನು. "ಜನರು ಅಡ್ಡಲಾಗಿ ಇಟ್ಟ ಒಂದು ಮರೆಯ(ಸತ್ರ) ಸಮೀಪ ನಿಂತು ನಿಮ್ಮಲ್ಲಿ ಯಾರಾದರೊಬ್ಬ ನಮಾಝ್ ಮಾಡುತ್ತಿದ್ದು ಮತ್ತು ಅವನ ಮುಂದಿನಿಂದ ಯಾರಾದರೂ ನೇರವಾಗಿ ಹಾದು ಹೋಗಬಯಸಿದರೆ ಆತ (ಆ ನಮಾಝ್ ಮಾಡುವವನು) ಅವನನ್ನು ಹಿಂದಕ್ಕೆ ತಳ್ಳಲಿ. ಅವನು ಹಟಮಾಡಿದನೆಂದಾದರೆ (ಪುನಃ ದಾಟಲು ಪ್ರಯತ್ನಿಸಿದರೆ) ಆತನೊಂದಿಗೆ ಹೋರಾಡಲಿ. ಆತ ಶೈತಾನನಾಗಿದ್ದಾನೆ." (ಸಹೀಹ್ ಅಲ್ ಬುಖಾರಿ 1/582 ನಂಬ್ರ 509)**

**'ಆತ ಶೈತಾನನಾಗಿದ್ದಾನೆ' ಎಂಬ ಮಾತನ್ನು ವ್ಯಾಖ್ಯಾನಿಸುತ್ತಾ ಇಬ್ನು ಹಜರ್(ರಹಿಮಹುಲ್ಲಾಹ್) ಹೇಳಿದರು. "ಇದರರ್ಥ, ಆ ರೀತಿ ನಮಾಝ್ ಮಾಡುವವನ ಮುಂದಿನಿಂದ ಒಬ್ಬನು ಹಾದು ಹೋಗುವಂತೆ ಮಾಡುವವನು (ಪ್ರೇರೇಪಿಸುವವನು) ಶೈತಾನನಾಗಿದ್ದಾನೆ ಎಂದಾಗಿರಬಹುದು."**

**ಮುಸ್ಲಿಮ್ ವರದಿ ಮಾಡಿರುವ ಇಬ್ನ್ಉಮರ್‌ರವರ(ರ) ಹದೀಸೊಂದರಲ್ಲೂ ಇದಕ್ಕೆ ಸಾದೃಶವಾಗಿರುವ ವರದಿಯೊಂದಿದೆ. ಅದರಲ್ಲಿ ಈ ರೀತಿ ಹೇಳಲಾಗಿದೆ, "........ಆತ ತನ್ನೊಂದಿಗೆ 'ಖರೀನ್' (ಜಿನ್ನ್ ಸಹಚರ) ಅನ್ನು ಹೊಂದಿದ್ದಾನೆ." (ಫತ್ಹ್ ಅಲ್‌ಬಾರಿ 1/584)**

# ಕುರ್‌ಆನ್ ಪಾರಾಯಣಗೈಯ್ಯುವ ಮುಂಚೆ ಶೈತಾನನ್ನು ಚದುರಿಸುವುದು

**“ನೀನು ಕುರ್‌ಆನ್ ಪಾರಾಯಣ ಮಾಡುವಿಯೆಂದಾದರೆ ಶಪಿಸಲ್ಪಟ್ಟ ಶೈತಾನನಿಂದ ಅಲ್ಲಾಹನಲ್ಲಿ ಅಭಯವನ್ನು ಯಾಚಿಸು” (ಸೂರ ಅನ್ನಹ್ಲ್: 98)**

**ಕುರ್‌ಆನ್ ಪಾರಾಯಣಕ್ಕೆ ಮುಂಚಿತವಾಗಿ ಅಲ್ಲಾಹನಲ್ಲಿ ಶೈತಾನನಿಂದ ಅಭಯವನ್ನು ಯಾಚಿಸಬೇಕಾಗಿರುವ ಕಾರಣವನ್ನು ಇಮಾಮ್ ಇಬ್ನುಲ್ ಖಯ್ಯಿಮ್(ರಹಿಮಹುಲ್ಲಾಹ್) ತನ್ನ ಇಗಾತತ್ ಅಲ್–ಲಹ್‌ಫಾನ್‌ನಲ್ಲಿ (1/109) ಈ ರೀತಿ ವಿವರಿಸುತ್ತಾರೆ.**

**ಇಬ್ನುಲ್‌ಖಯ್ಯಿಮ್(ರಹಿಮಹುಲ್ಲಾಹ್) ಉಲ್ಲೇಖಿಸಿರುವ ಕಾರಣಗಳ ಪೈಕಿಯಲ್ಲಿ;**

1. **ಕುರ್‌ಆನ್ ಹೃದಯದಲ್ಲಿರುವುದಕ್ಕೆ ಶಮನವಾಗಿದೆ: ಶೈತಾನನು ಜನರ ಮನಸ್ಸಿನಲ್ಲಿ ಕ್ರಮೇಣ ತುಂಬುವ ಕೆಟ್ಟ ಬಯಕೆಗಳು ಮತ್ತು ಹಂತ ಹಂತವಾಗಿ ಒಳನುಸುಳಿ ಕಿವಿಯೂದುವ ದುರಾಸೆ, ದುರಾಕಾಂಕ್ಷೆಗಳನ್ನು (ದುರಾಗ್ರಹಗಳನ್ನು) ಅದು ದೂರ ತೊಲಗಿಸುತ್ತದೆ.**

   **ಶೈತಾನನ ಆಜ್ಞಾಪನೆ (ಪ್ರಚೋದನೆ)ಗಳಿಗೆ ಇದು (ಕುರ್‌ಆನ್) ಪ್ರತಿರೋಧಕವಾಗಿದೆ. ಆದುದರಿಂದಲೇ ನಮ್ಮ ಹೃದಯದಿಂದ ರೋಗ ಕಾರಣವನ್ನು ತೊಲಗಿಸಲು ಮತ್ತು ಹೃದಯವನ್ನು ಶುದ್ದಿಗೊಳಿಸಿಡಲು ನಾವು ಉಪದೇಶಿಸಲ್ಪಟ್ಟಿದ್ದೇವೆ. ಇದರಿಂದ ರೋಗಪರಿಹಾರಕವನ್ನು ಸ್ವೀಕರಿಸಲು ಹೃದಯವು ಸಿದ್ದವಾಗುತ್ತದೆ ಮತ್ತು ಈ ಮೂಲಕ (ಕುರ್‌ಆನಿನ) ಚಿಕಿತ್ಸೆಯು (ನಮ್ಮ ಹೃದಯದ ದುಷ್ಪ್ರೇರಣೆಗಳನ್ನು ತಡೆಯಲು) ಹೆಚ್ಚು ಪ್ರಭಾವಕಾರಿಯಾಗಿರುತ್ತದೆ. ಆದುದರಿಂದಲೇ ರೋಗಪರಿಹಾರಕವು (ಕುರ್‌ಆನ್) ಹಾನಿಕಾರಕವಾದ ಚಿಂತನೆಗಳಿಂದ ಆಕ್ರಮಿಸಲ್ಪಟ್ಟಿರುವ ಹೃದಯಕ್ಕೆ ಪ್ರಭಾವಕಾರಿಯಾದ ಶಮನದ ರೂಪದಲ್ಲಿ ಬಂದು ಅದನ್ನು ಶುದ್ಧೀಕರಿಸುತ್ತದೆ.**

2. ಯಾವ ರೀತಿ ಸತ್ಯಲತಾದಿಗಳ ಬೆಳವಣಿಗೆಗೆ ನೀರು ಅವಶ್ಯಕವಾಗಿದೆಯೋ ಅದೇ ರೀತಿಯಲ್ಲಿ ಮಾರ್ಗದರ್ಶನ, ಜ್ಞಾನ ಹಾಗೂ ಹೃದಯದ ಸದ್ಗುಣಕ್ಕೆ ಕುರ್‌ಆನ್ ಅತ್ಯಾವಶ್ಯಕವಾಗಿದೆ. ಶೈತಾನನು ಬೆಂಕಿಯಾಗಿದ್ದಾನೆ. ಬೆಂಕಿಯು ಮರಗಳನ್ನು ಒಂದರ ನಂತರ ಒಂದಾಗಿ ಸುಟ್ಟು ಹಾಕುತ್ತದೆ. ಸದ್ಗುಣಗಳ ಬೀಜಗಳು ಹೃದಯದಲ್ಲಿ ಮೊಳಕೆಯೊಡೆದು ಬೆಳೆಯುತ್ತವೆ ಎಂದು ಅತ್ಯಂತ ಚೆನ್ನಾಗಿ ಅರಿಯುವವನಾಗಿದ್ದಾನೆ ಶೈತಾನ್. ಅದಕ್ಕಾಗಿ ಅವುಗಳನ್ನು ಕೆಡಿಸಲು ಹಾಗೂ ಸುಟ್ಟುಹಾಕಲು ಆತ ಕಠಿಣವಾಗಿ ಹೆಣಗಾಡುತ್ತಿರುತ್ತಾನೆ. ಆದುದರಿಂದಲೇ ಕುರ್‌ಆನ್ ಪಾರಾಯಣದ ಮೂಲಕ ನಾವು ಸಾಧಿಸಿರುವುದನ್ನು ಆತ ನಾಶಪಡಿಸದಿರಲೆಂದು ಶೈತಾನನಿಂದ ನಾವು ಅಲ್ಲಾಹನಲ್ಲಿ ಅಭಯವನ್ನು ಯಾಚಿಸಬೇಕೆಂದು ಆಜ್ಞಾಪಿಸಲ್ಪಟ್ಟಿದ್ದೇವೆ.

ಮೊದಲಿನ ಹಾಗೂ ಎರಡನೆಯ ಕಾರಣಗಳ ನಡುವಿನ ವ್ಯತ್ಯಾಸವೇನೆಂದರೆ, ಪ್ರಥಮ ವಿಷಯದಲ್ಲಿರುವ ಅಭಯ ಕೋರಿಕೆಯು ಕುರ್‌ಆನ್ ಪಾರಾಯಣದ ಮೂಲಕ ಒಳಿತಿನ ಪ್ರಯೋಜನವನ್ನು ಪಡೆಯುವ ಕ್ರಮವಾಗಿತ್ತು. ಎರಡನೆಯ ವಿಷಯವು ಈ ಒಳಿತು ಹಾಗೂ ಪ್ರಯೋಜನಗಳನ್ನು ತಕ್ಕರೀತಿಯಲ್ಲಿ ಸಂರಕ್ಷಿಸಿಡುವ ಕ್ರಮವಾಗಿದೆ.

# ಮನೆಯಿಂದ
# ಹೊರಡುವಾಗ
## ಶೈತಾನನ್ನು ದೂರವಿಡುವುದು

**ಅನಸ್‌ರವರಿಂದ ﷺ ವರದಿ. ಪ್ರವಾದಿವರ್ಯರು ﷺ ಹೇಳಿದರು, "ಒಬ್ಬನು (ತನ್ನ ಮನೆಯಿಂದ ಹೊರಡುವಾಗ) ಈ ರೀತಿ ಹೇಳಿದರೆ,**

﴿بِسْمِ اللّهِ، تَوَكَّلْتُ عَلَى اللَّهِ
وَلَا حَوْلَ وَلَا قُوَّةَ إِلَّا بِااللَّهِ﴾

**"ಅಲ್ಲಾಹನ ನಾಮದಿಂದ, ನಾನು ಅಲ್ಲಾಹನಲ್ಲಿ ನನ್ನ ಭರವಸೆಯನ್ನು ಅರ್ಪಿಸುತ್ತಿದ್ದೇನೆ. ಅಲ್ಲಾಹನಿಂದಲೇ ಹೊರತು ಯಾವುದೇ ಚಲನೆಯಿಲ್ಲ ಮತ್ತು ಯಾವುದೇ ಅಧಿಕಾರವೂ ಇಲ್ಲ"**

**ಪ್ರತಿಯಾಗಿ ಅವನಿಗೆ ಈ ರೀತಿ ಹೇಳಲ್ಪಡುತ್ತದೆ, 'ನೀನು ಸಂತೃಪ್ತಿಗೊಳಿಸಲ್ಪಟ್ಟಿರುವೆ, ನೀನು ಸಂರಕ್ಷಣೆಗೊಳಗಾಗಿರುವೆ ಮತ್ತು ನೀನು ಮಾರ್ಗದರ್ಶನಕ್ಕೊಳಪಟ್ಟಿರುವೆ.' ನಂತರ ಪಿಶಾಚಿಗಳಲ್ಲೊಬ್ಬ ತಿರುಗಿ ಇನ್ನೊಬ್ಬ ಪಿಶಾಚಿಯತ್ತ ಹೇಳುತ್ತಾನೆ, 'ಸಂತೃಪ್ತಿ, ಸಂರಕ್ಷಣೆ ಹಾಗೂ ಮಾರ್ಗದರ್ಶನಕ್ಕೊಳಪಟ್ಟಿರುವ ಒಬ್ಬನತ್ತ ನೀನು ಹೇಗೆ ತಾನೇ ತಲುಪಲು ಸಾಧ್ಯ?" (ಅಬೂದಾವೂದ್, ಅತ್ತಿರ್ಮಿದಿ) (ಹಸನ್ ಸಹೀಹ್)**

# ಪ್ರಯಾಣದ ಮಧ್ಯೆ ತಂಗುವಾಗ
## ಶೈತಾನನ್ನು ದೂರವಿಡುವುದು

**ಪ್ರವಾದಿ ﷺ ಹೇಳಿದರು, "ನಿಮ್ಮಲ್ಲಾರಾದರೊಬ್ಬ ಪ್ರಯಾಣ ಮಧ್ಯೆ ವಿಶ್ರಾಂತಿಗಾಗಿ ತಂಗಿದರೆ ಮತ್ತು ಅವನು ಈ ರೀತಿ ಹೇಳಿದರೆ,**

أَعُوذُ بِكَلِمَاتِ اللَّهِ التَّامَّاتِ مِنْ شَرِّ مَا خَلَقَ

**"ಅಲ್ಲಾಹನ ಪರಿಪೂರ್ಣ ವಚನಗಳ ಮೂಲಕ ಅವನು ಸೃಷ್ಟಿಸಿದಂತಹ ಕೆಡುಕುಗಳಿಂದ ನಾನು ಅಭಯವನ್ನು ಯಾಚಿಸುತ್ತೇನೆ".**

**ಆತ ಆ ಸ್ಥಳದಿಂದ ಕದಲುವವರೆಗೂ ಅಲ್ಲಿ ಆತನಿಗೆ ಯಾವುದೇ ಹಾನಿಯುಂಟಾಗಲಾರದು." (ಸಹೀಹ್ ಇಬ್ನು ಮಾಜ).**

# ವಿಪತ್ತು ಬಾಧಿಸಿದ ವೇಳೆಯಲ್ಲಿ ಶೈತಾನನ್ನು ದೂರವಿಡುವುದು

**ಅಬೂಹುರೈರಾರವರಿಂದ﵁ ವರದಿ. ಪ್ರವಾದಿﷺ ಹೇಳಿದರು, “ದುರ್ಬಲನಾದ ವಿಶ್ವಾಸಿಯೊಬ್ಬನಿಗಿಂತ ಸುಧೃಡನಾದ ವಿಶ್ವಾಸಿಯೊಬ್ಬನನ್ನು ಅಲ್ಲಾಹು ಹೆಚ್ಚು ಇಷ್ಟಪಡುತ್ತಾನೆ. ಆದರೆ ಎರಡರಲ್ಲೂ ಒಳಿತಿವೆ. ನಿನಗೆ ಒದಗಲಿರುವ ಒಳಿತಿನ ಕುರಿತು ನೀನು ಆಸಕ್ತನಾಗಿರು. ಸರ್ವಶಕ್ತನೂ, ಮಹಾಮಹಿಮನೂ ಆದ ಅಲ್ಲಾಹನಲ್ಲಿ ಸಹಾಯವನ್ನು ಯಾಚಿಸು ಮತ್ತು ಬಲಹೀನನಾಗದಿರು. ನಿನಗೇನಾದರೂ (ವಿಪತ್ತು) ಬಾಧಿಸಿದರೆ ‘ಒಂದು ವೇಳೆ ನಾನು ಆ ರೀತಿ ಮಾಡುತ್ತಿದ್ದರೆ (ಹೀಗಾಗುತ್ತಿರಲಿಲ್ಲ)’ ಎಂದು ನೀನು ಹೇಳಬೇಡ. ಬದಲಾಗಿ ನೀನು ಹೇಳು,**

﴿قَدَّرَ اللَّهُ وَمَا شَاءَ فَعَلَ﴾

**‘ಇದನ್ನು ಅಲಾಹು ವಿಧಿಸಿದ್ದಾನೆ ಮತ್ತು ಅವನು ತಾನಿಚ್ಛಿಸಿದ್ದನ್ನು ಮಾಡಿದನು’) ನಿಶ್ಚಯವಾಗಿಯೂ ‘ಆದರೆ’ (ಹಾಗಾಗುತ್ತಿದ್ದರೆ) ಎಂದು ಹೇಳುವುದು ಶೈತಾನನ ಕೈಗೆಲಸಕ್ಕೆ ದಾರಿ ಮಾಡಿಕೊಡುತ್ತದೆ.” (ಸಹೀಹ್ ಮುಸ್ಲಿಮ್)**

# ಶೈತಾನನ್ನು ನಿಮ್ಮ ಮಕ್ಕಳಿಂದ ದೂರವಿಡುವುದು

**ಅ) ಈ ಕೆಳಗಿನ ವಚನಗಳ ಮೂಲಕ ನಿಮ್ಮ ಮಕ್ಕಳನ್ನು ಅಲ್ಲಾಹನ ಸಂರಕ್ಷಣೆಗೆ ಒಪ್ಪಿಸಿ. ಇಬ್ನು ಅಬ್ಬಾಸ್ﷺ ವಿವರಿಸುತ್ತಾರೆ, 'ಪ್ರವಾದಿವರ್ಯರು ﷺ ತನ್ನ ಮೊಮ್ಮಕ್ಕಳಾದ ಹಸನ್ﷺ ಹಾಗೂ ಹುಸೈನ್ﷺರವರನ್ನು ಅಲ್ಲಾಹನ ಸಂರಕ್ಷಣೆಗೊಪ್ಪಿಸಿ ಈ ರೀತಿ ಹೇಳುತ್ತಿದ್ದರು,**

﴿أُعِيذُكُمَا بِكَلِمَاتِ اللَّهِ التَّامَّةِ
مِنْ كُلِّ شَيْطَانٍ وَهَامَّةٍ
وَمِنْ كُلِّ عَيْنٍ لَّامَّةٍ﴾

**"ನಾನು ನಿಮ್ಮಿಬ್ಬರನ್ನು ಎಲ್ಲಾ ರೀತಿಯ ಕೆಡುಕುಗಳು, ಕ್ರಿಮಿಕೀಟಗಳು ಹಾಗೂ ಕೆಟ್ಟದೃಷ್ಟಿಗಳಿಂದ ಅಲ್ಲಾಹನ ಪರಿಪೂರ್ಣವಚನಗಳ ಸಂರಕ್ಷಣೆಗೊಪ್ಪಿಸುತ್ತೇನೆ".**
**ಮತ್ತು ಅವರುﷺ ಹೇಳಿದರು, "ನಿಮ್ಮ ಪಿತಾಮಹರು [ಇಬ್ರಾಹೀಂعليه السلام] ಇಸ್ಮಾಯೀಲ್عليه السلام ಮತ್ತು ಇಸ್‌ಹಾಕ್عليه السلامರವರನ್ನು ಈ ವಚನಗಳ ಮೂಲಕ ಅಲ್ಲಾಹನ ಸಂರಕ್ಷಣೆಗೊಪ್ಪಿಸುತ್ತಿದ್ದರು."**
**(ಸಹೀಹ್ ಅಲ್‌ಬುಖಾರಿ 4/119 ಮತ್ತು ಮಿಷ್ಕಾತ್ ಅಲ್‌ಮಸಾಬೀಹ್ 1/488, ನಂಬ್ರ 1535)**

**ಆ) ಕತ್ತಲಾವರಿಸುವ ವೇಳೆಯಲ್ಲಿ ನಿಮ್ಮ ಮಕ್ಕಳನ್ನು ಮನೆಯೊಳಗಿಡಿ. ಅದು ಪಿಶಾಚಿಗಳು ಭೂಮಿಯಲ್ಲಿ ಹರಡುವ ಸಮಯವಾಗಿದೆ.** **ಜಾಬಿರ್ ಇಬ್ನ್‌ಅಬ್ದುಲ್ಲಾಹ್ﷺ ಹೇಳುತ್ತಾರೆ. ಪ್ರವಾದಿವರ್ಯರುﷺ ಹೇಳಿದರು, "ಕತ್ತಲಾವರಿಸುವಾಗ (ಮುಸ್ಸಂಜೆಯ ವೇಳೆ) ನಿಮ್ಮ ಮಕ್ಕಳನ್ನು (ಮನೆಯ) ಒಳಗಿಡಿ. ಅದು ಶಯಾತೀನ್‌ಗಳು (ಪಿಶಾಚಿಗಳು) ಭೂಮಿಯಲ್ಲಿ ಹರಡುವ ಸಮಯವಾಗಿದೆ. ನಂತರ ರಾತ್ರಿಯ ಒಂದು ಹೊತ್ತಿನ ಅವಧಿಯು ಕಳೆದು ಹೋದರೆ ಅವರನ್ನು ಹೊರ ಹೋಗಲು ಅನುಮತಿಸಿ." (ಮುತ್ತಫಕುನ್ ಅಲೈಹಿ)**

# ಮುಅವ್ವಿದತೈನ್ (ಸೂರ ಅಲ್ ಫಲಖ್ ಮತ್ತು ಸೂರ ಅನ್ನಾಸ್) ಅಲ್ಲಾಹನಲ್ಲಿ ಅಭಯಯಾಚಿಸಲು ಅತ್ಯುತ್ತಮ ವಚನಗಳಾಗಿವೆ.

**ಅಬೂ ಸಈದ್ ಹೇಳುತ್ತಾರೆ, "ಅಲ್ಲಾಹನ ಸಂದೇಶವಾಹಕರು ಮುಅವ್ವಿದತೈನ್ (ಕುರ್‌ಆನಿನ ಕೊನೆಯ ಎರಡು ಅಧ್ಯಾಯಗಳು) ಅವತೀರ್ಣಗೊಳ್ಳುವ ತನಕ ಜಿನ್ನ್ ಮತ್ತು ಮನುಷ್ಯರ (ಕೆಡುಕಿನ) ಪರಿಣಾಮಗಳಿಂದ ಅಲ್ಲಾಹನಲ್ಲಿ ಅಭಯವನ್ನು ಯಾಚಿಸುತ್ತಿದ್ದರು. ಅವೆರಡು (ಅಧ್ಯಾಯಗಳು) ಅವತೀರ್ಣಗೊಂಡಾಗ ಅವರು ಅದಕ್ಕೆ ಗಟ್ಟಿಯಾಗಿ ಅಂಟಿಕೊಂಡರು ಮತ್ತು ಅಕ್ಕಪಕ್ಕವಿದ್ದವುಗಳನ್ನೆಲ್ಲ ತೊರೆದರು."(ಸಹೀಹ್) (ಅನ್ನಸಾಈ ಮತ್ತು ಇಬ್ನು ಮಾಜ)**

**ಉಖಬ ಬಿನ್ ಆಮಿರ್‌ರವರಿಂದ ವರದಿ. ಪ್ರವಾದಿವರ್ಯ ಹೇಳಿದರು, "ಇದಕ್ಕೆ ಮುಂಚೆ ಒಮ್ಮೆಯೂ ಕಾಣದಂತಹ (ಕೇಳದಂತಹ) ಸೂಕ್ತಗಳು ಇಂದು ರಾತ್ರಿ ನನ್ನ ಮೇಲೆ ಅವತೀರ್ಣಗೊಂಡದ್ದು ನೀವು ನೋಡಿಲ್ಲವೇ? ಕುಲ್ ಅವೂದು ಬಿರಬ್ಬಿಲ್ ಫಲಖ್ (ಸೂರ ಅಲ್ ಫಲಖ್) ಮತ್ತು ಕುಲ್ ಅವೂದು ಬಿರಬ್ಬಿನ್ನಾಸ್ (ಸೂರ ಅನ್ನಾಸ್)." (ಸಹೀಹ್ ಮುಸ್ಲಿಂ)**

**ವರದಿಯೊಂದರ ಪ್ರಕಾರ ಅಲ್ಲಾಹನ ಸಂದೇಶವಾಹಕರು ಇಬ್ನುಅಬ್ಬಾಸ್ ಅಲ್‌ಜುಹಾನಿಯವರೊಂದಿಗೆ ಹೇಳಿದರು, "ಒಬ್ಬನಿಗೆ ಅಲ್ಲಾಹನೊಂದಿಗೆ ಅಭಯವನ್ನು ಯಾಚಿಸಲು ಅತ್ಯುತ್ತಮ ವಚನಗಳು ಮುಅವ್ವಿದತೈನ್ ಆಗಿವೆ." ಉಖಬರವರ ಹದೀಸಿನ ಕೆಲವು ಭಾಗಗಳ ಪ್ರಕಾರ ಅಲ್ಲಾಹನ ಸಂದೇಶವಾಹರು ಈ ಎರಡು ಅಧ್ಯಾಯದ ಕುರಿತು ಹೇಳಿದರು, "ಯಾವೊಬ್ಬನೂ ಅಲ್ಲಾಹನಲ್ಲಿ ಕೇಳಲಾರ, ಅದರಂತಿರುವ (ಅರ್ಥವತ್ತಾದ) ಯಾವೊಂದರ ಮೂಲಕವೂ ಹಾಗೂ ಅಭಯವನ್ನೂ ಯಾಚಿಸಲಾರ ಅದರಂತಿರುವ (ಅರ್ಥವತ್ತಾದ) ಯಾವೊಂದರ ಮೂಲಕವೂ." (ಸಹೀಹ್ ಅನ್ನಸಾಈ)**

**ಆಯಿಷಾರವರಿಂದ ವರದಿ, "ಪ್ರವಾದಿವರ್ಯರು ಪ್ರತಿಯೊಂದು ರಾತ್ರಿಯಲ್ಲಿಯೂ ತನ್ನ ಹಾಸಿಗೆಗೆ (ನಿದ್ರಿಸಲು) ತೆರಳುವಾಗ ತನ್ನ ಅಂಗೈಗಳೆರಡನ್ನು ಪರಸ್ಪರ ಸೇರಿಸಿ ಹಿಡಿದ ನಂತರ ಪವಿತ್ರ ಕುರ್‌ಆನಿನ ಕೊನೆಯ ಮೂರು ಅಧ್ಯಾಯಗಳನ್ನು (ಸೂರ ಅಲ್ ಇಖ್‌ಲಾಸ್, ಸೂರ ಅಲ್‌ಫಲಖ್, ಸೂರ ಅಲ್‌ನಾಸ್) ಓದಿ ಅದರ (ಅಂಗೈಗಳ) ಮೇಲೆ ಊದಿಕೊಂಡು ನಂತರ ತನ್ನ ಶರೀರದ ಮೇಲೆ ಪೂರ್ಣವಾಗಿ ಎಷ್ಟು ಸಾಧ್ಯವೋ ಅಷ್ಟರ ತನಕ ತನ್ನ ಕೈಗಳಿಂದ ಸವರಿಕೊಳ್ಳುತ್ತಿದ್ದರು. ಅವರು ತನ್ನ ಶಿರಭಾಗದಿಂದ ತೊಡಗಿ ಮುಖ ಮತ್ತು ಶರೀರದ ಮುಂದಿನ ಭಾಗದಿಂದ (ಸವರಲು) ಪ್ರಾರಂಭಿಸುತ್ತಿದ್ದರು. ಈ ರೀತಿ ಅವರು ಮೂರು ಸಲ**

ಪುನರಾವರ್ತಿಸುತ್ತಿದ್ದರು." (ಸಹೀಹ್ ಅಲ್‌ಬುಖಾರಿ) ಉಖಬ ಬಿನ್ ಆಮಿರ್‌ರವರಿಗೆﷺ ಎಲ್ಲಾ (ಐದುಹೊತ್ತಿನ) ಕಡ್ಡಾಯ ನಮಾಜಿನ ನಂತರ ಇದನ್ನು (ಈ ಮೂರು ಅಧ್ಯಾಯಗಳನ್ನು) ಪಠಿಸುವಂತೆಯೂ ಕೂಡ ಅವರು ಸಲಹೆಯಿತ್ತರು."(ಅನ್ನಸಾಈ)

ಅಬ್ದುಲ್ಲಾ ಇಬ್ನ್‌ಖುಲೈಬ್ﷺ ಹೇಳುತ್ತಾರೆ. "ಅಲ್ಲಾಹನ ಸಂದೇಶವಾಹಕರು ನನ್ನೊಂದಿಗೆ ಹೇಳಿದರು, 'ಪಠಿಸು' ನಾನು ಕೇಳಿದೆ, 'ಓ ಅಲ್ಲಾಹನ ಸಂದೇಶವಾಹಕರೇ ನಾನು ಏನನ್ನು ಪಠಿಸಲಿ? ಅವರುತ್ತರಿಸಿದರು, "ಸೂರ ಅಲ್‌ಇಖ್ಲಾಸ್, ಸೂರ ಅಲ್‌ಫಲಖ್ ಮತ್ತು ಸೂರ ಅನ್ನಾಸ್. ಇವುಗಳನ್ನು ಪ್ರಭಾತ ಹಾಗೂ ಸಾಯಂಕಾಲದ ವೇಳೆಯಲ್ಲಿ ಮೂರು ಸಲ ಪಠಿಸು. ಬೇರೆ ಎಲ್ಲವುಗಿಂತಲೂ ಇವು ನಿನಗೆ ಸಾಕಾಗುವುದು." (ಅತ್ತಿರ್ಮಿದಿ)

# ಏರು ಸ್ವರದ ಕುರ್‌ಆನ್ ವಾಚನ ಶೈತಾನನ್ನು ದೂರಕ್ಕಟ್ಟುತ್ತದೆ.

**ಅಲ್ಲಾಹನ ಸಂದೇಶವಾಹಕರುﷺ ಒಂದು ರಾತ್ರಿ ಹೊರಗೆ ಹೋದಾಗ ಅಬೂಬಕರ್‌ರವರುرضي الله عنه ಮೆದು ಸ್ವರದಲ್ಲಿ (ಕುರ್‌ಆನ್) ಪಠಿಸುತ್ತಾ ನಮಾಝ್ ನಿರ್ವಹಿಸುತ್ತಿರುವುದನ್ನು ಕಂಡರು. ಹಾಗೇ ಮುಂದೆ ಸಾಗಿದಾಗ ಉಮರ್ ಬಿನ್ ಖತ್ತಾಬ್رضي الله عنه ಉಚ್ಛ ಸ್ವರದಲ್ಲಿ (ಕುರ್‌ಆನ್) ಪಠಿಸುತ್ತಾ ನಮಾಝ್ ನಿರ್ವಹಿಸುತ್ತಿರುವುದನ್ನು ಕಾಣಲು ಸಾಧ್ಯವಾಯಿತು. ನಂತರ ಅವರಿಬ್ಬರು ಪ್ರವಾದಿವರ್ಯರ ಸನ್ನಿಧಿಗೆ ಆಗಮಿಸಿದಾಗ ಪ್ರವಾದಿವರ್ಯರುﷺ ಹೇಳಿದರು, 'ಓ ಅಬೂಬಕರ್! ನೀವು ಮೆದು ಸ್ವರದಲ್ಲಿ ಪಠಿಸುತ್ತಾ ನಮಾಝ್ ನಿರ್ವಹಿಸುತ್ತಿದ್ದಾಗ ನಾನು ನಿಮ್ಮ ಪಕ್ಕದಲ್ಲೇ ಹಾದು ಹೋದೆನು.' ಅಬೂಬಕರ್رضي الله عنه ಹೇಳಿದರು, 'ಓ ಅಲ್ಲಾಹನ ಸಂದೇಶವಾಕರೇ ನಾನು ಯಾರೊಂದಿಗೆ ಸಂಭಾಷಣೆಯನ್ನು ನಡೆಸುತ್ತಿದ್ದೆನೋ ಅವನಿಗೆ (ಅಲ್ಲಾಹನಿಗೆ) ಕೇಳಿಸುತ್ತಿದ್ದೆ.' ನಂತರ ಅವರುﷺ ಉಮರ್‌ರೊಂದಿಗೆرضي الله عنه ಹೇಳಿದರು, 'ನೀವು ಉಚ್ಛ ಸ್ವರದಲ್ಲಿ ಪಠಿಸುತ್ತಾ ನಮಾಝನ್ನು ನಿರ್ವಹಿಸುತ್ತಿದ್ದಾಗ ನಾನು ನಿಮ್ಮ ಪಕ್ಕದಿಂದಲೇ ಹಾದು ಹೋದೆನು.' ಉಮರ್رضي الله عنه ಉತ್ತರಿಸಿದರು, 'ಓ ಅಲ್ಲಾಹನ ಸಂದೇಶವಾಹಕರೇ! ನಾನು ನಿದ್ರಿಸುತ್ತಿರುವವರನ್ನು ಹುರಿದುಂಬಿಸುತ್ತಿದ್ದೆ (ಎಚ್ಚರಿಸುತ್ತಿದ್ದೆ) ಮತ್ತು ಶೈತಾನನ್ನು ದೂರಕ್ಕೋಡಿಸುತ್ತಿದ್ದೆ.' ಆಗ ಪ್ರವಾದಿವರ್ಯﷺ ಹೇಳಿದರು, 'ಓ ಅಬೂಬಕರ್! ನಿಮ್ಮ ಸ್ವರವನ್ನು ಸ್ವಲ್ಪ ಮಟ್ಟಿಗೆ ಹೆಚ್ಚಿಸಿ.' ನಂತರ ಅವರುﷺ ಉಮರ್رضي الله عنهರವರೊಂದಿಗೆ ಹೇಳಿದರು, 'ನಿಮ್ಮ ಸ್ವರವನ್ನು ಸ್ವಲ್ಪ ಮಟ್ಟಿಗೆ ತಗ್ಗಿಸಿ.'** **(ಅಬೂದಾವೂದ್ ಅಲ್‌ಹಾಕಿಮ್ ಅವರು ಇದನ್ನು ಅದ್ದಹಬೀಯವರ ರೀತಿಯಲ್ಲಿ ಸಹೀಹ್ ಎಂದಿದ್ದಾರೆ)**

# ಒಬ್ಬನು ಅಲ್ಲಾಹನಲ್ಲಿ ಅಭಯವನ್ನು ಯಾಚಿಸಿದ ನಂತರವೂ ಶೈತಾನ್ ದೂರವಾಗುವುದಿಲ್ಲವೇಕೆ?

ಅಲ್ಲಾಹನಲ್ಲಿ ಅಭಯ ಯಾಚನೆಯೆಂದರೆ ಅದು ಯೋಧನೊಬ್ಬನ ಕೈಯಲ್ಲಿರುವ ಖಡ್ಗದಂತೆ. ಕೈಯು ಬಲಯುಕ್ತವಾಗಿದ್ದರೆ ಖಡ್ಗವು ಶತ್ರುವಿಗೆ ಪ್ರಾಣಾಂತಿಕ ಏಟು ನೀಡಲು ಶಕ್ತವಾಗಿರುತ್ತದೆ. ಆದರೆ ಕೈಯು ಬಲಹೀನವಾಗಿದ್ದರೆ ಖಡ್ಗವು ಶತ್ರುವಿಗೆ ಯಾವುದೇ ಹಾನಿಯುಂಟು ಮಾಡಲಾರದು. ಅದು ಯಾವುದೇ ಮೆರುಗು ನೀಡುವ ಉಕ್ಕಿನಿಂದ ತಯಾರಿಸಲಾಗಿದ್ದರೂ ಕೂಡ.

ಸಮಾನ ರೀತಿಯಲ್ಲಿ ಅಲ್ಲಾಹನನ್ನು ಭಯಪಡುವ ಧರ್ಮಶ್ರದ್ಧೆಯುಳ್ಳ ವ್ಯಕ್ತಿಯೊಬ್ಬ ಅಭಯವನ್ನು ಯಾಚಿಸಿದರೆ ಅದು ಬೆಂಕಿಯಂತಿರುತ್ತದೆ. ಶೈತಾನನ್ನು ಅದು ದಹಿಸಿಬಿಡುತ್ತದೆ. ಆದರೆ ದಾರಿಗೆಟ್ಟ, ದುರ್ಬಲ ವಿಶ್ವಾಸಿಯೊಬ್ಬನು ಯಾಚಿಸುವ ಅಭಯ ಶತ್ರುವಿನ ಮೇಲೆ ಯಾವುದೇ ಗಾಢ ಪರಿಣಾಮ ಬೀರುವಲ್ಲಿ ವಿಫಲವಾಗುತ್ತದೆ.

ಅಬುಲ್‌ಫರಜ್ ಇಬ್ನುಜೌಝೀ(ರಹಿಮಹುಲ್ಲಾಹ್) ಹೇಳುತ್ತಾರೆ, "ತಿಳಿದುಕೊಂಡಿರಿ, ಸಾತ್ವಿಕನಾದ ವ್ಯಕ್ತಿಯೊಬ್ಬನ ಬಳಿ ಬರುವ ಶೈತಾನನ ಕುರಿತ ಹೋಲಿಕೆಯು ಒಬ್ಬ ವ್ಯಕ್ತಿಯಂತಾಗಿದೆ. ಆತನು ತನ್ನ ಮುಂದೆ ಆಹಾರ ಹಾಗೂ ಮಾಂಸದೊಂದಿಗೆ ಕುಳಿತುಕೊಂಡಿರುವನು ಮತ್ತು ನಾಯಿಯೊಂದು ಆತನ ಬಳಿಗೆ ಬರುತ್ತದೆ ಮತ್ತು ಆತನು ಆ ನಾಯಿಗೆ 'ದೂರ ಹೋಗು!' ಎಂದಾಗ ಅದು ದೂರ ಹೋಗುವುದು. ನಂತರ ಅದು ಇನ್ನೊಬ್ಬ ವ್ಯಕ್ತಿಯ ಬಳಿ ಬರುತ್ತದೆ. ಆತನು ಆ ನಾಯಿಯನ್ನು ದೂರಕ್ಕಟ್ಟಲು ಶ್ರಮಿಸಿದರೂ ಅದು ದೂರವಾಗದೆ ಪ್ರತಿ ಬಾರಿಯೂ ಆತನಲ್ಲಿಗೆ ಬರುತ್ತದೆ. ಮೊದಲಿನವನ ಉದಾಹರಣೆಯು ಒಬ್ಬ ಸಾತ್ವಿಕ ವ್ಯಕ್ತಿಯಂತಾಗಿದೆ. ಶೈತಾನ್ ಆತನನ್ನು ಸಮೀಪಿಸಿದರೆ ಆತನ ದ್ಸಿಕ್ರ್ (ಅಭಯ ಯಾಚನೆ) ಆತನಿಗೆ ಶೈತಾನನ್ನು ದೂರಕ್ಕಟ್ಟಲು ಸಾಕಾಗುವುದು. ನಂತರದವನ ಉದಾಹರಣೆಯು ವಿಶ್ವಾಸದಲ್ಲಿ ದೌರ್ಬಲ್ಯತೆಯನ್ನು ಹೊಂದಿದ ಒಬ್ಬನಂತಾಗಿದೆ. ಆತನ ದುರ್ಬಲವಿಶ್ವಾಸದ ಕಾರಣದಿಂದಾಗಿ ಶೈತಾನನು ಆತನನ್ನು ಬಿಟ್ಟು ಅಗಲಲಾರನು.

ನಾವು ಶೈತಾನನ ದುರ್ಲೋಭನೆಗಳಿಂದ ಅಲ್ಲಾಹನಲ್ಲಿ ಅಭಯವನ್ನು ಯಾಚಿಸುತ್ತೇವೆ." (ತಲ್‌ಬೀಸ್ ಇಬ್ಲೀಸ್, ಪುಟ 48)

ಈ ಪ್ರಕಾರ ಶೈತಾನ್ ಮತ್ತು ಆತನ ಕುತಂತ್ರಗಳಿಂದ ಸ್ವಯಂ ತನ್ನನ್ನು ರಕ್ಷಿಸಿಕೊಳ್ಳಬಯಸುವ ಮುಸ್ಲಿಮನೊಬ್ಬನು ಪ್ರಪ್ರಥಮವಾಗಿ ಮಾಡಬೇಕಾಗಿದ್ದೇನೆಂದರೆ, ಆತ ತನ್ನ ವಿಶ್ವಾಸವನ್ನು ಸುದೃಢಗೊಳಿಸುವ ನಿಟ್ಟಿನಲ್ಲಿ ಪ್ರವರ್ತಿಸಬೇಕು ಮತ್ತು ತನ್ನ ಸೃಷ್ಟಿಕರ್ತನಲ್ಲಿ ರಕ್ಷಣೆಯನ್ನು ಬೇಡುತ್ತಾ ಅಲ್ಲಾಹನತ್ತ ತಿರುಗಬೇಕು. ಅಲ್ಲಾಹನಂತೆ ಶಕ್ತಿ ಮತ್ತು ಸಾಮರ್ಥ್ಯವನ್ನು ಹೊಂದಿದವರು ಆತನ ಹೊರತು ಇನ್ನಾರೂ ಇಲ್ಲ." (ಆಲಮ್ ಅಲ್‌ಜಿನ್ನ್ ವಶ್ಶಯಾತೀನ್ ನೋಡಿ)

# 3 ಧ್ಸಿಕ್ರ್‌ಗಳಲ್ಲಿ ನಿರತರಾಗುವುದು

ಹದೀಸೊಂದರಲ್ಲಿ ಉಲ್ಲೇಖಗೊಂಡಂತೆ, ಅಲ್ಲಾಹು ಪ್ರವಾದಿ ಯಹ್ಯಾ(ﷺ)ರವರಿಗೆ ಇಸ್ರಾಯೀಲ್ ಸಂತತಿಗಳಿಗೆ ಐದು ಕಾರ್ಯಗಳನ್ನು ಆಜ್ಞಾಪಿಸುವಂತೆ ಆದೇಶಿಸಿದನು. ಅದರಲ್ಲೊಂದು ಈ ರೀತಿಯಿದೆ. 'ನಾನು ನಿಮಗೆ ಅಲ್ಲಾಹುವನ್ನು ಸ್ಮರಿಸುವಂತೆ ಆದೇಶಿಸುತ್ತಿದ್ದೇನೆ. ಇದರ (ಅಲ್ಲಾಹನ ಸ್ಮರಣೆ) ಉದಾಹರಣೆಯು ಶತ್ರುವಿನಿಂದ ಬೆನ್ನಟ್ಟಲ್ಪಡುತ್ತಿರುವ ವ್ಯಕ್ತಿಯೊಬ್ಬನು ಭದ್ರವಾದ ಕೋಟೆಯೊಂದರೊಳಗೆ ಬಂದು ಸ್ವಯಂ ತನ್ನನ್ನು ತಾನು ರಕ್ಷಿಸಿಕೊಳ್ಳುವುದಕ್ಕೆ ಸಮವಾಗಿದೆ. ಸಮಾನ ರೀತಿಯಲ್ಲಿಯೇ (ಅಲ್ಲಾಹನ) ಧ್ಸಿಕ್ರ್‌ಗಳ ಮೂಲಕವೇ ಹೊರತು ಮನುಷ್ಯನೊಬ್ಬ ಸ್ವಯಂ ತನ್ನನ್ನು ತಾನು ಶತ್ರುವಿನಿಂದ ರಕ್ಷಿಸಿಕೊಳ್ಳಲಾರ." (ಹಾಫಿಝ್ ಅಬೂಮೂಸಾ ಅಲ್‌ಮದನಿ ತನ್ನ 'ಅಲ್‌ತರ್ಗೀಬ್ ಫಿಲ್‌ಖಿಸಾಲ್ ಅಲ್‌ಹಮೀದಾ ವಲ್‌ತರ್ಹೀಬ್ ಮಿನ್‌ಖಿಲಾಲ್ ಅಲ್‌ಮುರ್ದಿಯ್ಯ'ದಲ್ಲಿ ಉಲ್ಲೇಖಿಸಿದ್ದಾರೆ. ಇಬ್ನಿಲ್ ಖಯ್ಯಿಮ್ ಹೇಳುತ್ತಾರೆ, 'ಶೈಖುಲ್ ಇಸ್ಲಾಂ ಈ ಹದೀಸನ್ನು ವಿಶೇಷ ಗಣನೆಗೆ ತೆಗೆದುಕೊಂಡಿದ್ದರು.' (ಅಲ್‌ವಾಬಿಲ್ ಅಲ್‌ಸಯ್ಯಿಬ್: 60)

ಅಲ್ಲಾಹನ ಸ್ಮರಣೆಯ ಮೂಲಕ ತನ್ನ ನಾಲಗೆಯನ್ನು ಒದ್ದೆಯಾಗಿಡುವ ವಿಶ್ವಾಸಿಯೊಬ್ಬನ ಖರೀನ್ ತುಂಬಾ ದುರ್ಬಲ, ಸಣಕಲು ಮತ್ತು ಹಸಿವು ಪೀಡಿತನಾಗಿರುತ್ತಾನೆ. ಕಾರಣವೇನೆಂದರೆ, ವಿಶ್ವಾಸಿಯೊಬ್ಬ ಎಷ್ಟು ಹೆಚ್ಚಾಗಿ ಅಲ್ಲಾಹುವನ್ನು ಸ್ಮರಿಸುತ್ತಾನೋ ಅಷ್ಟೇ ಹೆಚ್ಚಾಗಿ ಶೈತಾನನು ಯಾತನೆಯನ್ನು ಅನುಭವಿಸುತ್ತಾನೆ.

ಅದೇ ರೀತಿ ಅಲ್ಲಾಹನನ್ನು ಸ್ಮರಿಸದ ದುರ್ಮಾರ್ಗಿಯಾದ ವ್ಯಕ್ತಿಯೊಬ್ಬನ ಸಂಗಡವಿರುವ ಶೈತಾನ್ ಆತನೊಂದಿಗೆ ಸಮಾಧಾನಪೂರ್ವಕವಾಗಿ ಇರುತ್ತಾನೆ. ಆದುದರಿಂದಲೇ ಆ ದುರ್ಬಲ ವಿಶ್ವಾಸಿಯ ಸಂಗಡವಿರುವ ಶೈತಾನ್ ಹೆಚ್ಚು ಪ್ರಭಾವಿ ಹಾಗೂ ಶಕ್ತಿಶಾಲಿಯಾಗಿದ್ದು ವ್ಯಕ್ತಿಯನ್ನು ಜಯಿಸಲು ಹೆಚ್ಚಿನ ಸಾಮರ್ಥ್ಯ ಹೊಂದಿದವನಾಗಿರುತ್ತಾನೆ.

ಅಬೂ ಹುರೈರಾರವರಿಂದ(رضي الله عنه) ವರದಿ, "ವಿಶ್ವಾಸಿಯೊಬ್ಬನ (ಸಂಗಡವಿರುವ) ಶೈತಾನ್ ಅವಿಶ್ವಾಸಿಯೊಬ್ಬನ (ಸಂಗಡವಿರುವ) ಶೈತಾನನ್ನು ಭೇಟಿಯಾದನು.

ಎರಡನೆಯವನು (ಅವಿಶ್ವಾಸಿಯ ಸಂಗಡವಿರುವವನು) ಕೊಬ್ಬಿ ಉತ್ತಮ ಶರೀರ ಕಾಯವನ್ನು ಹೊಂದಿದವನಾಗಿದ್ದು ಉತ್ತಮ ವಸ್ತ್ರಧಾರಣೆಯನ್ನು ಮಾಡಿದ್ದನು. ಆದರೆ ಮೊದಲಿನವನು (ವಿಶ್ವಾಸಿಯ ಸಂಗಡವಿರುವವನು) ದುರ್ಬಲ, ಸಣಕಲು, ತಲೆಕೆದರಿದ, (ಮಣ್ಣು ಮುಕ್ಕಿದ) ಧೂಳಿನಿಂದಾವೃತನಾದವನೂ ಮತ್ತು ಹಸಿದವನೂ, ನಗ್ನನೂ ಆಗಿದ್ದನು. ಅವಿಶ್ವಾಸಿಯೊಂದಿಗಿರುವ ಶೈತಾನನು ವಿಶ್ವಾಸಿಯ (ಸಂಗಡವಿರುವ) ಶೈತಾನನೊಂದಿಗೆ ಪ್ರಶ್ನಿಸುತ್ತಾನೆ, 'ನೀನ್ಯಾಕೆ ಇಷ್ಟೊಂದು ಸೊರಗಿ ಹೋಗಿರುವೆ?' ಆ ಶೈತಾನ್ ಉತ್ತರಿಸುತ್ತಾನೆ, 'ನಾನು ಒಬ್ಬ ವ್ಯಕ್ತಿಯ ಸಂಗಡವಿದ್ದೇನೆ. ಆತನೋ ಭಕ್ಷಿಸುವಾಗಲೆಲ್ಲಾ ಅಲ್ಲಾಹನ ನಾಮವನ್ನುಚ್ಛರಿಸುತ್ತಾನೆ. ಆದುದರಿಂದ ನಾನು ಹಸಿವಿನಿಂದಿರುವೆ. ಆತನು ಕುಡಿಯುವಾಗಲೆಲ್ಲಾ ಅಲ್ಲಾಹನ ನಾಮವನ್ನುಚ್ಛರಿಸುತ್ತಾನೆ, ಆದುದರಿಂದ ನಾನು ಬಾಯಾರಿರುವೆ. ಆತನು ವಸ್ತ್ರ ಧರಿಸುವಾಗಲೆಲ್ಲಾ ಅಲ್ಲಾಹನ ನಾಮವನ್ನು ಉಚ್ಛರಿಸುತ್ತಾನೆ, ಆದುದರಿಂದ ನಾನು ನಗ್ನವಾಗಿರುವೆ. ಆತನು ತನ್ನ ತಲೆಗೆ ಎಣ್ಣೆ ಹಚ್ಚುವಾಗಲೆಲ್ಲಾ ಅಲ್ಲಾಹನ ನಾಮವನ್ನುಚ್ಛರಿಸುತ್ತಾನೆ, ಆದ್ದರಿಂದಲೇ ನನ್ನ ತಲೆಗೂದಲು ಕೆದರಿಕೊಂಡಿವೆ.' ನಂತರ ಅವಿಶ್ವಾಸಿಯ (ಸಂಗಡವಿರುವ) ಶೈತಾನ್ ಹೇಳುವನು, 'ಆದರೆ ನಾನು ಒಬ್ಬ ವ್ಯಕ್ತಿಯ ಸಂಗಡವಿದ್ದೇನೆ. ಆತನಾದರೋ ನೀನು ಹೇಳಿದಂತಹ ಯಾವುದೇ ಕರ್ಮಗಳನ್ನು ಮಾಡದವನಾಗಿದ್ದಾನೆ ಮತ್ತು ನಾನು ಆತನೊಂದಿಗೆ ಆತನ ಆಹಾರ, ಪಾನೀಯ, ವಸ್ತ್ರ, ಇತ್ಯಾದಿಗಳಲ್ಲಿ ಪಾಲು ಪಡೆಯುತ್ತಿದ್ದೇನೆ.' (ಇಹ್ಯಾ)

## ಅಲ್ಲಾಹನ ಸ್ಮರಣೆಯು ಶೈತಾನನ ಗಾತ್ರವನ್ನು ಆತನು ಹಾರಿ ಹೋಗುವಷ್ಟು ಕಿರಿದಾಗಿಸುತ್ತದೆ.

ಅಬೂ ಮಲೀಹ್‌ರವರು ﷺ ವರದಿ ಮಾಡಿರುತ್ತಾರೇನೆಂದರೆ, ವ್ಯಕ್ತಿಯೊಬ್ಬರು ಹೇಳಿದರು. 'ನಾನು ಪ್ರವಾದಿಯವರ್ಯರ ﷺ ಹಿಂದುಗಡೆ ಕುಳಿತು ಸವಾರಿ ಮಾಡುತ್ತಿದ್ದೆ. ಈ ಮಧ್ಯೆ ಅವರು ಸವಾರಿ ಮಾಡುತ್ತಿದ್ದ ಪ್ರಾಣಿಯು ಮುಗ್ಗರಿಸಿದಾಗ ನಾನು ಹೇಳಿದೆ, 'ಶೈತಾನನು ನಾಶವಾಗಿ ಹೋಗಲಿ' ಆಗ ಅವರು ﷺ ಹೇಳಿದರು, "ಶೈತಾನನು ನಾಶವಾಗಿ ಹೋಗಲಿ ಎಂದು ನೀನು ಹೇಳಬೇಡ. ನೀನು ಆ ರೀತಿ ಹೇಳಿದರೆ ಆತನು ಒಂದು ಮನೆಯ ಗಾತ್ರದಷ್ಟು ದೊಡ್ಡದಾಗಿ ಬೆಳೆದು ನಿಂತು ಈ ರೀತಿ ಹೇಳುವನು, 'ನನ್ನ ಶಕ್ತಿಯಿಂದ' ಅದರ ಬದಲಾಗಿ ನೀನು 'ಬಿಸ್ಮಿಲ್ಲಾಹ್' (ಅಲ್ಲಾಹನ ನಾಮದೊಂದಿಗೆ) ಎಂದು ಹೇಳು. ಆ ರೀತಿ ನೀನು ಹೇಳುವಾಗ ಆತ ತನ್ನ ಗಾತ್ರದಲ್ಲಿ ಕಿರಿದಾಗುತ್ತಾನೆ. ಎಷ್ಟರವರೆಗೆಂದರೆ, ಆತ ಹಾರಿ ಹೋಗುವಷ್ಟರ ಮಟ್ಟಿಗೆ." (ಸಹೀಹ್ ಅಬೂದಾವೂದ್)

# 4 ಮುಸ್ಲಿಮರ ಪ್ರಧಾನ ಸಮೂಹ (ಜಮಾ'ಅ)ದಲ್ಲಿ ಸ್ಥಿರವಾಗಿ ನೆಲೆಗೊಳ್ಳುವುದು.

ವಿಶ್ವಾಸಿಗಳೊಂದಿಗೆ ಬೆರೆತು ಜೀವಿಸುತ್ತಾ ಸತ್ಕರ್ಮಗಳನ್ನು ಮಾಡಲು ಸಹಾಯಿಸುವ ಮತ್ತು ಪ್ರೋತ್ಸಾಹಿಸುವ ಸಜ್ಜನರನ್ನು ತನ್ನ ಮಿತ್ರರನ್ನಾಗಿ ಆಯ್ದುಕೊಳ್ಳುವ ಮೂಲಕ ಮುಸ್ಲಿಮರ ಪ್ರಧಾನ ಸಮೂಹದಲ್ಲಿ (ಜಮಾ'ಅ) ನಾವು ಸ್ಥಿರವಾಗಿ ನೆಲೆಗೊಳ್ಳಬೇಕಾಗಿದೆ. ಪ್ರವಾದಿಯವರುﷺ ಹೇಳುತ್ತಾರೆ, "ಸ್ವರ್ಗದಲ್ಲಿ ಅತ್ಯುತ್ತಮ ಭಾಗವನ್ನು ಹೊಂದಲು ನಿಮ್ಮಲ್ಲಿ ಯಾರು ಇಚ್ಛಿಸುತ್ತಾರೋ ಅವನು ಮುಸ್ಲಿಮರ ಪ್ರಧಾನ ಸಮೂಹದಲ್ಲಿ ಭದ್ರವಾಗಿ ನೆಲೆಗೊಳ್ಳಲಿ. ಯಾವೊಬ್ಬನು ಒಂಟಿಯಾಗಿದ್ದಾನೋ ಶೈತಾನನು ಆತನೊಂದಿಗಿರುವನು. ಆದರೆ ಆತನು (ಶೈತಾನ್) (ಒಟ್ಟಿಗಿರುವ) ಇಬ್ಬರಿಗೆ ಬಹು ದೂರವಿರುವನು." (ಅತ್ತಿರ್ಮಿದಿ, 2254)

ಆದರೆ ಜಮಾ'ಅ (ಸಮೂಹ) ಸತ್ಯಕ್ಕೆ ಅಂದರೆ ಕುರ್‌ಆನ್ ಮತ್ತು ಸುನ್ನತ್‌ಗೆ ಬದ್ಧವಾಗಿಲ್ಲವೆಂದಾದರೆ ಅದನ್ನು ಯಾವುದೇ ರೀತಿಯಲ್ಲೂ ಪರಿಗಣಿಸಬೇಕಿಲ್ಲ ಎಂಬುದು ಕೂಡ ಇಲ್ಲಿ ಗಮನಾರ್ಹವಾಗಿದೆ. ಅಲ್ಲಾಹನ ಸಂದೇಶವಾಹಕರುﷺ ಹೇಳಿರುವುದಾಗಿ ವರದಿಯಾಗಿದೆ. 'ನಿಮಗಿಂತ ಮುಂಚೆ ಬಂದ ಗ್ರಂಥದ ಜನರು ಎಪ್ಪತ್ತೆರಡು ವಿಭಾಗಗಳಾಗಿ ಬೇರ್ಪಟ್ಟು ಹೋದರು ಮತ್ತು ಈ ಸಮುದಾಯ ಎಪ್ಪತ್ತಮೂರು ವಿಭಾಗಗಳಾಗಿ ಬೇರ್ಪಡಲಿದೆ. ಎಪ್ಪತ್ತೆರಡು ವಿಭಾಗಗಳೂ ನರಕದಲ್ಲಾಗಿದೆ. ಆದರೆ ಒಂದು ವಿಭಾಗ ಸ್ವರ್ಗ ಪ್ರವೇಶಿಸಲಿದೆ. ಅದು ಜಮಾ'ಅ (ಅಹ್ಲು ಸುನ್ನಃ) ಆಗಿದೆ." (ಸಹೀಹ್ ಸುನನ್ ಅಬೂದಾವೂದ್ 3/869, ನಂಬ್ರ 3842)

# 5 ಶೈತಾನನ್ನು ಎದುರಿಸುವುದು

ನೀವು ನಮಾಝುನ್ನು ನಿರ್ವಹಿಸುತ್ತಿರುವಾಗ ಶೈತಾನನು ಬಂದು 'ನೀನು ತೋರ್ಪಡಿಕೆಗಾಗಿ ನಮಾಝ್ ನಿರ್ವಹಿಸುತ್ತಿದ್ದಿ ಆದುದರಿಂದ ನಿನ್ನ ನಮಾಝುನ್ನು ಸಂಕ್ಷಿಪ್ತಗೊಳಿಸು' ಎಂದು ಹೇಳಿದರೆ (ಪಿಸುಗುಟ್ಟಿದರೆ) ನೀನು ನಿನ್ನ ನಮಾಝುನ್ನು ದೀರ್ಘಗೊಳಿಸು. ಆತ(ಶೈತಾನ್) 'ನಿನ್ನ ವುದೂಹ್ (ಅಂಗಶುದ್ದಿ) ನಿರರ್ಥಕವಾಗಿದೆ, ಅದು ಅಸಿಂಧುವಾಗಿದೆ' ಎಂದು ಪಿಸುಗುಟ್ಟಿದರೆ ಹೇಳು, 'ನೀನು (ಶೈತಾನ್) ಸುಳ್ಳು ಹೇಳುತ್ತಿರುವೆ'ಯೆಂದು ಮತ್ತು ಆತ ನಿನ್ನಲ್ಲಿ ಬಂದು 'ಮರಣ ಹೊಂದಿದವರು ನಿನ್ನನ್ನು ಆಲಿಸಬಲ್ಲರು ಮತ್ತು ನಿನಗೆ ಉಪಕಾರ ಅಥವಾ ಹಾನಿಯನ್ನು ಮಾಡಬಲ್ಲರು' ಎಂದು ಹೇಳಿದರೆ ನೀನು ಅವನೊಂದಿಗೆ ಹೇಳು, 'ನೀನು ಸುಳ್ಳಾಡುತ್ತಿರುವೆ.'

ಇನ್ನು ನಾವು ಯಾವುದಾದರೊಂದು ಕಾರ್ಯವನ್ನು ಮಾಡುವಾಗ ಅಥವಾ ಒಂದು ನಿರ್ದಿಷ್ಟ ಪಥದಲ್ಲಿ ಸಾಗುವಾಗ ಅದು ಶೈತಾನನ ಗುಣಲಕ್ಷಣಗಳನ್ನು ಹೊಂದಿದ ಕಾರ್ಯವಾಗಿವೆ ಅಥವಾ ಪಥವಾಗಿದೆ ಎಂದು ನಾವು ಅರಿತರೆ ಅದಕ್ಕೆ ಭಿನ್ನವಾದುದನ್ನು ಅನುಸರಿಸುವ ಮೂಲಕ ಶೈತಾನನ್ನು ವಿರೋಧಿಸಿ ಸುನ್ನತನ್ನು (ಪ್ರವಾದಿ ಚರ್ಯೆಯನ್ನು) ಪಾಲಿಸಬೇಕಾಗಿದೆ. ಉದಾಹರಣೆಗೆ: ಪ್ರವಾದಿ ﷺ ಹೇಳಿದರು, "ನಿಮ್ಮ ಪೈಕಿ ಯಾರಾದರೂ ಆಹಾರ ಸೇವಿಸುವುದಿದ್ದರೆ ಆತ ತನ್ನ ಬಲಗೈಯಿಂದ ಆಹಾರವನ್ನು ಸೇವಿಸಲಿ ಮತ್ತು ಆತನು ಕುಡಿಯುವಾಗ ತನ್ನ ಬಲಗೈಯಿಂದ ಕುಡಿಯಲಿ. ಯಾಕೆಂದರೆ ಶೈತಾನನು ಎಡಗೈಯಿಂದ ತಿನ್ನುತ್ತಾನೆ ಮತ್ತು ಎಡಗೈಯ ಮೂಲಕವೇ ಕುಡಿಯುತ್ತಾನೆ." (ಸಹೀಹ್ ಮುಸ್ಲಿಂ) "ಮದ್ಯಾಹ್ನದ ವೇಳೆ ನಸುನಿದ್ದೆಯನ್ನು ಮಾಡಿರಿ. ಯಾಕೆಂದರೆ ಶಯಾತೀನ್‌ಗಳು (ಮಧ್ಯಾಹ್ನ) ನಸುನಿದ್ದೆಯನ್ನು ಮಾಡುವುದಿಲ್ಲ." (ಸಹೀಹ್ ಅಲ್ ಜಾಮಿಈ 4/147)

# 6 ಶೈತಾನನ ಕುತಂತ್ರಗಳನ್ನು ಅರಿತು ಆತನನ್ನು ಪರಾಭವಗೊಳಿಸುವ ವಿಧಾನಗಳು

ಕುರ್‌ಆನ್ ಮತ್ತು ಸುನ್ನತ್‌ಗಳಲ್ಲಿ ಉಲ್ಲೇಖಿಸಲ್ಪಟ್ಟ ಶೈತಾನನ ಕುತಂತ್ರಗಳು ಹಾಗೂ ವಿಶ್ವಾಸಿಗಳ ವಿರುದ್ಧ ಆತನು ನಡೆಸುವ ಒಳ ಸಂಚುಗಳ ಬಗ್ಗೆ ನಾವು ಅರಿಯಬೇಕಾಗಿದೆ. ಉದಾಹರಣೆಗೆ; ಆತನು ಯಾವ ರೀತಿ ಜನರನ್ನು ಪಾಪ ಕೃತ್ಯಗಳತ್ತ ಪ್ರೇರೇಪಿಸುತ್ತಾನೆ, ವ್ಯಕ್ತಿಯನ್ನು ಆತನ ನಮಾಝ್ ಹಾಗೂ ಸತ್ಕರ್ಮಗಳಿಂದ ಹೇಗೆ ಬೇರೆ ದಿಕ್ಕಿಗೆ ತಿರುಗಿಸುತ್ತಾನೆ, ಒಬ್ಬನಲ್ಲಿ ಆತನ ವುದೂಹ್ (ಅಂಗಸ್ನಾನ) ಅಸಿಂಧುವಾಗಿದೆ ಅಥವಾ ನಿರರ್ಥಕವಾಗಿದೆ ಎಂಬ ಯೋಚನೆಯನ್ನು ಹುಟ್ಟು ಹಾಕಲು ಅವನು ಯಾವ ರೀತಿ ಪ್ರಯತ್ನ ಪಡುತ್ತಾನೆ, ಪತಿ-ಪತ್ನಿಯರ ಮಧ್ಯೆ ಯಾವ ರೀತಿ ವೈಮನಸ್ಸು ನೆಲೆಗೊಳ್ಳುವಂತೆ ಮಾಡುತ್ತಾನೆ, ವ್ಯಕ್ತಿಯ ಮನಸ್ಸಿನೊಳಗೆ 'ಇವುಗಳನ್ನು ಯಾರು ಸೃಷ್ಟಿಸಿದರು?' 'ಅವುಗಳನ್ನು ಯಾರು ಸೃಷ್ಟಿಸಿದರು?' ಎಂದು ಪಿಸುಗುಟ್ಟುತ್ತಾ ಕೊನೆಗೆ 'ನಿನ್ನ ರಬ್ಬ್ (ಒಡೆಯ) ಅನ್ನು ಯಾರು ಸೃಷ್ಟಿಸಿದರು?' ಎನ್ನುವ ಸಂಶಯವನ್ನು ಕ್ರಮೇಣ ಆತನ ಹೃದಯದಲ್ಲಿ ಅವನು (ಶೈತಾನ್) ಹೇಗೆ ತುಂಬುತ್ತಾನೆ ಮುಂತಾದವುಗಳು.

ಶೈತಾನನ ಈ ಕುತಂತ್ರಗಳನ್ನು ಮತ್ತು ಅವುಗಳಿಗಿರುವ ಪರಿಹಾರವನ್ನು ಗ್ರಹಿಸಿಕೊಳ್ಳುವ ಒಬ್ಬನು ಅಲ್ಲಾಹನ ಸಂದೇಶವಾಹಕರﷺ ಸುನ್ನತನ್ನು (ಚರ್ಯೆಯನ್ನು) ತನ್ನ ಜೀವನದಲ್ಲಿ ಕಾರ್ಯರೂಪಕ್ಕೆ ತರುವ ಮೂಲಕ ಶೈತಾನ್ ಮತ್ತು ಆತನ ದುಷ್ಪ್ರೇರಣೆಗಳನ್ನು ಪರಿಣಾಮಕಾರಿಯಾಗಿ ವಜಾಗೊಳಿಸಬಹುದು.

# 7 ಪಶ್ಚಾತ್ತಾಪಪಡುವುದು ಮತ್ತು ಅಲ್ಲಾಹನಲ್ಲಿ ಕ್ಷಮೆ ಯಾಚಿಸುವುದು

ಸರ್ವಲೋಕಗಳ ಒಡೆಯನಾದ ಅಲ್ಲಾಹನೊಂದಿಗೆ ಶೈತಾನನು ಹೇಳುವ ಸಂದರ್ಭ; 'ಓ ಪ್ರಭುವೆ! ನಿನ್ನ ಮಹಿಮೆಯಾಣೆ, ನಿನ್ನ ದಾಸರ ಆತ್ಮಗಳು ಅವರ ಶರೀರದಲ್ಲಿರುವವರೆಗೂ ನಾನು ಅವರನ್ನು ತಪ್ಪು ದಾರಿಗೆಳೆಯಲು ಪ್ರಯತ್ನಿಸುವೆ.' ಸರ್ವಲೋಕ ಪರಿಪಾಲಕನಾದ ಪ್ರಭು ಹೇಳುತ್ತಾನೆ, 'ನನ್ನ ಭವ್ಯತೆ ಹಾಗೂ ಅಧಿಪತ್ಯದ ಆಣೆ, ಅವರು ನನ್ನಲ್ಲಿ ಕ್ಷಮೆಯಾಚನೆ ನಡೆಸುವವರೆಗೂ ನಾನು ಅವರನ್ನು ಕ್ಷಮಿಸುವುದನ್ನು ಮುಂದುವರಿಸುತ್ತೇನೆ.'(ಸಹೀಹ್ ಅಲ್ ಜಾಮಿಈ 2/32)

ಈ ಪ್ರಕಾರ ಶೈತಾನನ ಪುಸಲಾಯಿಸುವಿಕೆಗೆ ಬಲಿಯಾದಾಗಲೆಲ್ಲಾ ಕ್ಷಿಪ್ರಗತಿಯಲ್ಲಿ ಪಶ್ಚಾತ್ತಾಪಪಡುವ ಮೂಲಕ ಮತ್ತು ತಡಮಾಡದೆ ಪಾಪಪ್ರಜ್ಞೆಯೊಂದಿಗೆ ಅಲ್ಲಾಹನತ್ತ ತಿರುಗುವ ಮೂಲಕ ಖಂಡಿತವಾಗಿಯೂ ಒಬ್ಬನು ಶೈತಾನನ ತಂತ್ರಗಳನ್ನು ಬುಡಮೇಲುಗೊಳಿಸಬಹುದು.

ಆದಮ್ عليه السلام ರವರು ಅಲ್ಲಾಹನ ಆಜ್ಞೆಯನ್ನು ಮೀರಿದ್ದರು ಮತ್ತು ಶೈತಾನನೂ ಅದನ್ನೇ ಮಾಡಿದ್ದನು. ಆದರೆ ಆದಮ್ عليه السلام ರವರು ಅಲ್ಲಾಹನಲ್ಲಿ ಪಶ್ಚಾತ್ತಾಪ ಪಟ್ಟುಕೊಂಡು ಕ್ಷಮೆಯಾಚನೆಯನ್ನು ಕೋರಿದರು ಮತ್ತು ಅಲ್ಲಾಹು ಅವರನ್ನು ಮನ್ನಿಸಿದನು. ಆದರೆ ಇಬ್ಲೀಸನ್ನು ಶಪಿಸುತ್ತಾ ಅಲ್ಲಾಹು ಶಾಶ್ವತವಾದ ನರಕವನ್ನು ಅವನಿಗೆ ವಿಧಿಸಿಬಿಟ್ಟನು. ಎರಡು ಅಪರಾಧಗಳ ನಡುವಿನ ವ್ಯತ್ಯಾಸ ನಿಸ್ಸಂಶಯವಾಗಿಯೂ ಸುವ್ಯಕ್ತವಾಗಿದೆ.

ಉನ್ನತನಾದ ಅಲ್ಲಾಹನ ಆಜ್ಞೆಯನ್ನು (ನಿಷೇಧಿತ ವೃಕ್ಷದತ್ತ ಸುಳಿಯಬಾರದೆಂಬ) ಉಲ್ಲಂಘಿಸಿದ ತರುವಾಯ ಆದಮ್ عليه السلام ಮತ್ತು ಹವ್ವಾ ದಂಪತಿಗಳು ತಮ್ಮ (ಅಪರಾಧ) ಕೃತ್ಯವನ್ನು ನ್ಯಾಯೀಕರಿಸುತ್ತಾ ಹಠಮಾರಿತನವನ್ನು ಪ್ರದರ್ಶಿಸಲಿಲ್ಲ. ಬದಲಾಗಿ ಸ್ವರ್ಗದಲ್ಲಿರುವ ನಿಷೇಧಿತ ಮರದಿಂದ ತಿನ್ನುವ ಮೂಲಕ ನಾವು ಪಾಪವೊಂದನ್ನು ಎಸಗಿದ್ದೇವೆ ಎಂದು ಮನದಟ್ಟಾದ ಬಳಿಕ ವಿಳಂಬಿಸದೆ ತಮ್ಮ ಪಾಪವನ್ನು ಒಪ್ಪಿಕೊಳ್ಳುತ್ತಾ ಅವರು ಅಲ್ಲಾಹನಲ್ಲಿ ಕ್ಷಮೆಯಾಚನೆ ಹಾಗೂ ಕರುಣೆಯನ್ನು ಕೋರುತ್ತಾ ಹೇಳಿದರು;

"ನಮ್ಮ ಪ್ರಭುವೇ! ನಾವು ನಮ್ಮ ಮೇಲೆಯೇ ಅಕ್ರಮವನ್ನೆಸೆಗಿಕೊಂಡೆವು. ನೀನು ನಮ್ಮನ್ನು ಮನ್ನಿಸದಿದ್ದರೆ ಮತ್ತು ನಮ್ಮ ಮೇಲೆ ನಿನ್ನ ಕರುಣೆಯನ್ನು ತೋರದಿದ್ದರೆ ನಿಶ್ಚಯವಾಗಿಯೂ ನಾವು ನಷ್ಟ ಹೊಂದಿದವರ ಸಾಲಿಗೆ ಸೇರುವೆವು." (ಸೂರ ಅಲ್-ಅಅ್‌ರಾಫ್: 23)

"ಆದಮ್ ತನ್ನ ಪ್ರಭುವಿನಿಂದ ಕೆಲವು ವಚನಗಳನ್ನು ಸ್ವೀಕರಿಸಿದರು. (ಆ ವಚನಗಳ ಮೂಲಕ ಪಶ್ಚಾತ್ತಾಪ ಪಟ್ಟರು) (ಆದಮರಿಗೆ) ಅಲ್ಲಾಹು ಕ್ಷಮೆಯನ್ನು ನೀಡಿದನು. ಅವನು ಅತ್ಯಂತ ಕ್ಷಮಿಸುವವನೂ (ಪಶ್ಚಾತ್ತಾಪ ಸ್ವೀಕರಿಸುವವನು) ಮತ್ತು ಕರುಣಾನಿಧಿಯೂ ಆಗಿದ್ದಾನೆ." (ಸೂರ ಅಲ್ ಬಕರಾ: 37)

ಆದರೆ ಇಬ್ಲೀಸ್ ಎಷ್ಟೇ ಆದರೂ ತನ್ನ ತಪ್ಪನ್ನು ಒಪ್ಪಿ ಪಾಪ ನಿವೇದನೆಯನ್ನು ಮಾಡಿಕೊಳ್ಳದೆ ಮೊಂಡುತನವನ್ನು ಪ್ರದರ್ಶಿಸುತ್ತಾ ಅದರಲ್ಲೇ ನೆಲೆನಿಂತನು. ತನ್ನ ನಿಷೇಧ ವಚನದಲ್ಲಿ ಆತ ದೃಢವಾಗಿ ನೆಲೆನಿಂತನು ಮತ್ತು ತನ್ನ ಪಾಪಕೃತ್ಯವನ್ನು ನ್ಯಾಯೀಕರಿಸುವ ಸಲುವಾಗಿ ಅಲ್ಲಾಹನಲ್ಲಿ ತರ್ಕವಿತರ್ಕಗಳನ್ನು ಮುಂದಿಟ್ಟನು. ವಿಷಯದ ಕ್ಲಿಷ್ಟಾಂಶವೇನೆಂದರೆ, ವ್ಯಕ್ತಿಯೋರ್ವನು ಅಲ್ಲಾಹನಿಂದ ನಿರ್ಧರಿಸಲ್ಪಟ್ಟ ಮಿತಿಯೊಂದನ್ನು ಅತಿಕ್ರಮಿಸಿದರೆ ಅಥವಾ ಉಲ್ಲಂಘಿಸಿದರೆ ಆತ ತಾನು ಗೈಯ್ದ ಕುಕೃತ್ಯ ಮತ್ತು ಪಾಪವನ್ನು ಒಪ್ಪಿಕೊಳ್ಳಬೇಕೇ ವಿನಹ ಆ ತಪ್ಪನ್ನು ನ್ಯಾಯೀಕರಿಸಬಾರದು. ಉದಾಹರಣೆಗೆ; ರಿಬಾ (ಬಡ್ಡಿ) ವ್ಯವಹಾರದಲ್ಲೇರ್ಪಟ್ಟವರಂತೆ. ಅವರು (ಬಡ್ಡಿ ವ್ಯವಹಾರ ನಡೆಸುವವರು) ತಮ್ಮ ಪಾಪವನ್ನು ನ್ಯಾಯೀಕರಿಸಲು ಹಲವು ರೀತಿಯ ಕುತರ್ಕಗಳನ್ನು ಮುಂದಿಡುತ್ತಾರೆ. ಅವುಗಳೇನೆಂದರೆ; ಜಗತ್ತು ತುಂಬಾ ಬದಲಾಗಿದೆ, ಇಂದು ಪ್ರತಿಯೊಬ್ಬರೂ ಬಡ್ಡಿ ವ್ಯವಹಾರವನ್ನು ನಡೆಸುತ್ತಾರೆ. **Fixed Intrest** (ಸ್ಥಿರ ಬಡ್ಡಿ) ಇಂದು ಜಗತ್ತಿನ ವ್ಯವಸ್ಥೆಯ ಒಂದು ಭಾಗವಾಗಿದೆ ಮತ್ತು ರಿಬಾ (ಬಡ್ಡಿ) ವ್ಯವಹಾರದಲ್ಲಿ ಪಾಲ್ಗೊಳ್ಳುವುದರಲ್ಲಿ ಯಾವುದೇ ತಪ್ಪಿಲ್ಲ, ಮುಂತಾದ ಕುತರ್ಕಗಳು.

ನಮಗೆ ಅವರೊಂದಿಗೆ ಹೇಳಲಿಕ್ಕಿರುವುದು ಇಷ್ಟೇ, "ನೀವು ನಿಮ್ಮ ತಪ್ಪನ್ನು ಸಮರ್ಥಿಸಲು ಪ್ರಯತ್ನಿಸಬೇಡಿ ಮತ್ತು ದರ್ಪ ತೋರಬೇಡಿ. ಬಡ್ಡಿ ಹರಾಮ್ (ನಿಷಿದ್ಧ) ಅಲ್ಲವೆಂದು ಹೇಳಬೇಡಿ. ಬದಲಾಗಿ ವಿನೀತರಾಗಿ ಅಲ್ಲಾಹನಲ್ಲಿ ನಿಮ್ಮ ಪಾಪಗಳಿಗಾಗಿ ಕ್ಷಮೆಯಾಚಿಸಿರಿ ಮತ್ತು ಆತನ ಆಜ್ಞೆಗಳನ್ನು ಮಾನ್ಯ ಮಾಡುವಲ್ಲಿ ನೀವು ತೋರಿದ ದುರ್ಬಲತೆ ಹಾಗೂ ನಿರ್ಲಕ್ಷತೆಗಾಗಿ ಆತನಲ್ಲಿ ತಪ್ಪೊಪ್ಪಿಕೊಳ್ಳಿ. ಏಕೆಂದರೆ ಇದು ನಿಮ್ಮನ್ನು ಈಮಾನಿನ ವೃತ್ತದೊಳಗಿಡುತ್ತದೆ. ಆದರೆ ನೀವು ಅಲ್ಲಾಹನ ಆಜ್ಞೆಯನ್ನು ತಿರಸ್ಕರಿಸುತ್ತಾ ರಿಬಾ (ಬಡ್ಡಿ) ಒಂದು ಅಪರಾಧವಲ್ಲವೆಂಬ ನಿಮ್ಮ ವಾದವನ್ನು ಮುಂದುವರಿಸಿದರೆ ನೀವು ಇಸ್ಲಾಮಿನ ಸರಹದ್ದಿನಿಂದ ಹೊರಹೋಗುವಿರಿ ಮತ್ತು ಕುಫ್ರ್ (ಅವಿಶ್ವಾಸ) ಕೈಗೊಂಡವರಾಗುವಿರಿ. ನಾವು ಈ ನಿಟ್ಟಿನಲ್ಲಿ ಅಲ್ಲಾಹನಲ್ಲಿ ರಕ್ಷೆಯನ್ನು ಬೇಡುತ್ತೇವೆ."

ಅಬೂ ಉಮಾಮರವರಿಂದ ﷺ ವರದಿ. ಪ್ರವಾದಿ ﷺ ಹೇಳಿದರು, "ಇಬ್ಲೀಸನು ಭೂಮಿಗೆ ಇಳಿಸಲ್ಪಟ್ಟಾಗ (ಕಳುಹಿಸಲ್ಪಟ್ಟಾಗ) ಆತ ಹೇಳಿದನು,
'ಓ ಪ್ರಭುವೇ! ನೀನು ನನ್ನನ್ನು ಭೂಮಿಗಿಳಿಯುವಂತೆ ಮಾಡಿದೆ ಮತ್ತು ನನ್ನನ್ನು ಬಹಿಷ್ಕೃತನನ್ನಾಗಿಯೂ ಮಾಡಿದೆ. ನನಗೊಂದು ಮನೆಯನ್ನು ನಿಶ್ಚಯಿಸಿಕೊಡು.'
ಅಲ್ಲಾಹನು ಹೇಳುತ್ತಾನೆ, 'ಶೌಚಾಲಯಗಳಾಗಿವೆ ನಿನ್ನ ಮನೆ.'
ಶೈತಾನನು ಹೇಳುತ್ತಾನೆ, 'ನನಗಾಗಿ ಸಭೆಯೊಂದನ್ನು (ಕೂಡುವ ಸ್ಥಳ) ನಿರ್ಧರಿಸಿ ಕೊಡು.'
ಅಲ್ಲಾಹು ಹೇಳುತ್ತಾನೆ, 'ಮಾರುಕಟ್ಟೆಗಳು ಹಾಗೂ ಅಂಗಡಿ ಮುಂಗಟ್ಟುಗಳು.'
ಶೈತಾನನು ಪುನಃ ಕೇಳುತ್ತಾನೆ, 'ನನಗೆ ಆಹಾರವನ್ನು ನಿರ್ಧರಿಸಿಕೊಡು'.
ಅಲ್ಲಾಹು ಹೇಳುತ್ತಾನೆ, 'ಅಲ್ಲಾಹನ ನಾಮವನ್ನು ಉಚ್ಚರಿಸದ ಎಲ್ಲಾ ಆಹಾರಗಳು.'
ಆತ ಕೇಳುತ್ತಾನೆ, 'ಪಾನೀಯವೊಂದನ್ನು ನನಗೆ ನಿಶ್ಚಯಿಸಿಕೊಡು.'
ಅಲ್ಲಾಹು ಉತ್ತರಿಸಿದ, 'ಅಮಲು ಪದಾರ್ಥಗಳು.'
ಆತ ಕೇಳಿದ, 'ನನಗೆ ಘೋಷಿಸುವವನೊಬ್ಬ (ಉದ್ಘೋಷಕ)ನನ್ನು ನಿಶ್ಚಯಿಸಿಕೊಡು.'
ಅಲ್ಲಾಹು ಹೇಳಿದ, 'ಸಂಗೀತೋಪಕರಣಗಳು.'
ಅವನು ಕೇಳಿದ, 'ನನಗಾಗಿ ಕುರ್‌ಆನ್ ಒಂದನ್ನು ಕೊಡು.'
ಅಲ್ಲಾಹು ಉತ್ತರಿಸುತ್ತಾನೆ, 'ಕವಿತೆಗಳು'
ಆತ ಹೇಳಿದ, 'ಬರವಣಿಗೆಯೊಂದನ್ನು ನನಗೆ ನಿರ್ಧರಿಸಿಕೊಡು.'
ಅಲ್ಲಾಹು ಹೇಳಿದ, 'ಚಿತ್ರರಚನೆ'
ಶೈತಾನ್ ಕೇಳಿದನು, 'ಪ್ರವಚನ (ಸಂಭಾಷಣೆ)ವೊಂದನ್ನು ನನಗಾಗಿ ನಿಶ್ಚಯಿಸು.
ಅಲ್ಲಾಹು ಹೇಳಿದ, 'ಸುಳ್ಳುಗಾರಿಕೆ'
ನಂತರ ಆತ ಕೇಳಿದ, 'ದೂತನೊಬ್ಬನನ್ನು ನನಗೆ ನಿಶ್ಚಯಿಸಿ ಕೊಡು.'
ಅಲ್ಲಾಹು ಹೇಳುತ್ತಾನೆ, 'ಭವಿಷ್ಯ ಮತ್ತು ಕಣಿ ಹೇಳುವವರು.'
ಶೈತಾನನು ಕೇಳುತ್ತಾನೆ, 'ಯುಕ್ತಿಯನ್ನು ಹೂಡಲು (ಬೇಟೆಯಾಡಲು) ಬೇಟೆಯ ಉಪಕರಣವೊಂದನ್ನು ನನಗೆ ನಿರ್ಧರಿಸಿಕೊಡು.'
ಅಲ್ಲಾಹು ಹೇಳುವನು, 'ಸ್ತ್ರೀ'. (ಮುಅ'ಜಮ್ ಅಲ್-ಕಬೀರ್)
ಶೈತಾನನ ಎಲ್ಲಾ ರೀತಿಯ ಕುತಂತ್ರಗಳಿಂದ ಸರ್ವಶಕ್ತನಾದ ಅಲ್ಲಾಹನು ನಮ್ಮೆಲ್ಲರನ್ನು ರಕ್ಷಿಸಲಿ.
ಅಲ್ಲಾಹನ ಅನುಗ್ರಹ ಮತ್ತು ರಕ್ಷೆ ಅವನ ಪ್ರವಾದಿ ಮುಹಮ್ಮದ್‌ರವರ ﷺ ಮೇಲೆ ಸದಾ ವರ್ಷಿಸುತ್ತಿರಲಿ